
ರಂಜನೆ ಬೋಧನೆ ಪ್ರಬೋಧನೆ

ಲಂಕೇಶ್

07 ಜೂನ್ 2017 ಪುಟ 16 ರೂ. 15/-

ಉತ್ತರಪ್ರದೇಶ ಸ್ವಾಭಿಮಾನಿ ದಲಿತರ ಸವಾಲು




ರಾಜಕೀಯ ಮರ್ಮ



ಯಕ್ಷಗಾನಕ್ಕೆ ಕೇಸರಿ ಕಸರತ್ತು






ವರ್ಷ ಮೂರು

8/100




ಚಳ್ಳಕೆರೆ ಜೆಡಿಎಸ್‌ಗೆ ಹಾರ್ತಾರಾ ಶಶಿಕುಮಾರ್?

ಮೈಸೂರು ಗೊಣಗಾಟದ ಹಕೀಕತ್ತು



ಅಂಚಿನಿಂದ....



ಡಾ.ವಾಸು ಎಚ್.ವಿ.

ಜನರು ತೋರುತ್ತಿರುವ ಆಸಕ್ತಿಯಲ್ಲಿ ಅರ್ಧದಷ್ಟು ಸರ್ಕಾರಕ್ಕಿದ್ದಿದ್ದ
ಬರದಲ್ಲಿ ಮಾಡಬಹುದಾದ ಕೆಲ

ಕರ್ನಾಟಕ ರಾಜ್ಯವು ಎದುರಿಸಿದ ಬರ ಪರಿಸ್ಥಿತಿಯ ತೀವ್ರತೆಯು ಕಡಿಮೆಯಾಗುವಂತೆ ಮಳೆ ಬೀಳುತ್ತಿದೆ. ಈ ಸಾರಿಯ ಮುಂಗಾರೂ ಚೆನ್ನಾಗಿರಬಹುದೆಂಬ ಭರವಸೆ ಇದೆ. ಆದರೆ, ಸತತ ಬರವು ಮಾಡಿರುವ ಹಾನಿಯನ್ನು ಈ ಒಂದು ಮಳೆಯು ಕಡಿಮೆ ಮಾಡುತ್ತದೆಯೇ? ಖಂಡಿತಾ ಇಲ್ಲ, ಏಕೆಂದರೆ, ಬರ ಎನ್ನುವುದೇ ಒಳಗಿಂದ ಕೊರೆದು ಟೊಳ್ಳಾಗಿಸುವ ಹುಳದಂತೆ. ಜೊತೆಗೆ ಈ ಸಾರಿ ರೈತರಿಗೆ ಬಂಪರ್ ಬೆಳೆ ಬಂದರೆ, ಬೆಲೆ ಕುಸಿದು ಲಾಭವೂ ಇಲ್ಲದಂತಾಗಬಹುದು.

ಆದರೆ, ಬರ ಬಂದಿರುವ ಸಂದರ್ಭದಲ್ಲೂ ಮಾಡಬಹುದಾದ ಕೆಲವು ಚಟುವಟಿಕೆಗಳು, ಜನರಿಗೆ ಬರದ ತೀವ್ರತೆಯನ್ನು ತಡೆದುಕೊಳ್ಳುವ ಶಕ್ತಿಯನ್ನೂ ನೀಡಬಲ್ಲವು; ಮುಂದಿನ ಸಾರಿ ಹೀಗಾದಾಗ ಅದು ಅಷ್ಟಾಗಿ ತೊಂದರೆ ಕೊಡದಂತೆಯೂ ನೋಡಿಕೊಳ್ಳಬಹುದು. ಕೆರೆಗಳ ಹೂಳೆತ್ತುವುದು ಅಂತಹ ಒಂದು ಪ್ರಮುಖ ಚಟುವಟಿಕೆ. ಹೂಳು ನಮ್ಮ ಕೆರೆಗಳ ಸಂಗ್ರಹಣಾ ಸಾಮರ್ಥ್ಯವನ್ನು ಕುಗ್ಗಿಸಿದೆ. ಹೀಗಾಗಿ ಹೂಳೆತ್ತುವ ಚಟುವಟಿಕೆಯನ್ನು ದೊಡ್ಡ ಪ್ರಮಾಣದಲ್ಲಿ ಹಮ್ಮಿಕೊಂಡಿದ್ದಿದ್ದರೆ, ಬೆಳೆಯಿಲ್ಲದೇ ಸಂಪಾದನೆಯಿಲ್ಲದೇ ಕಷ್ಟದಲ್ಲಿರುವವರಿಗೆ ಉದ್ಯೋಗ ಸಿಗುತ್ತಿತ್ತು, ಕೆರೆ ಮಣ್ಣನ್ನು ರೈತರ ಭೂಮಿಗೆ ಹಾಕುವುದರಿಂದ, ಅದರ ಫಲವತ್ತತೆ ಹೆಚ್ಚಾಗುತ್ತಿತ್ತು.

ಕೆರೆಗಳ ಸಂಗ್ರಹಣಾ ಸಾಮರ್ಥ್ಯ ಹೆಚ್ಚಿ ಅಂತರ್ಜಲದ ಮಟ್ಟ ಏರುತ್ತಿತ್ತು, ಮುಂದಿನ ಬೇಸಿಗೆಯಲ್ಲಿ ಮತ್ತು ಬರ ಪರಿಸ್ಥಿತಿ ತೋರಿದಲ್ಲಿ ತೀವ್ರತೆ ಕಡಿಮೆ ಇರುತ್ತಿತ್ತು. ಇದು ಎಲ್ಲರಿಗೂ ಗೊತ್ತಿರುವ ಸರಳ ಸಂಗತಿ.

ಈ ಸರಳ ಕೆಲಸವನ್ನು ಮಾಡಲು ನಮ್ಮ ಸರ್ಕಾರ ಎಷ್ಟು ಆಸಕ್ತಿ ವಹಿಸಿತು? ಈ ಬಗೆಗಿನ ಅಂಕಿ-ಅಂಶಗಳು ಇಲ್ಲ. ಪತ್ರಿಕಾ ವರದಿಗಳು ಹಾಗೂ ನೇರವಾಗಿ ಸಿಕ್ಕಿರುವ ಮಾಹಿತಿಯನ್ನು ನೋಡಿದರೆ, ದಕ್ಷಿಣ ಕರ್ನಾಟಕದ ಹಲವು ಕಡೆ ಜನರು ತಾವೇ ಮುಂದೆ ಬಂದು ಕೆರೆಗಳ ಹೂಳೆತ್ತುವ ಕೆಲಸವನ್ನು ನಡೆಸಿದ್ದಾರೆ. ವಿಶೇಷವಾಗಿ ಮಂಡ್ಯ ತಾಲೂಕಿನಲ್ಲಿ, ಅಲ್ಲಿನ ತಹಸೀಲ್ದಾರ್ ಮಾರುತಿ ಪ್ರಸನ್ನ ಅವರ ಮುತುವರ್ಜಿಯ ಕಾರಣದಿಂದ ಹಲವಾರು ಕೆರೆಗಳ ಹೂಳೆತ್ತುವಲ್ಲಿ ಸಮುದಾಯವೂ ಭಾಗಿಯಾಗಿದೆ. ಇದು ಯಾವ ಪ್ರಮಾಣಕ್ಕೆ ಹರಡಿದೆ ಎಂದರೆ, ಮುಂದಿನ ಚುನಾವಣೆಯ ಮೇಲೆ ಕಣ್ಣಿಟ್ಟಿರುವ ಆಕಾಂಕ್ಷಿಗಳು ತಾವೂ ಆರ್ಥಿಕ ನೆರವು ನೀಡಿ ಹೂಳೆತ್ತಲು ಸಹಕಾರ ನೀಡಬೇಕಾಗಿ ಬಂದಿತು.


ಹಾಸನದಲ್ಲಿ ಅಲ್ಲಿನ ಕೆಲವು ಸಂಘಟನೆಗಳು ಮತ್ತು ಪ್ರಜ್ಞಾವಂತರು ಸೇರಿ ಹಾಸನ ತಾಲೂಕು, ಕಸಬಾ ಹೋಬಳಿ ದೊಡ್ಡಕೊಂಡಗುಳ ಗ್ರಾಮದಲ್ಲಿ 3 ಕಲ್ಯಾಣಿಗಳು ಮತ್ತು ಒಂದು ಕೆರೆಯ ಹೂಳೆತ್ತಿದ ಕೆಲಸವು ನಡೆಯಿತು. ಇಂತಹುದೇ ಕೆಲಸ ಕಲಬುರಗಿಯಲ್ಲಿ ಮತ್ತು ಮಳವಳ್ಳಿ ತಾಲೂಕಿನಲ್ಲಿ ಜನವಾದಿ ಮಹಿಳಾ ಸಂಘಟನೆಯ ವತಿಯಿಂದ ನರೇಗಾ ಅನುದಾನವನ್ನು ಬಳಸಿಕೊಂಡು ನಡೆದಿದೆ. ಜಾಗೃತ ಮಹಿಳಾ ವೇದಿಕೆಯವರು ಧಾರವಾಡ ಜಿಲ್ಲೆಯಲ್ಲಿ ಇದನ್ನು ದೊಡ್ಡ ಪ್ರಮಾಣದಲ್ಲಿ ಮಾಡಿದ್ದು ಅಷ್ಟು ಬೆಳಕಿಗೆ ಬಂದಿಲ್ಲ. ಪತ್ರಿಕೆಗಳಲ್ಲಿ ರಾಜ್ಯ ಮಟ್ಟದ ಸುದ್ದಿಯಾದವು ಮತ್ತು ಸಾಮಾಜಿಕ ಜಾಲತಾಣದಲ್ಲಿ ಪ್ರಚಾರಕ್ಕೆ ಬಂದ ಕೆಲವು ಚಟುವಟಿಕೆಗಳ ಆಚೆಗೆ ಇನ್ನೂ ಹಲವಾರು ಕಡೆ ಕೆರೆ ಹೂಳೆತ್ತುವ, ರಾಜಕಾಲುವೆಗಳ ತೆರವು ಮತ್ತು ಸ್ವಚ್ಛತಾ ಕಾರ್ಯ ನಡೆಯಿತು. ನೇರವಾಗಿ ಈ ಅಂಕಣಕಾರನಿಗೆ ಪರಿಚಯವಿರುವ ಕೆಲವು ಕಡೆ ಈ ಕೆಲಸವು ಇನ್ನೂ ಜಾರಿಯಲ್ಲಿದೆ.

ಬಹಳ ವಿಶೇಷವಾಗಿ ನಡೆದ ಇನ್ನೊಂದು ಹೂಳೆತ್ತುವ ಕಾರ್ಯ ತುಂಬಾ ಸುದ್ದಿಯಾಗಲಿಲ್ಲ. ಹೊಸಪೇಟೆ ಬಳಿಯಿರುವ ತುಂಗಭದ್ರಾ ಅಣೆಕಟ್ಟಿನಲ್ಲಿ ಮೂರನೇ ಒಂದು ಭಾಗ ಹೂಳಿದೆ ಎಂಬುದು ಬಹಳ ಹಳೆಯ ಸುದ್ದಿ. ಇದನ್ನು ತೆಗೆಯುವುದು ಸಾಧ್ಯವೇ ಇಲ್ಲ; ಅಂತಹ ತಂತ್ರಜ್ಞಾನ ಇಲ್ಲ; ತೆಗೆದ ಮಣ್ಣನ್ನು ಎಲ್ಲಿಗೆ ತೆಗೆದುಕೊಂಡು ಹೋಗಿ ಹಾಕುವುದು? ಇತ್ಯಾದಿ ಮಾತುಗಳು ಬಹುಕಾಲದಿಂದ ಚಾಲ್ತಿಯಲ್ಲಿವೆ. ಆದರೆ, ಈ ವರ್ಷ ನಾವೇ ಹೂಳು ತೆಗೆಯುತ್ತೇವೆ ಎಂದು ಸ್ಥಳೀಯ ರೈತಸಂಘದ ಹಾಗೂ ಮಠಾಧೀಶರ ನೇತೃತ್ವದಲ್ಲಿ ಕೆಲಸ ಪ್ರಾರಂಭವಾಗಿದೆ. ಇದುವರೆಗೆ 80,000 ಟ್ರಾಕ್ಟರ್ ಲೋಡ್ ಮಣ್ಣನ್ನು ತೆಗೆದಿದ್ದಾರೆ. ಇಡೀ ಅಣೆಕಟ್ಟೆಯ ಹೂಳು ತೆಗೆಯುವ ಕೆಲಸ ಈ ಪ್ರಯತ್ನದಿಂದ ಆಗದೇ ಹೋಗಬಹುದು. ಆದರೆ, ಇಷ್ಟು ಇಚ್ಛಾಶಕ್ತಿ ಮತ್ತು ಆಸಕ್ತಿ ನಮ್ಮ ಸರ್ಕಾರಕ್ಕಿದ್ದಿದ್ದರೆ? ಈ ಸಾರಿಯ ಬರಪರಿಸ್ಥಿತಿಯನ್ನು ಒಂದು ಸಕಾರಾತ್ಮಕ ಅವಕಾಶ ಎಂದು ಭಾವಿಸಿ ದೊಡ್ಡ ಮಾರ್ಪಾಡು ತರಬಹುದಿತ್ತು ಅಲ್ಲವೇ?

ಬೀಜದುಂಡೆಗಳ ಮೂಲಕ ಅರಣ್ಯವನ್ನು ದಟ್ಟವಾಗಿಸುವ ಆಂದೋಲನ

ಸಸಿಗಳನ್ನು ನೆಡುವ ಮೂಲಕ ಹಸಿರನ್ನು ಹೆಚ್ಚಿಸುವ ವಿಧಾನ ಎಲ್ಲರಿಗೂ ಗೊತ್ತಿದೆ. ನೆಲದಲ್ಲೇ ಪೋಷಕಾಂಶ, ತೇವಾಂಶ ಮತ್ತು ರಕ್ಷಣೆ ಇರುವ ಪ್ರದೇಶದಲ್ಲಿ ಬೀಜ ಚೆಲ್ಲಲು ಇರುವ ಒಂದು ವಿಧಾನವೇ ಬೀಜದುಂಡೆ ವಿಧಾನ (seedball). ರಾಜ್ಯದ ಹಲವೆಡೆ ಇದು ಆರಂಭವಾಗಿದೆ. ಆದರೆ, ಈಗಾಗಲೇ ಒಂದಷ್ಟು ಹಸಿರಿರುವ, ಕಾಡಿನ ಪ್ರದೇಶದಲ್ಲಿ ಇದು ಹೆಚ್ಚು ಯಶಸ್ವಿಯಾಗುತ್ತದೆ. ಹಾಗಾಗಿ ಸ್ವಲ್ಪವಾದರೂ ಅರಣ್ಯ ಇರುವ ಕಡೆಗಳಲ್ಲಿ ಇದನ್ನು ಮಾಡಲಾಗುತ್ತದೆ. ಉಡುಪಿ, ಮೈಸೂರು, ತುಮಕೂರು, ಚಿಕ್ಕನಾಯಕನಹಳ್ಳಿ ಸೇರಿದಂತೆ ಹಲವಾರು ಕಡೆ ಆಸಕ್ತರು ಈ ಕೆಲಸಕ್ಕೆ ಕೈಹಾಕಿದ್ದಾರೆ. ಮುಂಗಾರು ಆರಂಭವಾಗುವ ಹೊತ್ತಿನಲ್ಲಿ ಇದನ್ನು ಮಾಡುವುದು ಹೆಚ್ಚು ಉಪಯುಕ್ತವಾದುದರಿಂದ ಕಳೆದೊಂದು ತಿಂಗಳಲ್ಲಿ ಇದಕ್ಕೆ ಹಲವೆಡೆ ಚಾಲನೆ ಸಿಕ್ಕಿದೆ.

ಎಲ್ಲಿ ಮರಗಳು ಬೆಳೆಯಬೇಕೆಂದು ಬಯಸುತ್ತೇವೆಯೋ, ಆ ಪ್ರದೇಶಕ್ಕೆ ಸೂಕ್ತವಾದ ಮರಗಳ ಬೀಜಗಳನ್ನು ಗೊಬ್ಬರ,



ಮಣ್ಣು, ಜೀವಾಮೃತದೊಂದಿಗೆ ಮಿಶ್ರಣ ಮಾಡಿ ಉಂಡೆಗಳನ್ನು ತಯಾರಿಸುವುದು; ಅವನ್ನು ನೆರಳಿನಲ್ಲಿ ಒಣಗಿಸಿ ಒಡೆದು ಹೋಗದಂತೆ ನೋಡಿಕೊಳ್ಳುವುದು; ನಂತರ ಈ ಬೀಜಗಳು ಮೊಳಕೆಯೊಡೆದ ನಂತರ ಸ್ವಯಂಪೋಷಣೆ ಮಾಡಬಲ್ಲ ಹದವಾದ ಪ್ರದೇಶದಲ್ಲಿ ಬೀಜದುಂಡೆಗಳನ್ನು ಚೆಲ್ಲುವುದು. ಇದು ವಿಧಾನ.

ಬೇರೆ ಬೇರೆ ಕಡೆಗಳಲ್ಲಿ ನಡೆಯುತ್ತಿದ್ದ ಈ ಕೆಲಸವನ್ನು ನೋಡಿ ಸ್ಫೂರ್ತಿ ಪಡೆದ ಮಳವಳ್ಳಿ ತಾಲೂಕಿನ ಕೆಲವು ಯುವಕರು ಹಲಗೂರನ್ನು ಕೇಂದ್ರವಾಗಿಟ್ಟುಕೊಂಡು 10 ಲಕ್ಷ ಬೀಜದುಂಡೆಗಳನ್ನು ತಯಾರಿಸುವ ಕೆಲಸಕ್ಕೆ ಕೈಹಾಕಿದ್ದಾರೆ. ಜೂನ್ 3ರಿಂದ 10ರವರೆಗೆ ಉಂಡೆ ತಯಾರಿ ನಡೆದರೆ, ಜೂನ್ 18ರ ಭಾನುವಾರದಂದು ನೂರಾರು ಜನರು ಮುತ್ತತ್ತಿ ಕಾಡಿನಲ್ಲಿ ಅರಣ್ಯ ಇಲಾಖೆಯ ಮಾರ್ಗದರ್ಶನದಲ್ಲಿ ಅವನ್ನು ಚೆಲ್ಲುವ ಕೆಲಸ ಮಾಡಲಿದ್ದಾರೆ.

ಇದುವರೆಗೆ ಹೊಸದಾಗಿ ಅರಣ್ಯ ಬೆಳೆಸುವುದೆಂದರೆ, ಏಕರೂಪದ ಕೆಲವು ಅಡ್ಡ ಪರಿಣಾಮಗಳನ್ನೂ ಹೊಂದಿರುವ ನೀಲಗಿರಿ, ಅಕೇಶಿಯಾ ತೋಪುಗಳನ್ನು ಬೆಳೆಸುವುದು ಒಂದು ವಿಧಾನವಾಗಿತ್ತು. ಇರುವ ಅರಣ್ಯಕ್ಕೆ ತೊಂದರೆ ಕೊಡದಿದ್ದರೆ ಸಾಕು, ಅದೇ ಬೆಳೆದುಕೊಳ್ಳುತ್ತದೆ ಎಂಬುದೇನೋ ನಿಜ. ಆದರೆ, ಹಾಗೆ ಬಿಡುವುದಿಲ್ಲವಲ್ಲಾ? ಜೊತೆಗೆ, ಯಾವ ಪ್ರಮಾಣದಲ್ಲಿ ಅರಣ್ಯ ನಾಶವಾಗಿದೆ ಎಂದರೆ, ಪ್ರಜ್ಞಾಪೂರ್ವಕವಾಗಿ ಅದನ್ನು ವಿಸ್ತರಿಸ
ಕೈ ಹಾಕದಿದ್ದರೆ ಉಳಿಗಾಲವಿಲ್ಲ.

ಹಲಗೂರಿನ ಗೆಳೆಯರ ಉತ್ಸಾಹದ ನಡೆ
ಮದ್ದೂರುಗಳಲ್ಲೂ ಪೂರಕವಾಗಿ ಸ್ಪಂದಿಸುವ ಕ
ಜನರು ಸಕಾರಾತ್ಮಕವಾಗಿ ಸ್ಪಂದಿಸುತ್ತಿದ್ದಾರೆ. ವಿವಿ
ನೆರವುಗಳು ವಿವಿಧೆಡೆಗಳಿಂದ ಹರಿದುಬರುತ್ತಿ
ಇದೇ ರೀತಿಯಲ್ಲಿ ಉಳಿದೆಡೆಗಳಲ್ಲೂ ಆಗ
ಹಾಗಾಗಿಯೇ ಇಂತಹ ಕೆಲಸಗಳಲ್ಲಿ ತೊಡಗಿ
ಎಲ್ಲರೂ ಉತ್ಸಾಹದಿಂದ ಇದ್ದಾರೆ.

ಸರ್ಕಾರವೇನು ಮಾಡುತ್ತಿದೆ? ಅರಣ್ಯ
ಸಾಮಾನ್ಯವಾಗಿ ಹಾಕಿಕೊಳ್ಳುವ ಅದೇ ಯೋ
ದೊಡ್ಡ ಪ್ರಮಾಣದಲ್ಲಿ ಏನಾದರೂ ನಡೆಯು
ಕಾಣುತ್ತಿಲ್ಲ.

ಸರ್ಕಾರೀ ಶಾಲೆಗಳ ಸಬಲೀಕ

ಇದೇ ಮಾದರಿಯ ಇನ್ನೊಂದು ಕೆಲಸ
ಶಾಲೆಗಳ ಸಬಲೀಕರಣದ್ದು. ಇದೇ ಅಂಕಣದ
ಸಾರಿ ಅದರ ಪ್ರಸ್ತಾಪವಾಗಿರುವುದರಿಂದ
ಹೋಗುವುದಿಲ್ಲ. ಆದರೆ ಯಾವ ರಚನಾತ್ಮಕ
ಒಂದು ಟ್ರೆಂಡ್ ಆಗಿ ಬೆಳೆಯುತ್ತಿದೆ ಎಂದು
ಲಾಗಿತ್ತೋ, ಅದು ಒಂದು ಟ್ರೆಂಡ್ ಆಗಿ
ಯುತ್ತಿದೆ. ಮಕ್ಕಳ ಮನೆಯ ಹೆಸರಿನಲ್ಲಿ ಪ್ರಾಥಮಿ
ಶಾಲೆಗಳನ್ನು ತೆರೆಯುವ ಪ್ರಯೋಗವು ಆರಂಭ
ಇಲ್ಲಿ ಪ್ರಸ್ತಾಪಿಸಲಾಗಿತ್ತು. ಇಂದು ರಾಜ್ಯದ
ಮುನ್ನೂರು ಶಾಲೆಗಳಲ್ಲಿ ಮಕ್ಕಳ ಮನೆ/ಪ್ರಾಥಮಿ
ಶಾಲೆಗಳು ನಡೆಯುತ್ತಿವೆ.

ತಾವೇ ನೇರವಾಗಿ ಭಾಗಿಯಾಗಿ ಶಾಲೆಗಳ
ನಡೆಸುತ್ತಿರುವ ನೈತಿಕ ಬಲದೊಂದಿಗೆ, ಸಮಾ
ಹೋರಾಟಗಾರರು ಮುಖ್ಯಮಂತ್ರಿಯ
ಒಳಗೊಂಡಂತೆ ಹಲವು ಅಧಿಕಾರಸ್ಥರ ಮುಂದೆ
ಇಟ್ಟಿದ್ದಾರೆ. ಪ್ರತಿಭಟನೆಗಳನ್ನು ಮಾಡಿದ್ದಾರೆ. ಬಹ
ನಂತರ ಶಿಕ್ಷಣ ಸಚಿವರು 'ಸರ್ಕಾರವೇ ಪ್ರಾಥಮಿ
ಶಾಲೆಗಳನ್ನು ಆರಂಭಿಸುತ್ತದೆ' ಎಂಬ ಕ
ಹೇಳಿಕೆಯನ್ನು ನೀಡುವುದರಾಚೆಗೆ ಏನನ್ನೂ

ಕನ್ನಡದ ಕುರಿತು, ಸರ್ಕಾರೀ ಶಾಲೆಗಳ ಕು
ಮತ್ತು ಬದ್ಧತೆ ಹೊಂದಿರುವ ಕನ್ನಡ ಅಭಿವೃದ್ಧಿ
ಅಧ್ಯಕ್ಷರಾದ ಎಸ್.ಜಿ.ಸಿದ್ದರಾಮಯ್ಯನವರು
ಹೇಳಿಕೆಯೂ ಸಹ ಸರ್ಕಾರೀ ಶಾಲೆಗಳ ವಿರು
ಮಾಡುತ್ತಿದೆ. ಅದರಿಂದ ಆಗಿರುವ ಹ
ಸರಿಪಡಿಸಲು ಅವರೂ ಮುಂದಾಗದಿರುವು
ಹೆಚ್ಚಿಸಿದೆ.

ಯಾರ ಹೊಣೆ?

ಎನ್.ಜಿ.ಓ.ಗಳು, ಮಠಾಧೀಶರು, ಸಂ
ರೋಟರಿ ಲಯನ್ಸ್ ಕ್ಲಬ್‌ಗಳು, ಕೋಟಗ
ಹೊಡೆದ 'ಸಮಾಜ ಸೇವಕರು' - ಇಂಥವ
ರಚನಾತ್ಮಕ ಕೆಲಸಗಳಲ್ಲಿ ನೇರವಾಗಿ ಅಥವಾ
ಪಾಲ್ಗೊಳ್ಳುವುದು ಕಂಡುಬರುತ್ತದೆ. ಸಾಮಾಜಿಕ
ಕೆಲಸಗಳಿಂದ ವ್ಯಕ್ತಿಗತ ಲಾಭವನ್ನು ನಿರೀ
ಚುನಾವಣೆಗಳಲ್ಲಿ ಲಾಭ ಮಾಡಿಕೊಳ್ಳುವುದು
ದೀನರನ್ನಾಗಿಸಿ ತಾವು ದಾನಿಗಳ ಸ್ಥಾನದಲ್ಲಿ
ಈಗಾಗಲೇ ಸಮಾಜದಲ್ಲಿ ಇರುವ ಜಾತಿ, ಧರ್ಮ
ಅಸಮಾನತೆಗಳು ಮುಂದುವರೆಯುವಂತೆ ಮ
ವುದು, ಅಪಾಯಕಾರಿ ಕೋಮುವಾದೀ ಹ
ಸಾಮಾಜಿಕ ನೆಲೆಗಳನ್ನು ಗಟ್ಟಿಗೊಳಿಸುವುದು
ಅದರಿಂದ ಆಗುತ್ತದೆ. ಸಮಾಜದಲ್ಲಿ
ಬರಬೇಕೆಂದು ಬಯಸುವವರಲ್ಲಿ ಕೆಲವರು
ಕೆಲಸಗಳೆಂದರೇ ಮೂಗು ಮುರಿಯುವುದು ಈ
ಆಗಿದೆ.

ಈ ಕೆಲಸವನ್ನು ತಾವೇ ಮುಂದೊಡಗಿ
ಕೊಂಡು ಮಾಡದೇ ಮೂಗು ಮುರಿಯುವುದ
ಪ್ರಯೋಜನವೂ ಆಗುವುದಿಲ್ಲ. ರಚನಾತ್ಮಕ
ಅಸಮಾನತೆ ಕಡಿಮೆಯಾಗಿ ಎಲ್ಲರೂ
ನೆಲೆಯಲ್ಲಿ ಸಹಯೋಗಿಗಳಾಗುವುದು ಸಾಧ್ಯವಿ
ಅಲ್ಲಿ ಹಣಕಾಸಿಗೋ ಮತ್ತೊಂದಕ್ಕೋ ಉಳ
ಏರ್ಪಡುತ್ತಿರುತ್ತದೆ. ಇದನ್ನು ಬದಲಿಸು
ಮಾರ್ಗವೆಂದರೆ, ಆ ರಚನಾತ್ಮಕ ಕೆಲಸಗಳನ
ಕೈಗೆತ್ತಿಕೊಂಡು, ಸಮಾಜದ ಬದಲಾವಣೆ
ಬೇಕಾದ ಸಾಮಾಜಿಕ ನೆಲೆಯನ್ನು ರೂಪಿಸ
ಟ್ಟನಲ್ಲಿ ಕೆಲವು ಪ್ರಯತ್ನಗಳು ನಡೆಯಲಾರಂಭಿ
ಯಶಸ್ವಿಗೊಳಿಸುವ

ನಾಯಿಗಳ ಊಟ



ಮನೆಯ ಹೊರಗೆ
ನಾಯಿ ಹಿಂದು ಕಾಯುತ್ತಿದೆ
ಹಸಿದ ಹೊಟ್ಟೆಯಲ್ಲಿ
ತಿಂದಿಗಾಗಿ ತುತ್ತು ಅನ್ನಕ್ಕಾಗಿ
ಜಾತಿ ಕೇಳದೆ ಭೀತಿ ಇಲ್ಲದೆ
ಒಡೆಯರು ಯಾರೋ
ಇವುಗಳಿಗೆ....
ಒಡಲು ಮಾತ್ರ ಒಂದೇ

ತಿಂದುಂಡ ಕಥೆಯ
ಡಂಗುರ ಸಾರುವುದಿಲ್ಲ
ಬೇಕು ಬೇಡಗಳ ಆಯ್ಕೆ
ಮನೆ ಒಡೆಯನಿಗೇ ಎಲ್ಲಾ

ಹಾಕಿದ್ದನ್ನು ನಗುತ ಉಣ್ಣುವ
ನಿಯತ್ತಿನ ನಾಯಿಗಳಿವು...!

ಹಳೆಯ ಮನೆ ಇರಲಿ
ಹೊಲೆಯನ ಮನೆ ಇರಲಿ
ಹೊಲೆತನವಿಲ್ಲ ಹಸಿವಿಗೆ

ಬಡತನವಿಲ್ಲ ಮನಸಿಗೆ
ಊಟದ ನಾಟಕವಿಲ್ಲ
ಎಲ್ಲಿಂದಲೋ ತಂದು ತಿಂದು
ನಾವೆಲ್ಲಾ ಒಂದೆಂದು
ಸುಳ್ಳು ಹೇಳುವುದಿಲ್ಲ

ಪ್ರತೀದಿನ ನಮ್ಮನೆ ಊಟ
ಮೀನೂಟ ಬಾಡೂಟ
ಬೆಳದಿಂಗಳಲ್ಲಿ ಆಗಾಗ
ತಂಗಳೂಟ...!
ಕೇಸರಿ ಬಾತ್ ತಿನ್ನೋದಿಲ್ಲ
ಬೊಗಳುವುದಿಲ್ಲ
ಕಚ್ಚುವುದಿಲ್ಲ
ನಿಯತ್ತಿನ ನಾಯಿಗಳಿವು
ಕಂತ್ರಿ ಬುದ್ಧಿಯಿಲ್ಲ..!

● ವರದ

...ಾವತ್, ರಾವಲ್ ಮತ್ತು ಅರುಂಧತಿ ರಾಯ್

ಕಂಡಹಾಗೆ



• ಗೌರಿ ಲಂಕೇಶ್
editorlankesh@gmail.com


...ೇವತ್ತು ಒಬ್ಬರು ಹೀಗೆ ಟ್ವೀಟ್ ಮಾಡಿದ್ದಾರೆ:


...'ಮೊನ್ನೆ: ಮಾನವ ಹಕ್ಕುಗಳನ್ನು ಕಾಪಾಡಿದ್ದಕ್ಕೆ ...ರರಾಷ್ಟ್ರೀಯ ನ್ಯಾಯಾಲಯಕ್ಕೆ ಜೈ ಜೈ.

...ನ್ನೆ: ಮಾನವ ಹಕ್ಕುಗಳು ಯಾರಿಗೆ ಬೇಕು? ಜೀಪಿಗೆ ...ೀರಿಯೊಬ್ಬನನ್ನು ಮಾನವ ಗುರಾಣಿಯಾಗಿ ಕಟ್ಟಿದ್ದ ...ಜರ್‌ಗೆ ಜೈ ಜೈ.

...ಇವತ್ತು: ಏನು? ಭಾರತ ಮಾನವ ಹಕ್ಕುಗಳನ್ನು ...ಂಘಿಸಿದೆ ಎಂದು ಕೆನಡಾ ಆರೋಪಿಸಿದೆಯಾ? ಎಂತಹ ...ಟ್ಟತನ?"

...ಈ ಟ್ವೀಟ್ ಮೋದಿ ಭಕ್ತರ ಇಬ್ಬಂದಿನೀತಿಯನ್ನು ...ತೋರಿಸುತ್ತದೆ. ಯಾಕೆಂದರೆ ಕುಲಭೂಷಣ್ ಜಾಧವ್ ...ಮಾಜಿ ನೌಕಾಪಡೆಯ ಅಧಿಕಾರಿಗೆ ಪಾಕಿಸ್ತಾನದ ...ನ್ಯಾಯಾಲಯ ಮರಣ ದಂಡನೆಯನ್ನು ವಿಧಿಸಿದಾಗ ...ವ್‌ನ ಮಾನವ ಹಕ್ಕುಗಳನ್ನು ಉಲ್ಲಂಘಿಸಲಾಗಿದೆ ...ು ಭಾರತ ಅಂತರರಾಷ್ಟ್ರೀಯ ನ್ಯಾಯಾಲಯದ ಮೊರೆ ...ಿಕ್ಕಿತ್ತು. ಹಾಗೆ ಮಾಡುವ ಮೂಲಕ ...ಾಲಿಕವಾಗಿಯಾದರೂ ಜಾಧವ್‌ನ ಪ್ರಾಣವನ್ನು ...ಸಲು ಸಾಧ್ಯವಾಯಿತು. ಇರಲಿ, ಭಾರತ ಸರ್ಕಾರದ ...ಕ್ರಮವನ್ನು ಮೋದಿ ಭಕ್ತರು ಕೊಂಡಾಡಿದರು.







...ಆದರೆ ಭಾರತೀಯ ಸೇನೆಯ ಮೇಜರ್ ಲೀತುಲ್ ...ೊಯಿ ಎಂಬಾತ ಅಮಾಯಕ ಫಾರೂಕ್ ಅಹಮದ್ ... ಎಂಬ ಕಾಶ್ಮೀರಿಯನ್ನು ತನ್ನ ಜೀಪಿನ ಮುಂದೆ ...ನವ ಗುರಾಣಿಯಾಗಿ ಕಟ್ಟಿಕೊಂಡು ಊರೂರು ...ಡಿದ್ದಕ್ಕೆ ಸೇನಾ ಮುಖ್ಯಸ್ಥ ಜನರಲ್ ಬಿಪಿನ್ ರಾವತ್ ...ಸಾಪತ್ರ' ಕೊಟ್ಟಿದ್ದನ್ನು ಮಾನವ ಹಕ್ಕುಗಳಲ್ಲಿ ನಂಬಿಕೆ ...ಕೊಂಡವರು ವಿರೋಧಿಸಿದ್ದಕ್ಕೆ ಅದೇ ಮೋದಿ ಭಕ್ತರು ...ಯಿ ಮುಟ್ಟಿರಿ. ಮಾನವ ಹಕ್ಕುಗಳನ್ನು ಕಟ್ಟಿಕೊಂಡು ...ಾಗೆ ಏನಾಗಬೇಕು. ಮೇಜರ್ ಗೊಗೊಯಿ ಮಾಡಿದ್ದು ...ಾಗಿದೆ. ಆತನಿಗೆ ಪ್ರಶಂಸಾಪತ್ರ ಕೊಟ್ಟಿದ್ದರಲ್ಲಿ ತಪ್ಪೇನಿಲ್ಲ" ...ು ವಾದಿಸಿದರು.

...ಇವತ್ತು ಅದೇ ಮೋದಿ ಭಕ್ತರು ಕೆನಡಾ ಸರ್ಕಾರದ ...ದ್ಧ ಕೆಂಡಕಾರಿದ್ದಾರೆ. ಕಾರಣ ತೇಜಿಂದರ್ ಸಿಂಗ್ ...ನ್ ಎಂಬ ಮಾಜಿ ಸಿಆರ್‌ಪಿಎಫ್ ಯೋಧ ಮಾನವ ...ಗಳನ್ನು ಉಲ್ಲಂಘಿಸಿದ್ದಾನೆ ಮತ್ತು ಚಿತ್ರಹಿಂಸೆ ನೀಡಿದ್ದಾನೆ ...ು ಆತ ಕೆನಡಾ ದೇಶವನ್ನು ಪ್ರವೇಶಿಸದಂತೆ ತಡೆದಿದೆ.

...ಅಲ್ಲಾ, ಮೋದಿ ಭಕ್ತರ ಪ್ರಕಾರ ಜಾಧವ್ ಎಂಬ ...ತದ ಪ್ರಜೆಗೆ ಮಾನವ ಹಕ್ಕುಗಳಿವೆ ಆದರೆ ದರ್ ... ಮತ್ತೊಬ್ಬನಿಗೆ ಇಲ್ಲ, ಇದರ ಅರ್ಥ ಅವರ ಪ್ರಕಾರ ...ರಿಗಳು ಭಾರತೀಯರಲ್ಲ ಎಂದೆ? ಈ ಪ್ರಶ್ನೆಗೆ ಅವರ ... 'ಹೌದು' ಎಂದಾದರೆ, ಭಾರತ ಸೇನೆ ಕಾಶ್ಮೀರವನ್ನು ...ವಾಗಿ ಇಟ್ಟುಕೊಂಡಿದೆ ಮತ್ತು ಅಲ್ಲಿನ ಪ್ರಜೆಗಳ ...ದ್ಧ ಯುದ್ಧ ಸಾರಿದೆ ಎಂದು ಒಪ್ಪಿಕೊಂಡಂತಲ್ಲವೇ?

...ಲ್ಲಿ ಇನ್ನೂ ಹಲವು ಮುಖ್ಯ ಅಂಶಗಳನ್ನು ...ಸಬೇಕು. ಜಿನೀವಾ ಒಪ್ಪಂದದ ಪ್ರಕಾರ ಜಾಧವ್‌ಗೆ ...ಸ್ತಾನದಲ್ಲಿರುವ ಭಾರತೀಯ ಧೂತಾವಾಸದ ನೆರವು ...ರಿಸುವ ಮೂಲಕ ಆ ದೇಶ ಜಾಧವ್‌ನ ಮಾನವ ...ಗಳನ್ನು ಉಲ್ಲಂಘಿಸಿದೆ ಎಂದು ಭಾರತ ವಾದಿಸಿತ್ತು, ... ಅದೇ ಜಿನೀವಾ ಒಪ್ಪಂದವು ಮನುಷ್ಯರನ್ನು ಮಾನವ ...ಣಿಯಾಗಿ ಉಪಯೋಗಿಸುವುದೂ ಮಾನವ ಹಕ್ಕುಗಳ ...ಘನೆ ಎನ್ನುತ್ತದೆ. ಇದರ ಅರ್ಥ ಮೇಜರ್ ಗೊಗೊಯಿ ...ದ್ದು ದರ್‌ನ ಹಕ್ಕುಗಳ ಉಲ್ಲಂಘನೆ.

...ಾಗೆಯೇ ನಮ್ಮ ಸಂವಿಧಾನವೂ ತನ್ನ ಪ್ರಜೆಗಳ ...ಜ ಹಕ್ಕುಗಳನ್ನು ರಕ್ಷಿಸಬೇಕು ಎಂದಿರುವುದರಿಂದ ... ಅದನ್ನು ಸಂವಿಧಾನ ವಿರೋಧಿ ಕ್ರಮವೂ ಆಗಿದೆ. ...ದಲ್ಲ, ಅದು ಸೇನಾ ನಿಯಮಗಳ ಉಲ್ಲಂಘನೆಯೂ ಆಗಿದೆ. ಹೀಗೆ ಒಂದೇ ಏಟಿಗೆ ಜಿನೀವಾ ಒಪ್ಪಂದವನ್ನು ಉಲ್ಲಂಘಿಸಿದ, ಸಂವಿಧಾನ ವಿರೋಧಿ ಕ್ರಿಯೆ ಎಸಗಿದ, ಸೇನಾ ನಿಯಮಗಳನ್ನು ಮುರಿದ ಗೊಗೊಯಿಗೆ 'ಪ್ರಶಂಸಾಪತ್ರ'ವನ್ನು ಸೇನಾ ಮುಖ್ಯಸ್ಥ ಜನರಲ್ ರಾವತ್ ದಯಪಾಲಿಸುತ್ತಾನೆಂದರೆ ಏನರ್ಥ?

ವಾಸ್ತವವಾಗಿ ಏಪ್ರಿಲ್ 9ರಂದು ಕಾಶ್ಮೀರದಲ್ಲಿ ನಡೆದಿದ್ದೇನು? ಅವತ್ತು ಶ್ರೀನಗರದ ಸಂಸತ್ ಕ್ಷೇತ್ರದಲ್ಲಿ ಉಪಚುನಾವಣೆ ನಡೆಯುತ್ತಿತ್ತು. ಎಲ್ಲಾ ಪಕ್ಷಗಳ ಬಗ್ಗೆ ನಂಬಿಕೆಯನ್ನು ಕಾಶ್ಮೀರಿಗಳು ಕಳೆದುಕೊಂಡಿರುವುದರಿಂದ ಮತದಾರರಿಂದ ನೀರಸ ಪ್ರತಿಕ್ರಿಯೆ ವ್ಯಕ್ತವಾಗಿತ್ತು. ಕೇವಲ ಶೇ.7 ಮತದಾರರು ಮತಗಟ್ಟೆಗೆ ಬಂದು ತಮ್ಮ ಮತಗಳನ್ನು ಚಲಾಯಿಸಿದ್ದರು. ಅವರುಗಳಲ್ಲಿ ದರ್ ಕೂಡ ಒಬ್ಬ. ಆದರೆ ಆತ ಮತ ಚಲಾಯಿಸಲು ಹೋಗಿದ್ದ ಮತಗಟ್ಟೆಗೆ ಜನ ಮುತ್ತಿಗೆ ಹಾಕಿದ್ದಾರೆ ಎಂಬ ಸುದ್ದಿಯು ಅದನ್ನು ರಕ್ಷಿಸಲು ನಿಯೋಜಿಸಿದ್ದ ಅರೆ ಸೇನಾ ಪಡೆಯಿಂದ ಗೊಗೊಯಿ ಸೇನಾ ಪಡೆಗೆ ಹೋಯಿತು. ಕೂಡಲೇ ಅಲ್ಲಿಗೆ ಹೋದ ಗೊಗೊಯಿ ಮತ ಚಲಾಯಿಸಿ ಹೊರಡುತ್ತಿದ್ದ ದರ್‌ನನ್ನು ಹಿಡಿದುಕೊಂಡು, ಆತನ ಬೆನ್ನಿಗೆ ಬಂದೂಕನ್ನು ಹಿಡಿದು ಮತಗಟ್ಟೆಯನ್ನು ಪ್ರವೇಶಿಸಿದ. ಅಲ್ಲಿದ್ದ ಜನರನ್ನು ಹೊರಗಟ್ಟಿದ ನಂತರ ಮತ್ತೆ ದರ್‌ನ ಬೆನ್ನಿಗೆ ಬಂದೂಕು ಹಿಡಿದು ಗೊಗೊಯಿ ಹೊರಬಂದ. ಈ 'ಯಶಸ್ವೀ' ಕಾರ್ಯಾಚರಣೆಯಿಂದ ಉತ್ಸುಕನಾದ ಗೊಗೊಯಿ ಅಲ್ಲಿಗೆ ಸುಮ್ಮನಾಗಲಿಲ್ಲ, ಸುತ್ತಮುತ್ತಲಿನ ಜನರಿಗೂ ಸಂದೇಶ ಸಾರಲು ಮುಂದಾದ. ದರ್‌ನನ್ನು ಜೀಪಿನ ಮುಂದೆ ಕಟ್ಟಿಹಾಕಿ 28 ಕಿಲೋಮೀಟರ್ ಕ್ರಮಿಸಿ, ಒಂಭತ್ತು ಹಳ್ಳಿಗಳಲ್ಲಿ ಸುತ್ತಾಡಿದ. ಜೊತೆಗೆ ಧ್ವನಿವರ್ಧಕದ ಮೂಲಕ "ಕಲ್ಲು ತೂರುವವರಿಗೆ ಇದೇ ಕಾದಿದೆ" ಎಂಬ ಬೆದರಿಕೆಯ ಘೋಷಣೆ ಬೇರೆ. ಈ ದುರ್ಘಟನೆಯಿಂದ ದರ್‌ಗೆ ಅದೆಷ್ಟು ಹಿಂಸೆ ಆಗಿದೆ ಎಂದರೆ ಆತ ಈಗ ಮಾನಸಿಕ ಖಿನ್ನತೆಗೆ ತುತ್ತಾಗಿದ್ದಾನೆ. ಮುಂದೆಂದೂ ಮತ ಚಲಾಯಿಸುವುದಿಲ್ಲ ಎಂದು ಶಪಥ ಮಾಡಿದ್ದಾನೆ. "ನನ್ನನ್ನು ಜೀಪಿಗೆ ಕಟ್ಟಿ 28 ಕಿಲೋಮೀಟರ್ ಎಳೆದೊಯ್ದದ್ದು ಶೌರ್ಯದ ಕೆಲಸವೇ?" ಎಂದು ದರ್ ಪ್ರಶ್ನಿಸಿದ್ದಾನೆ.

ಇಡೀ ಪ್ರಕರಣದಿಂದ ಸ್ಪಷ್ಟವಾಗುವುದೇನೆಂದರೆ, ಮತಗಟ್ಟೆಯಲ್ಲಿದ್ದ ಸ್ಥಳೀಯರಿಗಿಂತ ಗೊಗೊಯಿ ತಂಡ ಕಡಿಮೆ ಸಂಖ್ಯೆಯಲ್ಲಿದ್ದರಿಂದ ಆತ ದರ್‌ನನ್ನು ಅಕ್ರಮವಾಗಿ, ಕಾನೂನುಬಾಹಿರವಾಗಿ ಮತ್ತು ಸೇನಾ ನಿಯಮಗಳನ್ನು ಉಲ್ಲಂಘಿಸಿ ತನ್ನ ತಂಡದ ರಕ್ಷಣೆಗಾಗಿ ಮಾನವ ಗುರಾಣಿಯಾಗಿ ಉಪಯೋಗಿಸಿದ್ದ. ಆದರೆ ಈಗ ತನಗೆ ಬಂದಿರುವ 'ಪ್ರಶಂಸಾಪತ್ರ'ವನ್ನು ಸಮರ್ಥಿಸಿಕೊಳ್ಳಲು ಆತ "ಒಂದು ವೇಳೆ ನಾನು ಗುಂಡಿನ ದಾಳಿಗೆ ಆದೇಶಿಸಿದ್ದರೆ ಹತ್ತಾರು ಜನರು ಸಾಯುತ್ತಿದ್ದರು. ಮತಗಟ್ಟೆಗೆ ಬೆಂಕಿ ಹಚ್ಚುವುದಾಗಿ ಬೆದರಿಕೆಯನ್ನು ಒಡ್ಡಿದ್ದ ಗುಂಪಿನಲ್ಲಿದ್ದ ಒಬ್ಬ ವ್ಯಕ್ತಿಯನ್ನು ಹಿಡಿದು ಜೀಪಿಗೆ ಕಟ್ಟಿದ ನಂತರ ಜನರು ಸುಮ್ಮನಾದರು. ಹೀಗೆ ಮಾಡುವ ಮೂಲಕ ಹಲವಾರು ಸ್ಥಳೀಯರ ಜೀವ ಉಳಿಸಿದೆ" ಎಂದಿದ್ದಾನೆ. ಇದು ಅಪ್ಪಟ ಸುಳ್ಳು.

ಮೊದಲನೆಯದಾಗಿ ದರ್‌ಗೂ ಬೆಂಕಿ ಹಚ್ಚುತ್ತೇವೆ ಎಂದಿದ್ದ ಗುಂಪಿಗೂ ಸಂಬಂಧವೇ ಇಲ್ಲ; ಬದಲಾಗಿ ಆತ ಮತ ಚಲಾಯಿಸಲು ಹೋಗಿದ್ದ. ಎರಡನೆಯದಾಗಿ, ಗೊಗೊಯಿ ತನ್ನ ರಕ್ಷಣೆಗೆ ಅಮಾಯಕ ದರ್‌ನನ್ನು ಉಪಯೋಗಿಸಿಕೊಂಡಿದ್ದನೆ ಹೊರತು ಸ್ಥಳೀಯರ ರಕ್ಷಣೆಗಂತೂ ಅಲ್ಲವೇ ಅಲ್ಲ; ಆದ್ದರಿಂದ ಆತ ಸ್ಥಳೀಯರ ಜೀವ ಉಳಿಸಿಲ್ಲ. ಮೂರನೆಯದಾಗಿ ಮತಗಟ್ಟೆಯಲ್ಲಿ ತನ್ನ ಕೆಲಸ ಮುಗಿದನಂತರ ಗೊಗೊಯಿ ಅಲ್ಲಿಂದ ಹೊರಡಬಹುದಿತ್ತು. ಆದರೆ ಹಾಗೆ ಮಾಡದೆ ದರ್‌ನನ್ನು ಕೀಲುಗೊಂಬೆಯಂತೆ ಅಕ್ರಮವಾಗಿ ಉಪಯೋಗಿಸಿಕೊಂಡ. ನಾಲ್ಕನೆಯದಾಗಿ ದರ್‌ನನ್ನು ಮಾನವ ಗುರಾಣಿಯಾಗಿ ಸಿಕೊಳ್ಳುವ ಮೂಲಕ ಜನರಿಗೆ ಧಮಕಿ ಹಾಕಿದ.

ಈ ಪ್ರಕರಣದ ನಂತರ ಗೊಗೊಯಿ ವಿರುದ್ಧ ದೂರು ದಾಖಲಾಯಿತು. ಆದರೆ ದೂರು ದಾಖಲಾಗಿ ಆರು ವಾರಗಳು ಕಳೆದರೂ ಅದು ಮುಂದಕ್ಕೆ ಹೋಗುವುದಿರಲಿ, ದರ್‌ನನ್ನೇ ಇನ್ನೂ ವಿಚಾರಿಸಿಲ್ಲ. ಪರಿಸ್ಥಿತಿ ಹೀಗಿರುವಾಗ ಗೊಗೊಯಿಗೆ 'ಪ್ರಶಂಸಾಪತ್ರ'ವನ್ನು ರಾವತ್ ಕೊಡುತ್ತಾನೆಂದರೆ ಆತನ ಈ ಅಕ್ರಮ ಕ್ರಿಯೆಯನ್ನು ಭಾರತದ ಸೇನೆ ಬೆಂಬಲಿಸುತ್ತದೆ ಎಂದೇ ಅರ್ಥ. ನಮ್ಮ ಸೇನೆ ಯಾವ ಹಂತಕ್ಕೆ ಇಳಿದಿದೆ ಎಂದು ಈ ಪ್ರಕರಣ ತೋರಿಸುತ್ತದೆ.

ರಾವತ್ ಕತೆ ಇದಾದರೆ, ಪರೇಶ್ ರಾವಲ್ ಎಂಬ ನಟನದ್ದು ಇನ್ನೊಂದು ಕತೆ. ಹಿಂದಿ ಸಿನಿಮಾ ನಟನಾದ ಈ ಪರೇಶ್ ರಾವಲ್ ಬಿಜೆಪಿ ಸಂಸದ. ಗೊಗೊಯಿಗೆ 'ಪ್ರಶಂಸಾಪತ್ರ' ಕೊಟ್ಟಿದ್ದಕ್ಕೆ ವಿರೋಧ ವ್ಯಕ್ತವಾದಾಗ ರಾವಲ್ "ಕಲ್ಲು ತೂರುವವರ ಬದಲಾಗಿ ಅರುಂಧತಿ ರಾಯ್‌ಳನ್ನು ಸೇನೆಯ ಜೀಪಿಗೆ ಕಟ್ಟಬೇಕು" ಎಂದು ಟ್ವೀಟ್ ಮಾಡಿದ. ದರ್‌ನನ್ನು ಕಟ್ಟಿದ್ದೇ ಅಕ್ರಮ ಎಂದು ಪ್ರಜ್ಞಾವಂತರು ವಾದಿಸುತ್ತಿರುವಾಗ ಖ್ಯಾತ ಲೇಖಕಿ ರಾಯ್ ಅವರನ್ನು ಕಟ್ಟಬೇಕಿತ್ತು ಎಂದು ರಾವಲ್ ಹೇಳಿದ್ದೂ ಟೀಕೆಗೆ ಗುರಿಯಾಯಿತು. ಆದರೆ ಯಥಾಪ್ರಕಾರ ಮೋದಿ ಭಕ್ತರು ರಾವಲ್ ಟ್ವೀಟ್‌ಗೆ "ಜೈ ಜೈ" ಎಂದರು.

ಅರುಂಧತಿ ರಾಯ್ ಅವರು ಭಾರತದ ಕಾಶ್ಮೀರ ನೀತಿಯನ್ನು ಹಿಂದಿನಿಂದಲೂ ಟೀಕಿಸುತ್ತಿದ್ದಾರೆ. ಆದರೆ ಅವರು ಅದನ್ನು ಜವಾಬ್ದಾರಿಯುತವಾಗಿ ಮಾಡುತ್ತಾರೆ; ಬೇಕಾಬಿಟ್ಟಿಯಾಗಿ ಅಲ್ಲ. ಅವರ ಈ ನಿಲುವನ್ನೇ ಬಂಡವಾಳ ಮಾಡಿಕೊಂಡು ಹೇಗೆ ಹಲವರು ಕಪೋಲಕಲ್ಪಿತ 'ವರದಿಗಳನ್ನು' ಸೃಷ್ಟಿಸಿದ್ದಾರೆ ಎಂದು ದಿವೈರ್.ಕಾಮ್ ತೆರೆದಿಟ್ಟಿದೆ. ಅದರ ವಿವರಗಳು ಹೀಗಿವೆ: ಮೇ 16ರಂದು 'ದಿ ಟೈಮ್ಸ್ ಆಫ್ ಇಸ್ಲಾಮಾಬಾದ್' ಎಂಬ ಪಾಕಿಸ್ತಾನಿ ವೆಬ್ ಸೈಟ್ (ಇದು ಪತ್ರಿಕೆಯಲ್ಲ) "ಶ್ರೀನಗರಕ್ಕೆ ಆಗಮಿಸಿರುವ ಖ್ಯಾತ ಲೇಖಕಿ ಮತ್ತು ಮಾನವ ಹಕ್ಕು ಹೋರಾಟಗಾರ್ತಿ ಅರುಂಧತಿ ರಾಯ್ ಅವರು ಭಾರತದ ಸರ್ಕಾರವನ್ನು ತರಾಟೆಗೆ ತೆಗೆದುಕೊಂಡಿದ್ದಾರೆ. '7 ಲಕ್ಷವಲ್ಲ 70 ಲಕ್ಷ ಸೈನಿಕರನ್ನು ಭಾರತ ಕಾಶ್ಮೀರಕ್ಕೆ ಕಳುಹಿಸಿದರೂ ಕಾಶ್ಮೀರವನ್ನು ಗೆಲ್ಲುವುದಕ್ಕೆ ಸಾಧ್ಯವಿಲ್ಲ', ಎಂದಿದ್ದಾರೆ" ಎಂದು ವರದಿ ಮಾಡಿತು.

ಆ ವರದಿಯನ್ನು ಆಧರಿಸಿ ಮೇ 17 ರಂದು 'ಪೋಸ್ಟ್‌ಕಾರ್ಡ್' ಎಂಬ ಭಾರತದ ಹಿಂದೂತ್ವವಾದಿ ವೆಬ್‌ಸೈಟ್‌ನಲ್ಲಿ ಐಶ್ವರ್ಯ ಎಂಬಾಕೆ "ಪಾಕಿಸ್ತಾನದ ಭಯೋತ್ಪಾದಕರನ್ನು ಬೆಂಬಲಿಸುವ ಅರುಂಧತಿ ರಾಯ್ ಬೇರೆ ದೇಶದಲ್ಲಿ ಇದ್ದಿದ್ದರೆ ಜೈಲಿನಲ್ಲಿರುತ್ತಿದ್ದಳು. ಈಕೆ ಟೈಮ್ಸ್ ಆಫ್ ಇಸ್ಲಾಮಾಬಾದ್ ಎಂಬ ಪಾಕ್ ಪತ್ರಿಕೆಗೆ ಕೊಟ್ಟ ವರದಿಯಲ್ಲಿ ಭಾರತವನ್ನು ಟೀಕಿಸಿದ್ದಾಳೆ" ಎಂದು ಬರೆದಳು. ಆಕೆಯ ವರದಿಯನ್ನು ಯಥಾವತ್ತಾಗಿ 'ಆನಂದ್' ಎಂಬ ಲೇಖಕನ ಹೆಸರಡಿ 'ನ್ಯಾಷನಲಿಸ್ಟ್' ಎಂಬ ನಕಲಿ ಫೇಸ್‌ಬುಕ್ ತಂಡ ಹಂಚಿಕೊಂಡಿತು. ಅವತ್ತೇ ಹಿಂದೂತ್ವವನ್ನು ಪ್ರತಿಪಾದಿಸುವ 'ಸತ್ಯವಿಜಯಿ.ಕಾಮ್' ಎಂಬ ಇನ್ನೊಂದು ನಕಲಿ ತಂಡ ಅದನ್ನು ಬಿತ್ತರಿಸಿತು. ಮಾತ್ರವಲ್ಲ 'ದಿ ರಿಸರ್ಜೆಂಟ್ ಇಂಡಿಯ', 'ರಿವೋಲ್ಟ್ ಪ್ರೆಸ್', 'ವಿರಾಟ್ ಹಿಂದೂ ರಾಷ್ಟ್ರ', 'ಇಂಟರ್ನೆಟ್ ಹಿಂದೂ' ಎಂಬ ಇತರೆ ಹಿಂದುತ್ವವಾದಿ ನಕಲಿ ಸುದ್ದಿ ವೆಬ್‌ಸೈಟ್‌ಗಳೂ ಪ್ರಕಟಿಸಿದವು. ಹೀಗೆ ಭಾರತದಲ್ಲಿ ಅರುಂಧತಿ ರಾಯ್ ವಿರುದ್ಧ ಹಲವಾರು ನಕಲಿ ದೇಶಭಕ್ತರು ಕೆಂಡಕಾರುತ್ತಿದ್ದರು.


ಅದೇ ಹೊತ್ತಿಗೆ ಅದೇ 'ಟೈಮ್ಸ್ ಆಫ್ ಇಸ್ಲಾಮಾಬಾದ್' 'ವರದಿಯನ್ನು' ರೇಡಿಯೋ ಪಾಕಿಸ್ತಾನ್, ಎಆರ್‌ವೈ ಚಾನೆಲ್ ಮತ್ತು ಜಿಯೋ ಟಿವಿ ಪ್ರಸಾರ ಮಾಡಿದವು. ತಮ್ಮ ವರದಿಗೆ ಆಧಾರ 'ಕಾಶ್ಮೀರಿ ಮೀಡಿಯಾ ಸರ್ವಿಸ್' ಎಂದವು. ಆದರೆ ಕಾಶ್ಮೀರಿ ಮೀಡಿಯಾ ಸರ್ವಿಸ್ ಎಂಬುದು ಒಂದು ಸುದ್ದಿ ಸಂಘಟನೆ ಆಗಿರದೆ, ಪಾಕ್ ಆಕ್ರಮಿತ ಕಾಶ್ಮೀರದಲ್ಲಿರುವ ಒಂದು ಭಯೋತ್ಪಾದಕ ಸಂಘಟನೆಯ ಮುಖವಾಣಿಯಾಗಿದೆ. ಆ ಸಂಘಟನೆಯು ಒಂದು ವೆಬ್‌ಸೈಟ್ ಹೊಂದಿದೆ ಯಾದರೂ ಆ ವೆಬ್‌ಸೈಟಿನಲ್ಲಿ ಅರುಂಧತಿ ರಾಯ್ ಅವರ ಸಂದರ್ಶನವಿಲ್ಲ.

ಎನಿವೇ, ಈ ಎಲ್ಲಾ 'ವರದಿ'ಗಳನ್ನು ಆಧರಿಸಿ ಮಾನ್ಯಕ್ ಸಿಂಗ್ ಎಂಬಾತ ಅಮೆರಿಕ ಮೂಲದ 'ಫೇರ್ ಅಬ್ಸರ್ವರ್' ಎಂಬ ವೆಬ್‌ಸೈಟಿಗೆ ಒಂದು ಲೇಖನ ಬರೆದು ಅರುಂಧತಿ ರಾಯ್ ಅವರನ್ನು ಖಂಡಿಸಿದ. ಈ ಲೇಖನವು ಆನಂತರ 'ನ್ಯೂಸ್‌ಲಾಂಡ್ರಿ' ಎಂಬ ಭಾರತೀಯ ವೆಬ್‌ಸೈಟ್‌ನಲ್ಲಿ ಮರುಮುದ್ರಣಗೊಂಡಿತು. ಈ 'ನ್ಯೂಸ್‌ಲಾಂಡ್ರಿ' ಲೇಖನವನ್ನು ಆಧರಿಸಿ ಭಾರತದ ಸಿಎನ್‌ಎನ್-ಐಬಿಎನ್ ಮತ್ತು ರಿಪಬ್ಲಿಕ್ ತರಹದ 'ಪ್ರತಿಷ್ಠಿತ' ಟಿವಿ ಚಾನೆಲ್‌ಗಳ ಆ್ಯಂಕರ್‌ಗಳೂ ಅರುಂಧತಿ ರಾಯ್ ಅವರನ್ನು ತರಾಟೆಗೆ ತೆಗೆದುಕೊಂಡರು. ಹೀಗೆ ಎಲ್ಲರೂ ಅರುಂಧತಿಯನ್ನು ಟೀಕಿಸುವುದರಲ್ಲಿ ಬ್ಯುಸಿ ಆಗಿದ್ದರೆ ಹೊರತು ಆಕೆ ಅಂತಹ ಸಂದರ್ಶನವನ್ನು ಕೊಟ್ಟಿದ್ದರೆ ಎಂದು ವಿಚಾರಿಸುವ ಗೋಜಿಗೆ ಹೋಗಲೇ ಇಲ್ಲ.


ವಾಸ್ತವವಾಗಿ ಅರುಂಧತಿ ರಾಯ್ ಇತ್ತೀಚೆಗೆ ಶ್ರೀನಗರಕ್ಕೆ ಹೋಗುವುದಿರಲಿ, ಆಕೆ ಕಾಶ್ಮೀರ ಕುರಿತು ಯಾವ ಸಂದರ್ಶನವನ್ನೂ ಯಾವ ಮಾಧ್ಯಮಕ್ಕೂ ಕೊಟ್ಟಿಲ್ಲ. ಅರ್ಥಾತ್ ಯಾವ 'ಸಂದರ್ಶನದ ವರದಿ'ಯನ್ನು ಆಧರಿಸಿ ಎಲ್ಲರೂ ಟೀಕಾಪ್ರಹಾರ ಮಾಡುತ್ತಿದ್ದರೋ ಅದು ಸಂಪೂರ್ಣವಾಗಿ ಕಪೋಲಕಲ್ಪಿತವಾದದ್ದು. ಮಾತ್ರವಲ್ಲ ಹೋದ ವರ್ಷ ಬುರ್ಹಾನ್ ವನಿಯ ಎನ್‌ಕೌಂಟರ್ ನಂತರ ಅರುಂಧತಿ ರಾಯ್ 'ಔಟ್‌ಲುಕ್' ಪತ್ರಿಕೆಗೆ ಬರೆದ ಲೇಖನದಲ್ಲಿ "ಕಾಶ್ಮೀರದಲ್ಲಿ ಹಿಂಸೆ ನಿಲ್ಲಬೇಕು, ಶಾಂತಿ ಸ್ಥಾಪಿಸಲು ಅಲ್ಲಿ ಸಂಧಾನ ನಡೆಯಬೇಕು" ಎಂದು ಆಗ್ರಹಿಸಿದ್ದರು.

ದಿವೈರ್.ಕಾಮ್ ಹೇಳಿರುವಂತೆ "ಈ ಇಡೀ ನಕಲಿ ಸುದ್ದಿ ಪ್ರಕರಣವು ಹೇಗೆ ಅತ್ತ ಜಿಹಾದಿಗಳ, ಇತ್ತ ಹಿಂದೂತ್ವವಾದಿಗಳ ಅಜೆಂಡಾಗೆ ಬಳಕೆಯಾಯಿತು ಎಂಬುದು ಕುತೂಹಲಕಾರಿಯಾಗಿದೆ.

ಪಾಕಿಸ್ತಾನದಲ್ಲಿ ಭಾರತ ಸರ್ಕಾರದ ಕಾಶ್ಮೀರ ನೀತಿಯನ್ನು ಹಣಿಯಲು ಇದು ಬಳಕೆಯಾದರೆ, ಭಾರತದಲ್ಲಿ ಹಿಂದೂತ್ವದ ನಕಲಿ ಸುದ್ದಿ ತಾಣಗಳಿಗೆ ರಾಷ್ಟ್ರೀಯ ಭಾವನೆಯನ್ನು ಉತ್ತೇಜಿಸಲು ಮತ್ತು ಅರುಂಧತಿ ರಾಯ್ ತರಹದ ಮೋದಿ ವಿರೋಧಿಗಳನ್ನು ಹಣಿಯಲು ಉಪಯೋಗಿಸಲಾಯಿತು. ಯಾವುದನ್ನು ಓದಬೇಕು, ಯಾವುದನ್ನು ನಂಬಬೇಕು ಎಂಬುದು ದೇಶಕ್ಕೆ ಗೊತ್ತಾಗಬೇಕಿದೆ. ಆದರೆ ಯಾವುದೇ ವಿಷಯದ ಸುತ್ತ ಹಿಸ್ಟೀರಿಯಾ ಸೃಷ್ಟಿಸುವ ಮುನ್ನ ಆ ಸುದ್ದಿಯ ಅಸಲಿಯತ್ತನ್ನು ಮಾಧ್ಯಮಗಳು ಪರಿಶೀಲಿಸುವ ಗೋಜಿಗೆ ಹೋಗುವ ತನಕ ಅದು ಸಾಧ್ಯವಿಲ್ಲ." ■



ಎಂಜಿಆರ್



ರಜನಿ ರಾಜಕೀಯದ ಮರ್ಮ



ಜಯಾ

ನಾನೇ ಲೇಟಾ ವಂದಾಲೂಂ ಲೇಟೆಸ್ಟಾ ವರುವೇನ್....!

ಲೇಟಾಗಿ ಬಂದರೂ ನಾನು ಲೇಟೆಸ್ಟಾಗಿ ಬರುತ್ತೇನೆಂಬುದು ರಜನಿಯ ಅತ್ಯಂತ ಜನಪ್ರಿಯ ಚಿತ್ರಗಳಲ್ಲೊಂದಾದ 'ಪಡೆಯಪ್ಪ' ಚಿತ್ರದ ಚಿತ್ತೆಬ್ಬಿಸುವ ಡೈಲಾಗು. ಅದು ತಮಿಳು ರಾಜಕಾರಣದಲ್ಲಿ ಒಂದಲ್ಲಾ ಒಂದು ದಿನ ಕಿಕ್ಕೆಬ್ಬಿಸುವ ಆಣಿಮುತ್ತಾಗಿ ಪ್ರಯೋಜನಕ್ಕೆ ಬರುತ್ತದೆ ಯೆಂಬುದು ಖುದ್ದು ರಜನಿಗೇ ಗೊತ್ತಿರಲಿಲ್ಲವೇನೋ!

ಈಗಂತೂ ತಮಿಳುನಾಡಿನ ಯಾವುದೇ ಟಿವಿ, ನ್ಯೂಸ್ ಚಾನಲ್, ರೇಡಿಯೋ ಹಾಕಿದರೂ ರಜನಿಯ ಇದೇ ಆಣಿಮುತ್ತೇ ಕಿವಿಗಪ್ಪಳಿಸುತ್ತದೆ. ರಜನಿಯ ಸುನಾಮಿ ಜೋರಾಗೇ ತಮಿಳುನಾಡನ್ನಪ್ಪಳಿಸಿದೆ. ಅಧಿಕಾರಸ್ಥ ಅಣ್ಣಾಡಿಎಂಕೆಯಿಂದ ಹಿಡಿದು ಕರುಣಾನಿಧಿಯ ಡಿಎಂಕೆ ಮೊದಲಾಗಿ ನಾಮ್ ತಮಿಳರ್ ಎಂಬ ಸಣ್ಣಪುಟ್ಟ ಕಚ್ಚಿಗಳು ಸಂಘಟನೆಗಳೆಲ್ಲ ಯಾವುದೋ ಧೂಮಕೇತುವೊಂದು ಅಪ್ಪಳಿಸಿದ ಹಾಗೆ ಥಂಡಾ ಹೊಡೆದಿವೆ. ರಜನಿ ತಮಿಳನಲ್ಲ, ಕನ್ನಡಿಗನೆಂಬ ಕ್ಯಾತೆಯಿಂದ ಹಿಡಿದು ಸಿನಿಮಾ ನಟರುಗಳ್ಯಾರು ರಾಜಕೀಯಕ್ಕೆ ಬರಲೇಬಾರದೆಂಬ ಕುತರ್ಕ, ಕುಚೇಷ್ಟೆಗಳವರೆಗೂ ತಮಿಳು ಅರಸೊತ್ತಿಗೆಯ ಸುತ್ತ ರಜನಿಯದ್ದೇ ಹವಾ ರಜನಿಯದ್ದೇ ಗದ್ದಲ.


ಅಷ್ಟಕ್ಕೂ ರಜನಿಕಾಂತ್ ರಾಜಕೀಯಕ್ಕೆ ಬರುವುದೇ ನಿಜವೆ? ಬಂದರೆ ಯಾವ ಪಕ್ಷ? ಬಿಜೆಪಿಯನ್ನು ಸೇರುತ್ತಾರೆಂಬ ನಿರೀಕ್ಷೆಗಿರುವ ಕಾರಣವೇನು? ಏಕೆ ರಜನಿ ಈ ಸಂದರ್ಭದಲ್ಲೇ ತನ್ನ ರಾಜಕೀಯ ಪ್ರವೇಶದ ಬಾಂಬ್ ಹಾಕುತ್ತಿದ್ದಾರೆ? ಅದರ ಹಿಂದಿರುವ ಕೈ ಯಾರದು? ಹಾಗೊಮ್ಮೆ ರಾಜಕೀಯಕ್ಕೆ ಬಂದರೆ ತಮಿಳುನಾಡಿನ ಅರಸಾಂಗ ಸಮೀಕರಣ ಬದಲಾಗುತ್ತಾ? ಇಷ್ಟೆಲ್ಲವನ್ನೂ ಮೀರಿ ರಜನಿ ತಾನು ರಾಜಕೀಯಕ್ಕೆ ಬರುವುದು ದೈವೀಚ್ಛೆಯನ್ನು ಆಧರಿಸಿದೆ ಎನ್ನಲು ಕಾರಣವೇನು?

...... ಹೀಗೆ ಶುರುವಾಗುವ ರಜನಿ ರಾಜಕೀಯದ ಆರಂಗೆಟ್ರಂ ಕೊನೆಕೊನೆಗೆ ಯಾವ ಅತಿರೇಕಕ್ಕೆ ಬಂದು ನಿಂತಿದೆಯೆಂದರೆ ಪಕ್ಕಾ ತಮಿಳು ಮೂಲಭೂತವಾದಿಗಳೆಲ್ಲ ಬೀದಿಗಿಳಿದು ರಜನಿಯ ಭೂತ ಸುಡುವ ತನಕ. ಮೇ 22 ರ ಸೋಮವಾರ ತಮಿಳ್ ಮುನ್ನೇತ್ರ ಪಡೈ ಎಂಬ ತಮಿಳಾಂಧರ ಗುಂಪೊಂದು ಚೆನ್ನೈನಲ್ಲಿ ರಜನಿಕಾಂತ್ ಭೂತ ಸುಟ್ಟಿದೆ. ಇದರ ಮುಖ್ಯ ತಕರಾರೇನೆಂದರೆ; ರಜನಿಕಾಂತ್ ಹುಟ್ಟಾ ತಮಿಳನಲ್ಲವಾದ್ದರಿಂದ ಮತ್ತು ಆತ ಕನ್ನಡಿಗನಾದ್ದರಿಂದ ಆತನೇನಾದರೂ ರಾಜಕೀಯಕ್ಕೆ ಬಂದರೆ ಸಹಜವಾಗೇ ಆತ ತಮಿಳರ ಹಿತಾಸಕ್ತಿಗಳನ್ನು ಕನ್ನಡಿಗರಿಗೆ ಮಾರಿಕೊಳ್ಳುತ್ತಾನೆ. ಇದರಿಂದ ತಮಿಳು ಹಿತಾಸಕ್ತಿಗಳಿಗೆ ಕುಂದುಂಟಾಗುತ್ತದೆ!

ಮತ್ತೊಬ್ಬ ಎಂಜಿಆರ್!

ಹಿಂದ್ಯಾವತ್ತೂ ಇಲ್ಲದೆ ಈಗ ಮಾತ್ರ ರಜನಿ ವಿರುದ್ಧ ಆತ ಕರ್ನಾಟಕದವನೆಂದು ಕ್ಯಾತೆ ತೆಗೆದು ಕಾಲೆಳೆಯುತ್ತಿರುವ ತಮಿಳಾಂಧ ಸಂಘಟನೆಗಳ ಕುಚೋದ್ಯದ ಹಿಂದಿರುವುದು ಕೇವಲ ಎಲ್ಟಿಟಿಇಯಾಗಲಿ, ಪೆರಿಯಾರ್ ವಾದಿಗಳಾಗಲಿ ಅಲ್ಲ, ಖುದ್ದು ಡಿಎಂಕೆ ಅಣ್ಣಾಡಿಎಂಕೆಯಂಥ ದ್ರಾವಿಡ ಕೂಟಗಳೇ ರಜನಿಯೆಂಬ ಸುನಾಮಿ ಕಂಡು ಬೆಚ್ಚಿಬಿದ್ದಿವೆ.

ಬಹುಶಃ ಇದನ್ನೆಲ್ಲ ಸೂಕ್ಷ್ಮವಾಗಿ ಗಮನಿಸಿಯೇ ಇರಬೇಕು ತಾನು ರಾಜಕೀಯಕ್ಕೆ ಬರಬೇಕೆಂದರೆ ಅದು ದೈವೇಚ್ಛೆ, ಆ ದೇವರು ಬಯಸಿದರೆ ಖಂಡಿತಾ ರಾಜಕೀಯಕ್ಕೆ ಬರುತ್ತೇನೆಂದು ಈಗ ಏಕಾಏಕಿ ರಜನಿ




ಮೋದಿ ಜೊತೆ ರಜನಿ

ಹೇಳುತ್ತಿರುವುದು!

ಅದು ತಮಿಳುನಾಡಿನ ಹವಾಮಾನದ ವೈಶಿಷ್ಟ್ಯವೂ ಹೌದು. ವೈಪರೀತ್ಯವೂ ಕೂಡ. ಅಲ್ಲಿ ಸಿನಿಮಾ ಅಂದರೆ ರಾಜಕಾರಣ ಮತ್ತು ರಾಜಕಾರಣವೆಂದರೆ ಸಿನಿಮಾ. ಕಾಮರಾಜನಾಡಾರ್ ನಂತರ ಶುರುವಾದದ್ದು ದ್ರಾವಿಡ ರಾಜಕಾರಣ. ಪೆರಿಯಾರ್ ವಿಚಾರಧಾರೆಗಳ ಪ್ರಭಾವ ಆ ಕಾಲಕ್ಕೆ ಯಾವ ಮಟ್ಟಕ್ಕಿತ್ತೆಂದರೆ ಇಡೀ ದೇಶದ ಪರಿಸ್ಥಿತಿಯೇ ಒಂದಾದರೆ ಅದಕ್ಕೆ ವ್ಯತಿರಿಕ್ತವಾಗಿ ತಮಿಳುನಾಡಿನಲ್ಲಿ 'ದ್ರಾವಿಡ ಕಳಗಂ' ಅಬ್ಬರಿಸುತ್ತಿತ್ತು. ಪೆರಿಯಾರ್ ಹದಗೊಳಿಸಿದ ತಮಿಳು ಮಣ್ಣಿನಲ್ಲಿ ಭರಪೂರ ಫಸಲು ತೆಗೆದದ್ದು ಅಣ್ಣಾದೊರೆ. ಅವರು ಸ್ಥಾಪಿಸಿದ ದ್ರಾವಿಡ ಮುನ್ನೇತ್ರ ಕಳಗಂ ಶಾಶ್ವತವಾಗಿ ತಮಿಳುನಾಡನ್ನು ರಾಷ್ಟ್ರ ರಾಜಕಾರಣದಿಂದ ಹೊರತಾಗಿಸಿತು. ಹಿಂದಿ ವಿರೋಧಿ ಚಳವಳಿ, ತ್ರಿಭಾಷಾ ಸೂತ್ರಕ್ಕೆ ವಿರೋಧ, ಆರ್ಯ ದೇವತೆಗಳಾದ ರಾಮ ಕೃಷ್ಣರ ವಿರುದ್ಧ ಆಕ್ರೋಶ, ಪ್ರತ್ಯೇಕ ತಮಿಳು ರಾಷ್ಟ್ರದ ಬೇಡಿಕೆ; ಹೀಗೆ ತಮಿಳು ಮತ್ತು ದ್ರಾವಿಡ ಆಶೋತ್ತರಗಳ ಸುತ್ತಲೇ ಗಿರಕಿ ಹೊಡೆಯುವ ತಮಿಳು ರಾಜಕಾರಣವೆಂಬುದು ಪೆರಿಯಾರ್ 'ಸಿದ್ಧಾಂತಗಳ ಭದ್ರಬುನಾದಿಯ ಮೇಲೇ ಅರಳಿನಿಂತಿದೆ.

ಅಲ್ಲಿ ಕಾಂಗ್ರೆಸ್, ಬಿಜೆಪಿ, ಜನತಾದಳ ಎಂಬ ರಾಷ್ಟ್ರೀಯ ಪಕ್ಷಗಳ ಆಟ ನಡೆಯದು. ಪೆರಿಯಾರ್



ಚೆನ್ನೈನಲ್ಲಿ ಅಭಿಮಾನಿಗಳ ಸಮಾವೇಶ

ಸಿದ್ಧಾಂತದ ಹೊರತಾಗಿ ಯಾರ ಬೇಳೆಯೂ ಬೇಯದು. ಇದನ್ನು ಚೆನ್ನಾಗಿ ಅರಿತೇ ಅದಕ್ಕೆ ಬಿ... ಗ್ಲಾಮರ್‌ನ ರಂಗು ಕೊಟ್ಟದ್ದು ಎಂಜಿಆರ್. ದ್ರಾ... ರಾಜಕಾರಣಕ್ಕೆ ಸಿನಿಮಾದ ಹುಚ್ಚು ಹಾಯಿಸಿದರೆ ... ಏನಾಗಬೇಕೋ ಅದೇ ಆಯಿತು. ಅಣ್ಣಾದೊರೆಯ... ಉತ್ತರಾಧಿಕಾರಿಯಾಗಿ ತಮಿಳು ಸಾಮ್ರಾಜ್ಯವನ್ನಾಳ... ಕರುಣಾನಿಧಿ ಎಂಜಿಆರ್ ಅಲೆಯಲ್ಲಿ ಕೊಚ್ಚಿ ಹೋದರು. ಸತತ ಹತ್ತು ವರ್ಷಗಳ ಬಿಟ್ಟೂಬಿಡ... ತಮಿಳುನಾಡಿನ ಮುಖ್ಯಮಂತ್ರಿಯಾದ ಎಂಜಿಆರ... ತಮ್ಮದೇ ಪ್ರತ್ಯೇಕ ಪಕ್ಷ ಹುಟ್ಟುಹಾಕಿ ಅದಕ್ಕಿಟ್ಟ... ಹೆಸರು ಅಣ್ಣಾಡಿಎಂಕೆ!

ಕವಿದ ನಿರ್ವಾತ

ಇದರರ್ಥ ತಾನೆಂಥಾ ಜನಪ್ರಿಯ ನಟನಾದ... ತಮಿಳು ಮಣ್ಣಿಗೆ ದ್ರಾವಿಡ ಆಶೋತ್ತರಗಳ ಹೊ... ಬೇರೆ ಲಕ್ಷಣವೇ ಇಲ್ಲವೆಂಬುದು ಎಂಜಿಆರ್‌ಗೆ ಅರ್ಥವಾಗಿತ್ತು, ತನ್ನ ಸಿನಿಮಾ ಖಯಾಲಿಗಳು, ಸಿನಿಮೀಯ ಜೀವನಶೈಲಿ, ನಾಟಕೀಯ ವರಸೆಗ... ಸತತ ಹತ್ತು ವರ್ಷಗಳ ಕಾಲ ಮುಖ್ಯಮಂತ್ರಿ ಪಟ್ಟವನ್ನಾಳಿದ ಎಂಜಿಆರ್ ಕೊನೆಗೇ ಅಷ್ಟೇ ನಿಗೂಢವಾಗಿ ಕೊನೆಯುಸಿರೆಳೆದರು. ಎಂಜಿಆರ್... ಉತ್ತರಾಧಿಕಾರಿಯೇ ಜಯಲಲಿತಾ. ಅತ್ತ ಕರುಣಾನಿಧಿಯ ಡಿಎಂಕೆ ಇತ್ತ ಜಯಲಲಿತಾ ಆಧಿಪತ್ಯದ ಅಣ್ಣಾಡಿಎಂಕೆಯ ಹೊರತಾಗಿ ತಮಿ... ರಾಜಕಾರಣದಲ್ಲಿ ಬೇರೇನೂ ಬೆಳೆಯಲಿಲ್ಲ.

ಈಗ ತಮಿಳು ರಾಜಕಾರಣಕ್ಕೆ ಬೇರೆಯದೇ ... ಫಜೀತಿ ಶುರುವಾಗಿದೆ. ಡಿಎಂಕೆ ಅಧಿಪತಿ ಕರು... ಹಾಸಿಗೆ ಹಿಡಿದು ದಿನಗಳೆಣಿಸುತ್ತಿದ್ದರೆ ಅವರ ಪ್ರತಿದ್ವಂದ್ವಿ ಜಯಲಲಿತಾ ಇಹಲೋಕವನ್ನೇ ತ್ಯಜಿಸಿದ್ದಾಗಿದೆ. ಕರುಣಾನಿಧಿಯ ಉತ್ತರಾಧಿಕಾರಿ ಸ್ಟಾಲಿನ್‌ಗೆ ತನ್ನಪ್ಪನಷ್ಟು ಸಾಮರ್ಥ್ಯವಿಲ್ಲ, ಡಿಎಂಕೆಯೊಳಗೇ ದಾಯಾದಿಕಲಹ ಬೇರೆ. ಇತ್ತ ಅಣ್ಣಾಡಿಎಂಕೆಯದ್ದೂ ಇನ್ನೂ ದುರ್ಗತಿ. ಜಯಾ... ನಂತರ ತಾನೇ ಉತ್ತರಾಧಿಕಾರಿಯೆಂದು ಸೆಟೆದು... ಆಪ್ತಸಖಿ ಶಶಿಕಲಾ ಸದ್ಯ ಜೈಲಿಂದ ಹೊರಬರು... ಲಕ್ಷಣಗಳಿಲ್ಲ, ಆಕೆಯ ಕೈಗೊಂಬೆ ಪಳನಿಚಾಮಿಯೇನೋ ಸದ್ಯ ತಮಿಳುನಾಡಿನ ಮುಖ್ಯಮಂತ್ರಿಯಾದರೂ ಅದೆಷ್ಟು ದಿನ ಅಂತ... ಗ್ಯಾರಂಟಿಯಿಲ್ಲ, ಅಧಿಕಾರಸ್ಥ ಅಣ್ಣಾಡಿಎಂಕೆಯಲ್ಲಿ... ಎರಡು ಬಣಗಳಾಗಿವೆ. ಜಯಾ ನಿಷ್ಠರು ಹಳೆಬ... ಪನ್ನೀರ್ ಸೆಲ್ವಂ ಪರವಾದರೆ ಅಧಿಕಾರದ ಆಸೆಗ... ಹೆಚ್ಚಿನ ಮಂದಿ ಜೈಲುವಾಸಿ ಶಶಿಕಲಾ ಬೆನ್ನಿಗಿದ... ತಮಿಳುನಾಡು ಕಂಡ ವರ್ಣರಂಜಿತ, ಸಿನಿಮೀಯ... ಅಬ್ಬರದ ರಾಜಕಾರಣಕ್ಕೆ ಹೋಲಿಸಿದರೆ ನೀರಸ ... ಅರಾಜಕ ಅನಾಯಕತ್ವದ ದುರ್ಗತಿ.

ಅಲ್ಲಿನ ಜನಕ್ಕೀ ಒಬ್ಬ ಎಂಜಿಆರ್ ಬೇಕು. ... ಪ್ರತಿಯಾಗಿ ಮತ್ತೊಬ್ಬ ಕರುಣಾನಿಧಿಯಿರಬೇಕು ... ಅಥವಾ ಜಯಲಲಿತಾ ಥರದ ಬೆಡಗಿನ ರಾಣಿಯಾದರೂ ಬೇಕು. ರಾಜನಾಗಲಿ ರಾಣಿಯ... ಇಲ್ಲದೇಹೋದರೆ ತಮಿಳು ಜನಕ್ಕದು ಬೋರ... ಅಂಥದೊಂದು ಲೆಕ್ಕ ಹಾಕಿಯೇ ತಮಿಳಿನ ... ದಿಗ್ಗಜ ವಿಜಯ್‌ಕಾಂತ್ ಡಿಎಂಡಿಕೆ ಅಂದರೆ ... ಮುನ್ನೇತ್ರ ಮರಪ್ಪೋಕು ಕಳಗಂ ಎಂಬ ತನ್ನದ... ಕಟ್ಟಿಕೊಂಡು ಅಖಾಡಕ್ಕಿಳಿದ. ಒಂದು ಹಂತದ... ಡಿಎಂಕೆಯನ್ನೂ ಮೀರಿಸುವಂತೆ ಬರೋಬ್ಬರಿ ... ಗೆದ್ದ ವಿಜಯಕಾಂತ್ ಜಯಾ ಮುಖ್ಯಮಂತ್ರಿಯಾಗಿದ್ದಾಗ ಅಧಿಕೃತ ವಿರೋಧ... ನಾಯಕನಾಗಿಬಿಟ್ಟ. ಕರುಣಾನಿಧಿಯ ಡಿಎಂಕೆ ... ಸ್ಥಾನವನ್ನು ಗೆಲ್ಲಲಾಗದೇ ಮೂರನೇ ಸ್ಥಾನಕ್ಕಿಳಿ...

ಕಳೆದ ಚುನಾವಣೆಯಲ್ಲೂ ಇದೇ


ಬಿಜೆಪಿ ಸೇರಿದರೂ ಸ್ವಂತ ಪಕ್ಷ ಕಟ್ಟಿದರೂ ಹೆಚ್ಚೆಂದರೆ ಮತ್ತೊಬ್ಬ ವಿಜಯ್‌ಕಾಂತ್ ಮಾತ್ರ....?

ರಜನಿಯ ರಾಜಕೀಯ ಪ್ರವೇಶವನ್ನು ತಮಿಳುನಾಡು ಬಿಜೆಪಿ ಅಧ್ಯಕ್ಷ ತಮಿಳಿಸೈ ಸೌಂದರ್ ರಾಜನ್, ಮೋದಿ ...ಪುಟದಲ್ಲಿ ಜಲಸಾರಿಗೆ ಸಚಿವರಾಗಿರುವ ರಾಧಾಕೃಷ್ಣನ್ ...ಮುಂತಾದ ಬಿಜೆಪಿ ನಾಯಕರೆಲ್ಲ ಜೊಲ್ಲು ಸುರಿಸಿಕೊಂಡೇ ...ಸ್ವಾಗತಿಸಿದ್ದಾರೆ. ಬಿಜೆಪಿಗೆ ಬರುವಂತೆ ದುಂಬಾಲು ಬಿದ್ದು ...ಪ್ರಾನಿಸಿದ್ದೂ ಆಗಿದೆ. ಇದರ ಹೊರತಾಗಿಯೂ ರಜನಿಯ ...ಜಕೀಯವನ್ನು ಸ್ವಾಗತಿಸಿದ್ದು ಡಿಎಂಕೆ ಅಧಿಪತಿ ಮೊ.ಕ. ...ಲಿನ್. ಅದು ರಜನಿ ಮತ್ತು ಕರುಣಾನಿಧಿ ಕುಟುಂಬದ ...ಳೆಯ ಬಾಂಧವ್ಯದ ಪ್ರತೀಕವೇ.

ಹಾಗಂತ ರಜನಿಯೇನಾದರೂ ಬಿಜೆಪಿ ಸೇರಿದರೆಂದರೆ ...ದು ತಮಿಳುನಾಡಿನ ಜಾಯಮಾನದ ಮಟ್ಟಿಗೆ ...ತ್ಮಹತ್ಯೆಯೇ. ಏಕೆಂದರೆ ತಮಿಳುನಾಡಿನಲ್ಲಿ ಬಿಜೆಪಿಯ ...ೀರಣೆ-ಸಿದ್ಧಾಂತಕ್ಕೆ ಬೆಂಬಲಕ್ಕಿಂತಲೂ ವಿರೋಧವೇ ಹೆಚ್ಚು. ಅದು ದ್ರಾವಿಡ ಸಿದ್ಧಾಂತದ ಕರ್ಮಭೂಮಿ. ಅಲ್ಲಿ ಪೆರಿಯಾರ್ ವಾದಕ್ಕಿರುವ ಮನ್ನಣೆಯೇ ಬೇರೆ, ಬಿಜೆಪಿಯ ವೈದಿಕತೆಗಿರುವ ಹೇವರಿಕೆಯೇ ಬೇರೆ. ಇದನ್ನು ಸ್ಪಷ್ಟವಾಗಿ ಮನಗಂಡ ರಜನಿಯ ಅನೇಕ ಹಿತೈಷಿಗಳೆಲ್ಲ ಬಿಜೆಪಿ ಸೇರುವಂತಹ ಮೂರ್ಖತನಕ್ಕೆ ರಜನಿ ಕೈಯಿಡಲಾರರೆಂದೇ ವಾದಿಸುತ್ತಿದ್ದಾರೆ. ಆದರೆ ಕೇಂದ್ರ ಮಂತ್ರಿ ಸ್ಥಾನದ ಆಸೆಗೆ ಬಿದ್ದೇನಾದರೂ ರಜನಿ ಬಿಜೆಪಿ ಸೇರಿದರೂ ತಮಿಳುನಾಡಿನಲ್ಲಿ ನೆಲೆಯಾಗುವುದು ದುಸ್ಸಾಧ್ಯವೇ.

ಹಾಗೊಮ್ಮೆ ತನ್ನದೇ ಪ್ರತ್ಯೇಕ ಪಕ್ಷ ಸ್ಥಾಪಿಸಿದರೆಂದರೆ ಆಗ ಲೆಕ್ಕಾಚಾರ ಬೇರೆಯಾಗುತ್ತದೆ. ಅದಕ್ಕೂ ಬಿಜೆಪಿ ಕೈಜೋಡಿಸಬಹುದು. ಹಾಗಂತ ಡಿಎಂಕೆ, ಅಣ್ಣಾಡಿಎಂಕೆಗಳ ಪ್ರಾಬಲ್ಯ ಮುರಿಯುತ್ತೇನೆಂಬುದು ಸುಳ್ಳು. ಡಿಎಂಕೆ, ಅಣ್ಣಾಡಿಎಂಕೆಗಳು ಈಗಾಗಲೇ ತಮಿಳು ನೆಲದಲ್ಲಿ ಆಳವಾದ ಬೇರು ಬಿಟ್ಟಾಗಿದೆ. ಇದಕ್ಕೆ ವಿಜಯ್‌ಕಾಂತ್‌ಗಿಂತ ಬೇರೆ ಉದಾಹರಣೆ ಬೇಕೆ? ಮೊದಲ ಬಾರಿ ಐದಾರು ಪಕ್ಷಗಳ ಜೊತೆ ಸೇರಿ 40 ಸ್ಥಾನ ಗೆದ್ದ ವಿಜಯ್‌ಕಾಂತ್ ಎರಡನೇ ಬಾರಿಗೆ ಒಂದೇ ಒಂದು ಸ್ಥಾನ ಗೆಲ್ಲಲಾಗಲಿಲ್ಲ, ವಿಜಯ್‌ಕಾಂತ್ ಪಕ್ಷ ಅಷ್ಟಾಗ್ಯೂ ಶೇ. 6 ರಷ್ಟು ಮತ ಗಿಟ್ಟಿಸಿತಾದರೂ ದಿನೇದಿನೇ ಕುಸಿಯಿತೇ ಹೊರತು ಬೆಳೆಯಲಿಲ್ಲ.

ಅಷ್ಟಕ್ಕೂ ವಿಜಯ್‌ಕಾಂತ್ ಬೆನ್ನಿಗಿದ್ದದ್ದು ಆತನ ಜಾತಿ. ತಮಿಳುನಾಡಿನಲ್ಲಿ ಶೇ. 22 ರಷ್ಟಿರುವ ನಾಯ್ಡುಗಳು ವಿಜಯ್‌ಕಾಂತ್ ಬೆನ್ನಿಗಿದ್ದೂ ಈ ದುರ್ಗತಿ. ಇನ್ನು ಯಾವುದೇ ಬಲಾಢ್ಯ ಜಾತಿಯ ಬಲವಿಲ್ಲದೆ, ಪೆರಿಯಾರ್, ಅಣ್ಣಾದೊರೈಯಂಥವರ ಪೋಷಣೆಯಿಲ್ಲದೆ, ದ್ರಾವಿಡ ಚಳವಳಿಯ ಹಿನ್ನೆಲೆಯಾಗಲಿ, ಹುಟ್ಟಾ ತಮಿಳನೆಂಬ ಮನ್ನಣೆಯಾಗಲಿ ಇಲ್ಲದೆ ರಜನಿ ಕೇವಲ ತನ್ನ ಸಿನಿಮಾ ಅಭಿಮಾನಿಗಳನ್ನು ನಂಬಿ ರಾಜಕೀಯಕ್ಕಿಳಿಯುವುದು ದುಸ್ಸಾಧ್ಯ ದುಸ್ಸಾಹಸ ಮಾತ್ರ. ಸ್ವಂತ ಪಕ್ಷ ಸ್ಥಾಪಿಸಿ ಹೆಚ್ಚೆಂದರೆ ಹತ್ತೋ ಹದಿನೈದೋ ಸ್ಥಾನ ಗೆಲ್ಲಬಹುದಷ್ಟೇ. ಕಾಲ ಬದಲಾಗಿದೆ. ಎಂಜಿಆರ್ ತಮಿಳನಲ್ಲದೇ ಹೋದರೂ ತಮಿಳು ಮಣ್ಣಿನಲ್ಲಿ ತನ್ನದೇ ಉಳುಮೆ ಮಾಡಿದ ಹಿನ್ನೆಲೆಯಿತ್ತು, ಆಗಲೂ ಅಣ್ಣಾದೊರೆ ಸಿಥಿಲರಾದ ನಿರ್ವಾತವಿತ್ತು ನಿಜ. ಆದರೆ ಎಂಜಿಆರ್ ಹೊರತಾಗಿ ಮತ್ತೊಬ್ಬ ಸ್ಟಾರ್ ಹುಟ್ಟಿರಲಿಲ್ಲ. ಈಗ ಹಾಗಲ್ಲ, ರಜನಿಗೆ ಸರಿಸಾಟಿಯಾಗಿ ವಿಜಯ್ ಅಂಟೋನಿಯಿದ್ದಾನೆ. ಅಜಿತ್‌ಗೆ ಆತನದ್ದೇ ಅಭಿಮಾನಿ ಸೇನೆಯಿದೆ. ಕಮಲ್‌ನ ದಂಡೇ ಬೇರೆ. ಇಂಥ ಅಡೆತಡೆಗಳ ನಡುವೆ ರಜನಿ ಈಜಿ ಗೆಲ್ಲಬೇಕೆಂದರೆ ಒಂದೋ ಅದು ಪವಾಡ ಅಥವಾ ತಮಿಳರ ಅತಿರೇಕ ಮಾತ್ರ!


ವಿಜಯ್‌ಕಾಂತ್

...ಮುಂದುವರಿಯಿತು. ವಿಜಯಕಾಂತ್ ನೇತೃತ್ವದಲ್ಲಿ ...ಎಂಡಿಎಂಕೆಯ ವೈಕೋ, ಸಿಪಿಐ, ಸಿಪಿಎಂ, ತೋಲ್ ...ರುಮಾವಳವನ್‌ರ ವಿಡುದಲೈ ಚಿರುತೆಗಳ್ ...ರಿದಂತೆ ಆರು ಪ್ರಮುಖ ಪಕ್ಷಗಳು ತಮ್ಮದೇ ...ತ್ಯೇಕ 'ಮಕ್ಕಳ್ ನಲಕೂಟಣಿ' ಎಂಬ ಪ್ರತ್ಯೇಕ ಕೂಟ ...ಟ್ಟಿಕೊಂಡ ಫಲವಾಗಿ ಮತ್ತೆ ಜಯಲಲಿತಾಗೇ ...ಹುಮತ ಬಂತು. ವೈಕೋ ಮೂಲಕ ಜಯಾ ...ಡಿದ ರಾಜಕೀಯ ಆಟದ ಫಲವಾಗಿ ಎರಡನೇ ...ಾರಿಯೂ ಡಿಎಂಕೆ ಅಧಿಕಾರದಿಂದ ...ಂಚಿತವಾಯಿತು. ಆದರೆ ಗೆದ್ದ ಜಯಾ ಬಹುದಿನಗಳ ...ಲ ಬದುಕಲಿಲ್ಲ. ನಂತರ ಆಪ್ತ ಗೆಳತಿ ಶಶಿಕಲಾ ...ದ್ದುಗೆಯೇರಬೇಕೆಂಬ ದುರಾಸೆಯೂ ಫಲಿಸಲಿಲ್ಲ. ಅತ್ತ ...ನ್ನೀರ್ ಸೆಲ್ವಂನ ಬಂಡಾಯ, ಮತ್ತೊಂದೆಡೆ ...ೈಲುಪಾಲಾದ ಶಶಿಕಲಾ, ಈ ಮಧ್ಯೆ ...ೂರನೆಯವನಿಗೆ ಲಾಭವೆಂಬಂತೆ ಅನಿವಾರ್ಯ ...ುಖ್ಯಮಂತ್ರಿಯಾದ ಪಳನಿಚಾಮಿ. ಹೀಗೆ ಅಧಿಕಾರಸ್ಥ ...ಣ್ಣಾಡಿಎಂಕೆಯೂ ನೆಟ್ಟಗಿಲ್ಲ, ಅತ್ತ ವಿರೋಧಿ ...ಎಂಕೆಯಲ್ಲೂ ಕಚ್ಚಾಟ, ಅಂತಃಕಲಹ, ಅನಾಯಕತ್ವ. ...ಂಗ್ರೆಸ್ಸಾಗಲಿ, ಬಿಜೆಪಿಯಾಗಲಿ, ಜಿ.ಕೆ. ವಾಸನ್‌ನ ...ಮಿಳು ಮಾನಿಲ ಕಾಂಗ್ರೆಸ್ಸಾಗಲಿ, ವಣ್ಣಿಯಾರರ ...ಎಂಕೆಯಾಗಲಿ, ವೈಕೋನ ಎಂಡಿಎಂಕೆ, ...ಜಯ್‌ಕಾಂತ್‌ನ ಡಿಎಂಡಿಕೆ-ಹೀಗೆ ಯಾವೊಂದು ...ಕ್ಷವೂ ತನ್ನ ಸ್ವಂತಬಲದಿಂದ ಅಧಿಕಾರ ...ಡಿಯುವಂತಿಲ್ಲ, ಪ್ರತಿಯೊಬ್ಬರಿಗೂ ಅವರದೇ ಆದ ತಾಪತ್ರಯಗಳು ಒಡಕು, ಅನಾಯಕತ್ವ ಮತ್ತು ಅರಾಜಕ ಸನ್ನಿವೇಶ.

ರಾಜಕೀಯದ ಇಮೇಜ್

ಇದನ್ನು ಸೂಕ್ಷ್ಮವಾಗೇ ಗ್ರಹಿಸಿದ ರಜನಿಗಿದು ತನ್ನ ಆಟದ ಸಮಯ ಕೂಡಿ ಬಂದಂಥ ಸುವರ್ಣಾವಕಾಶ. ಎಂಜಿಆರ್ ನಂತರ ಅತೀಹೆಚ್ಚು ಅಭಿಮಾನಿಗಳು ದಕ್ಕಿದ್ದು ರಜನಿಗೇ. ರಜನಿ ರಾಜಕೀಯಕ್ಕೆ ಬರಬೇಕೆಂದೋ, ಬರುತ್ತಾರೆಂದೋ ಕಳೆದ ಹತ್ತು ವರ್ಷಗಳಿಂದಲೂ ವದಂತಿಗಳು ಹೊಗೆಯಾಡುತ್ತಲೇ ಇವೆ. ಅದಕ್ಕೆ ತಕ್ಕಂತೆಯೇ ತನ್ನ ಇಮೇಜನ್ನೂ ರಜನಿ ಬೆಳೆಸಿಕೊಂಡರು. ಪ್ರಮುಖ ನಗರಗಳಲ್ಲಿ ಬಡವರಿಗೆಂದೇ ಕಲ್ಯಾಣಮಂಟಪಗಳನ್ನು ಕಟ್ಟಿಸಿದ್ದು, ಭಾರತಿರಾಜ, ಕೆ. ಬಾಲಚಂದರ್, ಶಿವಾಜಿಪ್ರಭು, ಪಂಡರಿಬಾಯಿ, ಅಶೋಕ್‌ರಂಥ ಹಿರಿಯ ನಿರ್ದೇಶಕರು, ನಟರಿಗೆಲ್ಲ ಆರ್ಥಿಕವಾಗಿ ನೆರವಾಗಿದ್ದು, ಜೀವನಪೂರ್ತಿ ತಾನು ದುಡಿದಿದ್ದೆಲ್ಲವನ್ನೂ ಬಡವರ ಸೇವೆಗೆ ಮುಡುಪಿಟ್ಟ ಮಹಾದಾನಿಯೊಬ್ಬರನ್ನು ತನ್ನ ದತ್ತು ತಂದೆಯಾಗಿ ಸ್ವೀಕರಿಸಿದ್ದು, ಸಂಘಸಂಸ್ಥೆಗಳು ಅಭಿಮಾನಿಗಳಿಗೆ ನೆರವಾಗುತ್ತಲೇ ಬಂದಿದ್ದು ಇತ್ಯಾದಿಗಳೆಲ್ಲವೂ ರಜನಿಯ ಔದಾರ್ಯದ ಪ್ರತೀಕದಂತಿದ್ದರೂ ಪರೋಕ್ಷವಾಗದು ರಾಜಕೀಯದ ವಾಸನೆಯನ್ನೇ ಸೂಚಿಸುತ್ತಿತ್ತು, ಅದು ರಜನಿಗೆ ಹಳೇಯ ಎಂಜಿಆರ್ ಪಾತ್ರಗಳದ್ದೇ ಇಮೇಜೊಂದನ್ನು ಕಟ್ಟಿಕೊಟ್ಟಿತು.


ಇದಕ್ಕೆ ತಕ್ಕಂತೆ ರಜನಿಯ ನಿವಾಸವಿದ್ದ ಪೋಯೆಸ್ ಗಾರ್ಡನ್ನಿನಲ್ಲೊಂದು ಪ್ರಹಸನ ನಡೆಯಿತು. ಅದು ಜಯಲಲಿತಾ ಮುಖ್ಯಮಂತ್ರಿಯಾಗಿದ್ದ ಕಾಲ. ಅದೊಮ್ಮೆ ಟ್ರಾಫಿಕ್ ಪೊಲೀಸರು ಮುಖ್ಯಮಂತ್ರಿ ಜಯಾ ಕಾರಿಗೆ ದಾರಿ ಮಾಡಿಕೊಡುವುದಕ್ಕಾಗಿ ರಜನಿಯ ಕಾರನ್ನು ತಡೆದರು. ಆಗ ರಜನಿ ತನ್ನ ಕಾರನ್ನು ಹತ್ತಿ ನಿಂತರೆ ತಮ್ಮ ಅಭಿಮಾನದ ನಟನನ್ನು ನೋಡಲು ಮುತ್ತಿಕೊಂಡ ಜನಜಂಗುಳಿ ಹೇಗಿತ್ತೆಂದರೆ, ಅರೆಕ್ಷಣದಲ್ಲೇ ಸಹಸ್ರಾರು ಜನ ಕಿಕ್ಕಿರಿದು ಸಂಭವಿಸಿದ ಟ್ರಾಫಿಕ್ ಜಾಮ್‌ಗೆ ಮುಖ್ಯಮಂತ್ರಿಯ ಕಾರೇ ಮುಂಜರಿಯದಂತಾಯಿತು. ಅದು ಜಯಾ ವಿರುದ್ಧ ರಜನಿ ತೋರಿಸಿಕೊಟ್ಟ ತಾಕತ್ತು. 1996 ರ ಚುನಾವಣೆಯಲ್ಲಿ ಜಯಾ ವಿರುದ್ಧ ಜಿದ್ದಿಗೆ ಬಿದ್ದೇ ರಜನಿ ಡಿಎಂಕೆ-ಕಾಂಗ್ರೆಸ್ ಕೂಟವನ್ನು ಬಹಿರಂಗವಾಗಿ ಬೆಂಬಲಿಸಿದರು. ಅದರ ಫಲವೆಂಬಂತೆ ಡಿಎಂಕೆ ಅಧಿಕಾರಕ್ಕೆ ಬಂದು ಜಯಲಲಿತಾ ನೆಲ ಕಚ್ಚಬೇಕಾಯಿತು.

ಅಲ್ಲಿಗೆ ಒಂದಂತೂ ಸಾಬೀತಾಗಿತ್ತು, ರಜನಿ ತಮಿಳುನಾಡಿನ ಮತ್ತೊಬ್ಬ ಸಂಭಾವ್ಯ ಎಂಜಿಆರ್ ಮತ್ತು ರಾಜಕೀಯವಾಗಿ ಯಾರೂ ನಿರ್ಲಕ್ಷಿಸಲಸಾಧ್ಯ ಪವರ್‌ಸೆಂಟರ್. ಆವತ್ತಿನಿಂದ ಶುರುವಾದ ರಜನಿಯ ರಾಜಕೀಯ ಪರ್ವ ಇವತ್ತಿಗೂ ಮುಂದುವರಿದಿದೆ. ಅದರಲ್ಲೂ ಕಳೆದ ಲೋಕಸಭಾ ಚುನಾವಣೆಗೂ ಮುನ್ನ ಪ್ರಧಾನಿ ಅಭ್ಯರ್ಥಿ ನರೇಂದ್ರ ಮೋದಿಯೇ ಚೆನ್ನೈಗೆ ಬಂದು ರಜನಿ ಜೊತೆ ನಿಂತು ಫೋಟೋ ತೆಗೆಸಿಕೊಂಡ ನಂತರವಂತೂ ರಜನಿಯ ರಾಜಕೀಯ ಶಕ್ತಿಗೆ ಇನ್ನಿಲ್ಲದ ಪ್ರಾಮುಖ್ಯತೆ ಏರ್ಪಟ್ಟಿತು. ಅದೀಗ ಜಯಾ ಸಾವಿನ ನಂತರ ಅನಿವಾರ್ಯವೆಂಬಂತಾಗಿದೆ. ಎಂತೆಂಥವರೋ ತಮಿಳು ರಾಜಕಾರಣದಲ್ಲಿ ಫಸಲು ಬೆಳೆಯುತ್ತಾರೆಂದರೆ ತಾನೇಕೆ ಕೈಕಟ್ಟಿ ಕೂರಬೇಕೆಂಬ ನಿರ್ಧಾರಕ್ಕೆ ರಜನಿ ಬಂದಂತಿದೆ.

ಅಭಿಮಾನಿಗಳ ದಂಡು

ಇದೆಲ್ಲದರ ಪರಿಣಾಮವೆಂಬಂತೆ ಮೇ 15 ರ ಸೋಮವಾರದಂದು ಚೆನ್ನೈನ ರಾಘವೇಂದ್ರ ಸ್ವಾಮಿ ಮಠದಲ್ಲಿ ರಜನಿ ಅಭಿಮಾನಿಗಳ ವಿಶೇಷ ಸಮ್ಮೇಳನ ಏರ್ಪಾಟಾಗಿದೆ. ಅದು ಇಡೀ ತಮಿಳುನಾಡನ್ನೇ ಅಚ್ಚರಿಗೆ ತಳ್ಳಿದ ಪ್ರಸಂಗ. ಮೊದಲ ದಿನ ಮೂರು ಜಿಲ್ಲೆಗಳ ಅಭಿಮಾನಿಗಳನ್ನು ಆಹ್ವಾನಿಸಿದ್ದ ರಜನಿ ಪ್ರತಿಯೊಬ್ಬರ ಜೊತೆ ನಿಂತು ವಿಶೇಷ ಫೋಟೋ ಸೆಷನ್ ನಡೆಸಿದರು. ಅದರ ಮಾರನೇ ದಿನ ಇನ್ನೊಂದು ಭಾಗದ ನಾಲ್ಕೈದು ಜಿಲ್ಲೆಗಳ ಅಭಿಮಾನಗಳ ಸಭೆ. ಹೀಗೆ ತಮಿಳುನಾಡಿನ ಬೇರೆಬೇರೆ ಪ್ರಾಂತಗಳ ಐದಾರು ಜಿಲ್ಲೆಗಳ ಅಭಿಮಾನಿಗಳನ್ನೆಲ್ಲ ಹಿಂದೆಂದೂ ಇಲ್ಲದಂತೆ ಕರೆಕರೆದು ಸಮಾಲೋಚನೆಗಿಳಿದ ರಜನಿಯ ಉದ್ದೇಶದಲ್ಲೇ ರಾಜಕೀಯದ ಸ್ಪಷ್ಟ ಸುಳಿವಿತ್ತು, ಮೊದಲ ದಿನ 'ನಾನು ರಾಜಕೀಯಕ್ಕೆ ಬರಬೇಕೆಂದು ಬಹುದಿನಗಳಿಂದ ಒತ್ತಾಯವಿದೆ. ರಾಜಕೀಯಕ್ಕೆ ಬರುವುದು ತಪ್ಪಲ್ಲ, ಆದರೆ ದುಡ್ಡು ಮಾಡುವ ಉದ್ದೇಶವಿಟ್ಟುಕೊಂಡು ಯಾರೂ ರಾಜಕೀಯಕ್ಕೆ ಬರಬಾರದು. ದೈವೇಚ್ಛೆಯಿದ್ದರೆ ನಾನು ಕೂಡ ರಾಜಕೀಯಕ್ಕೆ ಬರುತ್ತೇನೆ....!' ಎಂದುಬಿಟ್ಟರು.

ರಜನಿಯ ಈ ಮಾತುಗಳಿಗೂ ಕರೆದ ಅಭಿಮಾನಿಗಳ ಸಭೆಗೂ ಮಾರ್ಮಿಕ ಸಂಬಂಧವಿದ್ದದ್ದು


ಸ್ಟಾಲಿನ್


ಸ್ಪಷ್ಟವಾಗಿತ್ತು. ಅದು ರಜನಿಯ ರಾಜಕೀಯ ಆರಂಗೇಟ್ರಂನ ಸ್ಪಷ್ಟ ಸೂಚನೆಯಾಗಿತ್ತು. ಇಷ್ಟಾಗಿದ್ದೇ ತಡ ತಮಿಳುನಾಡೇ ಕಲ್ಲೋಲವಾಯಿತು. ಸಿಂಬು, ನಾಜರ್ ಮುಂತಾದ ಸಣ್ಣಪುಟ್ಟ ನಟರೆಲ್ಲ ಸೇರಿಕೊಂಡು ರಜನಿಯ ರಾಜಕೀಯ ಪ್ರವೇಶದ ವಿರುದ್ಧ ತಮಿಳನೊಬ್ಬ ಇಲ್ಲಿನ ಮುಖ್ಯಮಂತ್ರಿಯಾಗಬೇಕೇ ಹೊರತು ಹೊರ ರಾಜ್ಯದವರಲ್ಲ ಎಂದು ವಿಶೇಷ ಗೋಷ್ಠಿ ಕರೆದು ಒತ್ತಾಯಕ್ಕಿಳಿದರು. ಇದಕ್ಕೆ ಪ್ರತಿಕ್ರಿಯೆಯೆಂಬಂತೆ ಮರುದಿನದ ಅಭಿಮಾನಿಗಳ ಫೋಟೋ ಸೆಷನ್‌ನಲ್ಲಿ 'ನಾನು ಹುಟ್ಟಿದ್ದು ತಮಿಳುನಾಡಿನ ಕೃಷ್ಣಗಿರಿಯಲ್ಲಿ, ಬೆಂಗಳೂರಿನಲ್ಲಿ 23 ವರ್ಷ ಇದ್ದೆನಷ್ಟೇ....' ಎಂಬ ಹೊಸದೊಂದು ಪಟಾಕಿ ಸಿಡಿಸಿಬಿಟ್ಟರು!

ಅದು ರಜನಿಯ ತಮಿಳು ಅಫಿಲೀಯೆಷನ್‌ನ ವರಸೆಯಷ್ಟೇ. ಅಲ್ಲಿಗೆ ರಜನಿಯ ರಾಜಕೀಯ ಪ್ರವೇಶವೆಂಬುದು ನಿಕ್ಕಿಯಾಗಿ ಹೋಯಿತು. ಐದು ದಿನ ನಡೆಯಬೇಕಿದ್ದ ಅಭಿಮಾನಿಗಳ ಸಮ್ಮೇಳನ ಮೂರನೇ ದಿನಕ್ಕೆ ಮುಕ್ತಾಯವಾಗಿತ್ತಾದರೂ ಕೊನೆಯ ದಿನ ರಜನಿ ಹೇಳಿದ ಮಾತಂತೂ ತಮಿಳು ರಾಜಕಾರಣದ ದಿಕ್ಕನ್ನೇ ಬದಲಿಸಿತ್ತು. 'ನೀವೆಲ್ಲರೂ ಯುದ್ಧಕ್ಕೆ ಸಿದ್ಧರಾಗಿ. ಯುದ್ಧ ಅನಿವಾರ್ಯವಾದ ದಿನ ನಾನು ಖಂಡಿತ ನಿಮ್ಮೆಲ್ಲರನ್ನೂ ಕರೆಯುತ್ತೇನೆ. ಯುದ್ಧಕ್ಕೆ ನೀವು ಸಿದ್ಧರಾಗಿರಬೇಕು....!'


ಅಲ್ಲಿಗೆ ರಜನಿಯ ರಾಜಕೀಯ ಪ್ರವೇಶವೆಂಬುದು ನಿರ್ಧಾರವಾಗಿತ್ತು, ಅದು ದ್ರಾವಿಡ ಸಿದ್ಧಾಂತಿಗಳು, ಪೆರಿಯಾರ್ ವಾದಿಗಳು, ತಮಿಳು ಭಾಷಾಂಧರ ಹುತ್ತಕ್ಕೇ ಕೈಯಿಟ್ಟಂತಾಗಿತ್ತು. ರಾತ್ರೋರಾತ್ರಿ ಹುಟ್ಟಿಕೊಂಡ 'ತಮಿಳು ಮಕ್ಕಳ್ ಪಡೈ' ನೂರಾರು ಜನರನ್ನು ಸೇರಿಸಿ ರಜನಿಯ ಭೂತದಹನ ಮಾಡಿದ್ದು ಒಂದೆಡೆಯಾದರೆ ಇದಕ್ಕೆ ಪ್ರತಿಯಾಗಿ ರಜನಿ ಅಭಿಮಾನಿಗಳು ಬೀದಿಗಿಳಿದದ್ದು ಮತ್ತೊಂದೆಡೆ. ರಜನಿ ರಾಜಕೀಯಕ್ಕೆ ಬರುವುದಂತೂ ನಿಚ್ಚಳಗೊಂಡಿದೆ. ಆದರೆ ಪ್ರಶ್ನೆಯಿರುವುದು ಸ್ವಂತ ಪಕ್ಷ ಕಟ್ಟುತ್ತಾರಾ? ಬಿಜೆಪಿ ಸೇರುತ್ತಾರಾ? ಅಥವಾ ಈಗಿರುವ ಡಿಎಂಕೆ, ಅಣ್ಣಾಡಿಎಂಕೆಯಂಥ ಬೇರುಬಿಟ್ಟ ಯಾವುದಾದರೂ ದ್ರಾವಿಡ ಪಕ್ಷವನ್ನು ಸೇರುತ್ತಾರಾ ಎಂಬುದಷ್ಟೇ.

ಏನೇ ಆದರೂ ರಜನಿಯ ಎಂಟ್ರಿಯೆಂಬುದು ತಮಿಳು ರಾಜಕಾರಣದ ದಿಕ್ಕು ಬದಲಿಸಲಿದೆ. ರಜನಿ ಮತ್ತೊಬ್ಬ ಎಂಜಿಆರ್ ಆಗುತ್ತಾರಾ ಅಥವಾ ವಿಜಯ್‌ಕಾಂತ್‌ರಂತೆ ಠುಸ್ ಪಟಾಕಿಯಾಗುತ್ತಾರಾ ಎಂಬುದಷ್ಟೇ ಕಾಲ ನಿರ್ಧರಿಸಲಿದೆ.

■ ರಾ. ಸೋಮನಾಥ್


ತಮಿಳು ಭಾಷಾಂಧರಿಂದ ಭೂತದಹನ

ಮೈಸೂರು: ಸಿದ್ದು ವಿರುದ್ಧ ವಿಶ್ವನಾಥ್ ಗೋಣಗಾಟದ ಹಕೀಕತ್ತು


ಸಿದ್ದರಾಮಯ್ಯ

ಮುಖ್ಯಮಂತ್ರಿ ಸಿದ್ದರಾಮಯ್ಯ ಕಾಂಗ್ರೆಸ್‌ಗೆ ಬಂದದ್ದು ಹೇಗೆ? ಇದು ಮಾಜಿ ಸಂಸದ ಅಡಗೂರು ಎಚ್.ವಿಶ್ವನಾಥ್ ಹುಟ್ಟು ಹಾಕಿರುವ ಕಾಂಟ್ರವರ್ಷಿಯಲ್ ಪ್ರಶ್ನೆ. "ನನ್ನನ್ನು ಕಾಂಗ್ರೆಸ್‌ಗೆ ಕರೆತಂದದ್ದು ಯಾವ ರಾಜ್ಯ ಕಾಂಗ್ರೆಸ್ ಲೀಡರೂ ಅಲ್ಲ, ರಾಷ್ಟ್ರ ನಾಯಕರೇ ನನ್ನನ್ನು ಕಾಂಗ್ರೆಸ್‌ಗೆ ಬರಮಾಡಿ ಕೊಂಡರು" ಎನ್ನುವ ಮೂಲಕ ಈ ಪ್ರಶ್ನೆಗೆ ಸಿದ್ದರಾಮಯ್ಯ ಉತ್ತರ ಕೊಟ್ಟಿದ್ದಾರೆ. ಮೈಸೂರಿನ ಕೆ.ಆರ್.ನಗರದಲ್ಲಿ ಕೂತುಕೊಂಡು ವಿಶ್ವನಾಥ್ "ಸಿದ್ದರಾಮಯ್ಯ ಅವರು ಕಾಂಗ್ರೆಸ್ ಸೇರಲು ನಾನೇ ಕಾರಣ, ಆ ಮೂಲಕ ಸಿದ್ದರಾಮಯ್ಯನವರು ದೊಡ್ಡ ನಾಯಕನಾಗಿ ಹೊರ ಹೊಮ್ಮಲು, ಮುಖ್ಯಮಂತ್ರಿಯಾಗಲು ಪರೋಕ್ಷವಾಗಿ ನನ್ನ ಇಚ್ಛಾಶಕ್ತಿ ಕಾರಣ" ಎಂಬ ಮಾತುಗಳನ್ನು ತೂರಿಬಿಡು ತ್ತಿರುವುದೇಕೆ? ಎಂದು ಮೈಸೂರು ಭಾಗದ ಜನತೆ ಕೂತಲ್ಲಿ-ನಿಂತಲ್ಲಿ, ಹೋದಲ್ಲಿ ಬಂದಲ್ಲಿ, ಟೀ ಅಂಗಡಿಯಲ್ಲಿ, ಬಸ್‌ನಿಲ್ದಾಣದಲ್ಲಿ ಚರ್ಚೆಗೆ ಇಳಿದಿದ್ದಾರೆ. ವಿಶ್ವನಾಥ್ ಎತ್ತಿದ ಕಾಂಟ್ರವರ್ಷಿ ಪ್ರಶ್ನೆಗಳಿಗೆ ತಲೆಬಾಲ ಬೆಳೆದು ರಾಜ್ಯ, ರಾಷ್ಟ್ರದ ಉದ್ದಗಲಕ್ಕೂ ಹರಿದಾಡಿ "ಸಿದ್ದರಾಮಯ್ಯ ಅವರು ಕಾಂಗ್ರೆಸ್ ಸೇರಲು ನಾನು ಕಾರಣ, ನಾನು ಕಾರಣ" ಎಂದು ಹೇಳಿಕೊಳ್ಳುವ ನಾಯಕರು ಹುಟ್ಟಿಕೊಂಡಿದ್ದಾರೆ. ಇದರ ಜೊತೆಗೆ ಕೆಲವು ಸ್ಥಳೀಯ ಮುಖಂಗರು ತಾವೂ ಕೂಡ ಪರೋಕ್ಷವಾಗಿ ಸಿದ್ದರಾಮಯ್ಯ ಅವರು ಕಾಂಗ್ರೆಸ್ ಸೇರಲು ಕಾರಣ ಎಂದು ಮಾತನಾಡಿಕೊಳ್ಳುತ್ತಿದ್ದಾರೆ.

ಸಿದ್ದರಾಮಯ್ಯ ಅವರು ಅಧಿಕಾರವಿಲ್ಲದೆ ಕುಳಿತಿದ್ದಾಗ ಸ್ಥಳೀಯ ಪುಢಾರಿಯೊಬ್ಬ ಸಿದ್ದರಾಮಯ್ಯ ಅವರ ಬಳಿ ಹೋಗಿ "ಸಾರ್ ನೀವು ಕಾಂಗ್ರೆಸ್ ಸೇರಿದರೆ ನಿಮಗೆ ಒಳ್ಳೆಯ ಭವಿಷ್ಯವಿದೆ" ಎಂದು ಹೇಳಿದ್ದನಂತೆ. ಅಂದಿನಿಂದ ಸಿದ್ದರಾಮಯ್ಯ ಅವರು ಆ ದಿಕ್ಕಿನಲ್ಲಿ ಯೋಚಿಸಲು ಶುರು ಮಾಡಿದರಂತೆ, ಮುಂದೊಂದು ದಿನ ಅವರು ಕಾಂಗ್ರೆಸ್ ಸೇರಿ ಮುಖ್ಯಮಂತ್ರಿಯೂ ಆದಮೇಲೆ ಸಿದ್ದರಾಮಯ್ಯ ಅವರು ಕಾಂಗ್ರೆಸ್ ಸೇರಲು, ಮುಖ್ಯಮಂತ್ರಿಯಾಗಲು ಒಂದು ರೀತಿಯಲ್ಲಿ ತಾನೂ ಕಾರಣ ಎಂದು ಹೇಳಿಕೊಂಡು ಆ ಪುಢಾರಿ ತಿರುಗುತ್ತಿದ್ದಾನೆ.


ಒಬ್ಬ ವ್ಯಕ್ತಿ ಉನ್ನತ ಸ್ಥಾನಕ್ಕೇರಿದಾಗ ಅದರ ಕ್ರೆಡಿಟ್ ಅನ್ನು ಕ್ಲೈಮ್ ಮಾಡಿಕೊಳ್ಳಲು ಸಾಕಷ್ಟು ಜನ ಹಾತೊರೆಯುವುದು ಹೊಸದೇನೂ ಅಲ್ಲ, ಅದು ಅವರಿಗೆ ಒಂದು ರೀತಿಯ ವಿಲಕ್ಷಣ ಸಂತೋಷ. ಮಾಮೂಲಿ ಜನರು ಈ ರೀತಿ ಹೇಳಿಕೊಳ್ಳುವುದೇನೋ ಸಹಜ. ಆದರೆ, ಮಾಜಿ ಸಂಸದ ವಿಶ್ವನಾಥ್ ಅವರು ಏಕೆ ಈ ರೀತಿ ವರ್ತಿಸುತ್ತಿದ್ದಾರೆ ಎಂಬುದೇ ಅರ್ಥವಾಗುತ್ತಿಲ್ಲ, ದಿನೇದಿನೇ ರಬ್ಬರ್ ಎಳೆದಂತೆ ಎಳೆಯುತ್ತಿದ್ದಾರೆ. ಅದಕ್ಕೆ ಸಿದ್ದರಾಮಯ್ಯ ಅವರು ತಡೆದುಕೊಳ್ಳಲಾಗದೆ "ನಾನು ಕಾಂಗ್ರೆಸ್ ಸೇರಲು ವಿಶ್ವನಾಥ್ ಅವರೇನು ಕಾರಣ ಅಲ್ಲ, ಅಹಮದ್ ಪಟೇಲ್ ಕಾರಣ" ಎಂದು ಪ್ರತಿಕ್ರಿಯೆ ನೀಡಿದ್ದಾರೆ. ಅದಕ್ಕೆ ಪ್ರತಿಯಾಗಿ ವಿಶ್ವನಾಥ್ ಮತ್ತೊಂದು ಪತ್ರಿಕಾಗೋಷ್ಠಿ ಕರೆದು "ಸಿದ್ದರಾಮಯ್ಯ ಈ ರೀತಿ ಹೇಳಿರುವುದು ದಲಿತನಾಯಕ ಮಲ್ಲಿಕಾರ್ಜುನ ಖರ್ಗೆ ಮುಂತಾದ ನಾಯಕರಿಗೆ ಮಾಡಿದ ಅವಮಾನ" ಎಂದು ಬೆಂಕಿ ಹಚ್ಚಿದ್ದಾರೆ.


ಸಾಲದ್ದಕ್ಕೆ "ಕೊಡಗು ಜಿಲ್ಲೆಯಲ್ಲಿ ನಡೆಯಲಿರುವ ಸರ್ಕಾರದ 4 ವರ್ಷದ ಸಾಧನಾ ಸಮಾವೇಶದಲ್ಲಿ ಪಾಲ್ಗೊಂಡು ಸರ್ಕಾರದ ಕಾರ್ಯವೈಖರಿ ಬಗ್ಗೆ ಮಂಗಳಾರತಿ ಮಾಡುತ್ತೇನೆ, 3 ದಿನಗಳ ಕಾಲ ಉತ್ತರ ಕರ್ನಾಟಕ ಭಾಗದಲ್ಲಿ ಪ್ರವಾಸ ಮಾಡಿ ಸ್ನೇಹಿತರನ್ನು ಭೇಟಿ ಮಾಡಿ ಮುಂದೆ ಏನೇನು ಮಾಡಬೇಕು ಎಂದು ತೀರ್ಮಾನ ಕೈಗೊಳ್ಳುತ್ತೇನೆ" ಎಂದು ಅಬ್ಬರಿಸಿದ್ದಾರೆ. ವಿಶ್ವನಾಥ್ ಪ್ರಕಾರ ಸಿದ್ದರಾಮಯ್ಯನವರು ಅವರನ್ನು ತೀರಾ ಕಡೆಗಣಿಸಿದರಂತೆ. ಹಾಗಾಗಿ ತನ್ನ ಹಾದಿ ತಾನು ನೋಡಿಕೊಳ್ಳಬೇಕಾಯ್ತು ಎಂಬುದು ವಿಶ್ವನಾಥ್ ಅವರ ವಾದ. ಇರಬಹುದೇನೋ, ಸಿದ್ದರಾಮಯ್ಯ ಅವರು ತಮ್ಮ ರಾಜಕೀಯ ಜಂಜಾಟದಲ್ಲಿ ವಿಶ್ವನಾಥ್‌ರನ್ನು ಸ್ವಲ್ಪಮಟ್ಟಿಗೆ ಕಡೆಗಣಿಸಿರಬಹುದು ಎಂದಿಟ್ಟುಕೊಳ್ಳೋಣ. ಆದರೆ ಸದಾಕಾಲ "ಪಕ್ಷವೇ ನನಗೆ ಮುಖ್ಯ, ಪಕ್ಷದ ಹಿತ ದೃಷ್ಟಿಯಿಂದ ಎಲ್ಲವನ್ನೂ ಒಪ್ಪಿಕೊಳ್ಳುತ್ತೇನೆ" ಎನ್ನುವ ವಿಶ್ವನಾಥ್ ಅವರೇ ಸಿದ್ದರಾಮಯ್ಯ ಅವರನ್ನು ಭೇಟಿಯಾಗಿ ತಮ್ಮನ್ನು ಕಡೆಗಣಿಸಿರು ವುದನ್ನು ಪ್ರಶ್ನಿಸಿ ಸಂಬಂಧ ಉತ್ತಮಪಡಿಸಿ ಕೊಳ್ಳಬಹುದಿತ್ತು. ಹೋಗಲಿ ಈ ವಿಷಯ ಅವರ ಸ್ವಾಭಿಮಾನಕ್ಕೆ ಅಡ್ಡಿಯಾಗುತ್ತದೆ ಎಂದು ಹೇಳುವುದಾದರೆ ಇತ್ತೀಚೆಗೆ ಮೈಸೂರಿನ ಕುರುಬ ಸಮಾಜದವರೇ ಒಂದು ಸಭೆ ನಡೆಸಿ ನಂತರ ಸಿದ್ದರಾಮಯ್ಯ ಅವರನ್ನು ಭೇಟಿ ಮಾಡಿ ವಿಶ್ವನಾಥ್ ಅವರನ್ನು ಪಕ್ಷದಲ್ಲೇ ಉಳಿಸಿಕೊಳ್ಳಲು ಮನವಿ ಮಾಡಿದ್ದರು. ಆಗ ಸಿದ್ದರಾಮಯ್ಯನವರು "ವಿಶ್ವನಾಥ್‌ರನ್ನು ಕರೆದುಕೊಂಡು ಬನ್ನಿ ಮಾತನಾಡುತ್ತೇನೆ" ಎಂದು ಹೇಳಿದ್ದರು. ಆಗಲಾದರೂ ವಿಶ್ವನಾಥ್ ಸಮಸ್ಯೆ ಬಗೆ ಹರಿಸಿಕೊಳ್ಳಬಹುದಿತ್ತು. ಆದರೆ ವಿಶ್ವನಾಥ್, ಸಿದ್ದರಾಮಯ್ಯರನ್ನು ಭೇಟಿ ಮಾಡಲು ಮುಂದಾಗಲೇ ಇಲ್ಲ.


ನಂತರ ಸಂಸದ ಆರ್.ಧ್ರುವನಾರಾಯಣ, ಮೈಲ್ಯಾಕ್ ಅಧ್ಯಕ್ಷ ಎಚ್.ಎ.ವೆಂಕಟೇಶ್, ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಡಾ.ಬಿ.ಜೆ.ವಿಜಯ್ ಕುಮಾರ್, ಮುಖಂಡ ಡಾ.ಎಚ್.ಎನ್. ರವೀಂದ್ರ ಅವರು ವಿಶ್ವನಾಥ್‌ರ ಕೆ.ಆರ್.ನಗರದ ಮನೆಗೆ ತೆರಳಿ "ಬಹಳ ವರ್ಷಗಳಿಂದ ಪಕ್ಷದಲ್ಲಿ ಸೇವೆ ಸಲ್ಲಿಸಿದ್ದೀರಿ. ನಿಮ್ಮಂತಹ ನಿಷ್ಠಾವಂತರು ಪಕ್ಷದಲ್ಲಿರಬೇಕು. ಇಂತಹ ಸಂಕಷ್ಟದ ಸಂದರ್ಭದಲ್ಲಿ ಪಕ್ಷ ಬಿಡಬಾರದು" ಎಂದು ಕೋರಿದಾಗಲಾದರೂ ವಿಶ್ವನಾಥ್, ಸಿದ್ದು ಜೊತೆ ಮಾತುಕತೆ ನಡೆಸಬಹುದಿತ್ತು.

ಮೈಸೂರಿನ ಕಾರ್ಯಕ್ರಮವೊಂದರಲ್ಲಿ ಪಾಲ್ಗೊಳ್ಳಲು ಬಂದಿದ್ದ ಮಾಜಿ ಸಚಿವ ಸತೀಶ್ ಜಾರಕಿಹೊಳಿಯವರು ವಿಶ್ವನಾಥ್ ಅವರನ್ನು ಭೇಟಿ ಮಾಡಿ ಮನವೊಲಿಸುವ ಮಾತನಾಡಿದ್ದರು. ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಜಾರಕಿಹೊಳಿ "ಎಲ್ಲಾ ವಿಚಾರಗಳನ್ನು ಪರಿಗಣಿಸಿ ಸಮಸ್ಯೆ ಪರಿಹರಿಸಲು ಸಿದ್ದರಾಮಯ್ಯ ಅವರು ಹೇಳಿದ್ದಾರೆ. ನಾವು ಕಾಯುತ್ತಿದ್ದೇವೆ" ಎಂದು ಹೇಳಿ ಹೋಗಿದ್ದರು. ಆವಾಗಲೂ ಸಿದ್ದು ಜೊತೆ ಮಾತನಾಡಿ ಭಿನ್ನಾಭಿಪ್ರಾಯ ಬಗೆ ಹರಿಸಿಕೊಳ್ಳಬಹುದಿತ್ತು.

ಇಷ್ಟಕ್ಕೂ ಇವರೆಲ್ಲರನ್ನು ವಿಶ್ವನಾಥ್ ಬಳಿಗೆ ಕಳಿಸಿದ್ದೇ ಸಿದ್ದರಾಮಯ್ಯ ಎಂದು ಬಲ್ಲ ಮೂಲಗಳಿಂದ ತಿಳಿದುಬಂದಿದೆ. ಆದರೂ ವಿಶ್ವನಾಥ್ ಅವರು ಮನವೊಲಿಕೆಗೆ ಸಿದ್ಧರಿಲ್ಲ, ಹಾಗಾದರೆ ವಿಶ್ವನಾಥ್ ಅವರ ಉದ್ದೇಶ ಏನಾಗಿತ್ತು, ಇವರನ್ನು ಸಮಾಧಾನಪಡಿಸಲು ಸ್ವತಃ ಸಿದ್ದರಾಮಯ್ಯ ಅವರೇ ಖುದ್ದಾಗಿ ಬಂದು ತನ್ನ ಕಾಲಿಗೆ ಬಿದ್ದು ಪಕ್ಷ ಬಿಟ್ಟು ಹೋಗಬೇಡಿ ಎಂದು ಅಂಗಲಾಚಬೇಕು ಎಂಬುದು ವಿಶ್ವನಾಥ್ ಅವರ ಇರಾದೆಯಾಗಿತ್ತೆ?



ಜೆ.ಟಿ.ದೇವೇಗೌಡ


ಧ್ರುವನಾರಾಯಣ


ಸತೀಶ್ ಜಾರಕಿಹೊಳಿ

ಇತ್ತೀಚೆಗೆ ಮಂತ್ರಿಗಿರಿ ಕಳೆದುಕೊಂಡಿದ್ದ ಅಂಬರೀಷ್‌ರನ್ನು ಇದೇ ಸಿದ್ದು ನೇರವಾಗಿ ಭೇಟಿ ಮಾಡಿ ಸಮಾಧಾನಪಡಿಸಲಿಲ್ಲವೆ, ಹಾಗೆಯೇ ವಿಶ್ವನಾಥ್ ಅವರನ್ನೂ ಭೇಟಿ ಮಾಡಿ ಸಮಾಧಾನಪಡಿಸಲಿ ಎಂಬ ವಾದವೂ ಕೇಳಿಬರಬಹುದು. ಆದರೆ ಸಿದ್ದರಾಮಯ್ಯ ಅವರು ವಿಶ್ವನಾಥ್ ಅವರನ್ನು ಮುಖ ನೋಡಿ ಮಾತನಾಡಿಸಲಾಗದಷ್ಟು ಮಟ್ಟಿಗೆ ಸಿದ್ದರಾಮಯ್ಯರನ್ನು ವಿಶ್ವನಾಥ್ ಚುಚ್ಚಿದ್ದಾರೆ. ಇನ್ನು ಸಿದ್ದರಾಮಯ್ಯ ಅವರು ಹೇಗೆ ವಿಶ್ವನಾಥ್ ಅವರನ್ನು ಸಮಾಧಾನಪಡಿಸುತ್ತಾರೆ. ಇದನ್ನೆಲ್ಲ ನೋಡಿದರೆ ವಿಶ್ವನಾಥ್ ಅವರಿಗೆ ಕಾಂಗ್ರೆಸ್‌ನಲ್ಲಿ ಉಳಿಯುವ ಆಸೆಗಳಿಲ್ಲ ಎನ್ನಿಸುತ್ತದೆ. ಕಾಂಗ್ರೆಸ್ ಬಿಡುವ ಸಲುವಾಗಿಯೆ ಇಷ್ಟೆಲ್ಲ ಡ್ರಾಮಾ ಮಾಡುತ್ತಿದ್ದಾರೆ ಅನ್ನಿಸುತ್ತದೆ. ಇಲ್ಲದಿದ್ದರೆ ಕಾಂಗ್ರೆಸ್ ಮುಖಂಡರು ವಿಶ್ವನಾಥ್ ಅವರನ್ನು ಭೇಟಿ ಮಾಡಿ ಮನವೊಲಿಸಿದರೂ ಮತ್ತೆಮತ್ತೆ ಎಗರಾಡುತ್ತಿರುವುದೇಕೆ? ಆದಕ್ಕೆಲ್ಲಾ ಉತ್ತರ ವಿಶ್ವನಾಥ್ ಅವರ ಅನುಕಂಪ ಆಧಾರಿತ ರಾಜಕೀಯ ನಡೆ.

ಅಂದರೆ ವಿಶ್ವನಾಥ್ ಅವರು ಜೆಡಿಎಸ್ ಪಕ್ಷ ಸೇರುವುದು ಈಗಾಗಲೇ ನಿರ್ಧಾರವಾಗಿದ್ದು, ಪಕ್ಷ ಸೇರ್ಪಡೆಯ ದಿನಾಂಕ ನಿಗದಿಯಷ್ಟೇ ಬಾಕಿ ಇದೆ. ವಿಶ್ವನಾಥ್ ಅವರು ಸುಮ್ಮನೆ ಜೆಡಿಎಸ್ ಸೇರುವುದಿದ್ದರೆ ಕಾಂಗ್ರೆಸ್ಸಿಗರಿಗೆ "ಸ್ವಾಮಿ ನನ್ನ ಭವಿಷ್ಯದ ದೃಷ್ಟಿಯಿಂದ ಜೆಡಿಎಸ್ ಸೇರುತ್ತಿದ್ದೇನೆ, ಕಾಂಗ್ರೆಸ್‌ನಲ್ಲಿದ್ದರೆ ನಾನು ಕನಿಷ್ಠ ವಿಧಾನ ಪರಿಷತ್ ಸದಸ್ಯನೂ ಆಗಲಾರೆ. ಕೊನೆಪಕ್ಷ ಜೆಡಿಎಸ್ ಸೇರಿ ಎಂಎಲ್‌ಎಯಾದರೂ ಆಗುತ್ತೇನೆ. ನನ್ನನ್ನು ಯಾರೂ ತೆಗಳಬೇಡಿ. ಸಿದ್ದರಾಮಯ್ಯನವರೇ ನೀವು ಕೂಡ ಏನು ತಿಳಿದುಕೊಳ್ಳಬೇಡಿ" ಎಂದಿದ್ದರೆ ಸಿದ್ದರಾಮಯ್ಯನವ[…] ವಿಶ್ವನಾಥ್‌ರನ್ನು ಕಟ್ಟಿ ಹಾಕುತ್ತಿದ್ದರೆ? ಆದರೆ, ಯಾ[…] ಕಾಂಟ್ರವರ್ಷಿಯೂ ಇಲ್ಲದೆ ಕಾಂಗ್ರೆಸ್ ಬಿಟ್ಟರೆ ಜೆಡಿಎಸ್‌ನ[…] ತನಗೆ ಯಾವ ಮರ್ಯಾದೆ ಸಿಗುವುದಿಲ್ಲ ಎಂಬ ಕಾರಣ[…] ಕಾಂಟ್ರವರ್ಷಿಗಳನ್ನು ಹುಟ್ಟುಹಾಕಿದ್ದಾರೆ.


ವಿಶ್ವನಾಥ್

ಬರಿ ಇಷ್ಟೇ ಆಗಿದ್ದರೆ ವಿಶ್ವನಾಥ್ ಕಾಂಗ್ರೆಸ್ ಬ[…] ಜೆಡಿಎಸ್ ಸೇರುತ್ತಿರುವುದಕ್ಕೆ ಒಂದು ಸಣ್ಣ ಸಮರ್ಥ[…] ಸಿಕ್ಕಂತಾಗುತ್ತಿತ್ತು, ಆದರೆ ಮುಂದಿನ ಚುನಾವಣೆಗೆ ಸ್ಪರ್ಧಿ[…] ಗೆಲುವು ಸಾಧಿಸುವುದು ಹೇಗೆ? ಎಂಬ ಪ್ರಶ್ನೆ ವಿಶ್ವನಾಥ್‌[…] ಕಾಡಿರಬೇಕು. ಆದಕ್ಕಾಗಿ ಸಿದ್ದರಾಮಯ್ಯ ಅವರನ್ನು ಕಾಂಗ್ರೆ[…] ಕರೆದುಕೊಂಡುಬಂದು ಮುಖ್ಯಮಂತ್ರಿಯಾಗುವ ತ[…] ಜೊತೆಗಿದ್ದು ಶ್ರಮಿಸಿದ್ದನ್ನು ನೆನೆಸಿಕೊಳ್ಳದ ಸಿದ್ದರಾಮ[…] ತನ್ನನ್ನು ಹೀನಾಯವಾಗಿ ನಡೆಸಿಕೊಂಡರು ಎಂದು ಜನರ[…] ಸಿಂಪತಿ ಗಿಟ್ಟಿಸಿದರೆ ಮುಂದಿನ ಚುನಾವಣೆಯಲ್ಲಿ[…] ಗೆಲುವು ಸುಲಭ ಎಂಬುದು ವಿಶ್ವನಾಥ್ ಲೆಕ್ಕಾಚ[…] ಹಾಗಾಗಿ ಸಿದ್ದರಾಮಯ್ಯ ಬಾಯಿ ಮುಚ್ಚಿಕೊಂ[…] ಸುಮ್ಮನಿದ್ದರೂ ವಿಶ್ವನಾಥ್ ಸಿದ್ದರಾಮಯ್ಯ ಅವರನ್ನು ಸು[…] ಬಿಡುತ್ತಿಲ್ಲ.

ವಿಶ್ವನಾಥ್ ಅವರು ಇಷ್ಟೆಲ್ಲ ಡ್ರಾಮಾ ಮಾಡಿ ಜೆಡಿ[…] ಸೇರಿದರೆ ಅಲ್ಲಿ ಅವರಿಗೆ ಹೂವಿನ ಹಾಸಿಗೆ ಸಿದ್ಧವಾಗಿದೆ[…] ಇಲ್ಲ, ಅಲ್ಲೂ ಕಲ್ಲುಮುಳ್ಳಿನ ಹಾದಿಯೇ ಕಾದಿದೆ. ಈಗಾ[…] ವಿಶ್ವನಾಥ್ ಅವರು ಜೆಡಿಎಸ್‌ಗೆ ಸೇರಿದರೆ ಅವರಿ[…] ಹುಣಸೂರು ಕ್ಷೇತ್ರದ ವಿಧಾನ ಸಭೆ ಟಿಕೆಟ್ ಕಾಯ್ದಿರಿಸಿ[…] ಎಚ್.ಡಿ.ದೇವೇಗೌಡ ಅಂಡ್ ಸನ್ ಕುಮಾರಸ್ವಾಮಿ. ಅ[…] ವಿಶ್ವನಾಥ್ ಅವರು ಜೆಡಿಎಸ್ ಸೇರುತ್ತಿದ್ದಾರೆ ಎಂಬ […] ಹರಡುತ್ತಿದ್ದಂತೆ ಶಾಸಕ ಜಿ.ಟಿ.ದೇವೇಗೌಡ ಅಂಡು […] ಬೆಕ್ಕಿನಂತೆ ಓಡಾಡುತ್ತಿದ್ದರು. ಇನ್ನು ವಿಶ್ವನಾಥ್ ಅ[…] ಹುಣಸೂರು ಕ್ಷೇತ್ರದ ಟಿಕೆಟ್ ನಿಗದಿಯಾಗುತ್ತಿದ್ದಂತೆ[…] ತನ್ನ ಮಗನಿಗೆ ಸಿಗಬೇಕಿದ್ದ ಟಿಕೆಟ್ ವಿಶ್ವನಾ[…] ಪಾಲಾಗುತ್ತಿದೆಯಲ್ಲ ಎಂದು ರೊಚ್ಚಿಗೆದ್ದ ಜಿ.ಟಿ.ದೇವೇಗೌ[…] ವಿಶ್ವನಾಥ್ ಅವರನ್ನು ಹಣಿಯಲು ದಾರಿ ಹುಡುಕುತ್ತಿ[…] ಜಿಟಿಡಿಯ ಸಿಟ್ಟು ಎಷ್ಟಾಗಿದೆ ಎಂದರೆ ಜೆಡಿಎಸ[…] ಒಂದು ವಿಶ್ವನಾಥ್ ಉಳಿಯಬೇಕು ಇಲ್ಲ ತಾನು ಇರಬೇ[…] ಎಂಬಂತಾಗಿದೆ.

ಇಂತಹ ಸಂದರ್ಭದಲ್ಲಿ ಸಿದ್ದು ಮತ್ತು ಕಾಂಗ್[…] ತಾನೊಂದು ಬಗೆದರೆ ದೈವವೊಂದು ಬಗೆಯಿ[…] ಎಂಬಂತಾಗಿದೆ ವಿಶ್ವನಾಥ್ ಅವರ ಪರಿಸ್ಥಿತಿ. ಈಗ ಜೆಡ[…] ಎಂಬ ಕಲ್ಲು ಮುಳ್ಳಿನ ಹಾದಿಯಲ್ಲಿ ವಿಶ್ವನಾಥ್ ಅ[…] ಹೇಗೆ ನಡೆಯುತ್ತಾರೆ ಕಾದು ನೋಡಬೇಕು. ■


ಅತಿಥಿ ಮಾಡಿದ ಅವಮಾನ.....

ಅಪರೂಪಕ್ಕೆ ಮನೆಗೆ ಬರುತ್ತಿರುವ ಅತಿಥಿ
ತನ್ನ ಲಾಭಕ್ಕಾಗಿ ಬರುತ್ತಿದ್ದಾನೆ
ಅಂದಾಗ ಬೇಸರವಾಗಲಿಲ್ಲ
ತನ್ನ ಊಟವನ್ನು ತಾನೇ ತಂದು
ಉಂಡು ಹೋದಾಗ ಮಾತ್ರ
ಸಹಿಸಲಾರದಷ್ಟು ನೋವಾಯಿತು
* * *

ಮನೆಗೆ ಅತಿಥಿಗಳು ಬಂದಾಗ
ತಯಾರಾಗುವ ವಿಶೇಷ ಅಡುಗೆಗಾಗಿ
ಕಾತರಿಸಿದ್ದ ಮಕ್ಕಳಿಗೆ
ಅತಿಥಿಗಳು ಹೋಟೆಲ್ ಖಾದ್ಯವ ತಂದು
ತಿಂದುಂಡು ಹೋಗುವುದ ಕಂಡು ಬೆರಗು!
* * *


ಅದುವರೆಗೂ ಕಾಲೇಜಿನಲ್ಲಿ
ಅವಳ ಸ್ಥಾನಮಾನ ಹೇಗೋ ಇತ್ತು
ಈಗ ದಲಿತಳೆಂದು
ಮಾಧ್ಯಮಗಳಲ್ಲಿ ಮತ್ತೆ ಮತ್ತೆ ತೋರಿದ ಬಳಿಕ
ಸಾವಿಗಿಂತಲು ಕಡೆಯಾದ ಅಪಮಾನ
ಅವಳನು ಬೆನ್ನಟ್ಟಿ ಇರಿಯತೊಡಗಿತು
* * *

ಮನೆಗೆ ದೊಡ್ಡ ದೊಡ್ಡ ಅತಿಥಿಗಳು
ಬರುತ್ತಾರೆಂದು
ವಾರದಿಂದ ಕೂಲಿ ನಾಲಿ, ಕೆಲಸ ಬೊಗಸೆ ಬ[…]
ಮನೆಯ ಅಂದಗೊಳಿಸಿದ
ಬಂದ ಅತಿಥಿ ಗಳಿಗೆಯೊಳಗೆ
ಮನೆಮಂದಿಯ ಮಾನ ಕಳೆದ!
* * *



ಮನೆಗೆ ಬಂದ ನೆಂಟರು ಬಲು ದೊಡ್ಡವರು
ಏನ ತಂದರು ಏನ ತಿಂದರು ಮತ್ತು
ಏನ ಕೊಟ್ಟುಹೋದರು ಹೇಳಿರೇ
ಮನೆಗೆ ಬಂದ ನೆಂಟರು ಬಲು ದೊಡ್ಡವರು
ಹೊರಗಿನಿಂದ ತಿಂಡಿ ತಂದು
ತಾವೇ ತಿಂದು
ನೋವಿನುಡುಗೊರೆಯ ಕೊಟ್ಟುಹೋದರು ಕ[…]
* * *

ಚಳ್ಳಕೆರೆ: ನಟ ಶಶಿಕುಮಾರ್ ಹೊರ್ತಾರಾ ಜೆಡಿಎಸ್ ತೆನೆ?



ರಘುಮೂರ್ತಿ


ಚಳ್ಳಕೆರೆಯ ರಾಜಕಾರಣ ನಿಧಾನಕ್ಕೆ 2018ರ ...ನಾವಣೆಗೆ ಸಜ್ಜಾಗುತ್ತಿದೆ. ಕಾಂಗ್ರೆಸ್‌ನಿಂದ ಹಾಲಿ ಶಾಸಕ ...ಘುಮೂರ್ತಿಯೇ ಕಣಕ್ಕಿಳಿಯುವುದು ಗ್ಯಾರಂಟಿಯಾದರೂ ...ಜೆಪಿ ಮತ್ತು ಜೆಡಿಎಸ್‌ನಲ್ಲಿ ಟಿಕೆಟ್ ಗೊಂದಲ ಇನ್ನೂ ...ಗೆಹರಿದಿಲ್ಲ. ಚಳ್ಳಕೆರೆ ರಾಜಕಾರಣದ ವೈಚಿತ್ರ್ಯವೇನೆಂದರೆ ...ಲ್ಲಿ ಅಭ್ಯರ್ಥಿಗಳಾಗಿ ನಿಲ್ಲುವವರಿಗಿಂತ ಪಕ್ಕದ ಹಿರಿಯೂರಿನ ...ಸಕ ಸುಧಾಕರ್‌ನ ಒಲವೇ ನಿರ್ಣಾಯಕ. ಯಾಕೆಂದರೆ ...ಳ್ಳಕೆರೆ ಎಸ್‌ಟಿ ಮೀಸಲು ಕ್ಷೇತ್ರವಾಗುವುದಕ್ಕಿಂತ ಮುಂಚೆ ...ಧಾಕರ ಎಂಎಲ್‌ಎ ಆದದ್ದು ಇದೇ ಕ್ಷೇತ್ರದಿಂದ. ಆತನ ...ಕ್ಕಪ್ಪ ಜಯಣ್ಣ ಕೂಡಾ ಚಳ್ಳಕೆರೆಯ ಶಾಸಕರಾಗಿದ್ದಂತವರು. ...ಗಾಗಿ ಚಳ್ಳಕೆರೆಯ ಮೇಲೆ ಈಗಲೂ ಸುಧಾಕರ್‌ನ ...ಡಿತ ಬಿಗಿಯಾಗಿಯೇ ಇದೆ. ಇದು ಮೀಸಲು ಕ್ಷೇತ್ರವಾದ ...ತರ ಆತ ಹಿರಿಯೂರಿಗೆ ವಲಸೆ ಹೋಗಿದ್ದಾನಷ್ಟೆ. ...ತ ಸದ್ಯ ಕಾಂಗ್ರೆಸ್‌ನಲ್ಲಿ ಇರೋದ್ರಿಂದ, ಹಿರಿಯೂರಿನಿಂದ ...ಂಗ್ರೆಸ್ ಹುರಿಯಾಳಾಗೇ ಕಣಕ್ಕಿಳಿಯುವುದರಿಂದ ...ಘುಮೂರ್ತಿಗೆ ಲಾಭ ಜಾಸ್ತಿ, ಹಾಗಂತ ರಘುಮೂರ್ತಿಯ ...ಲುವು ಸೀದಾಸಾದಾ ಸುಲಭ ಎನ್ನುವಂತೆಯೂ ಇಲ್ಲ.


ಕಳೆದ 2013ರ ಎಲೆಕ್ಷನ್‌ನಲ್ಲಿ ಚಳ್ಳಕೆರೆ ರಘುಮೂರ್ತಿ ...ಸ ಮುಖವಾಗಿದ್ದರು. ಆತನಿಗೆ ಎದುರಾಗಿ ಕೆಜೆಪಿಯಿಂದ ...ಣಕ್ಕಿಳಿದದ್ದು ಮಾಜಿ ಮಂತ್ರಿ ತಿಪ್ಪೇಸ್ವಾಮಿಯ ಮಗ ...ಮಾರಸ್ವಾಮಿ. ದೇವೇಗೌಡರ ಆಪ್ತರಾಗಿದ್ದ ತಿಪ್ಪೇಸ್ವಾಮಿ ... ಹಿಂದೆ ಜನತಾ ಪರಿವಾರದಲ್ಲಿ ಗೆದ್ದು ಮಂತ್ರಿಯಾಗಿದ್ದರು. ...ನಂತರ ಜೆಡಿಎಸ್ ಜೊತೆಗೆ ಸಂಬಂಧ ಕಡಿದುಕೊಂಡ ...ವರು ಬಿಜೆಪಿಯಿಂದ ಗೆದ್ದಾಗಲೂ ಮಂತ್ರಿಯಾಗಿದ್ದರು. ...ಳ್ಳಕೆರೆಯ ನಿರ್ಣಾಯಕ ಮತಸಮೂಹವಾದ ನಾಯಕ ...ನಾಂಗದವರೇ ಆಗಿದ್ದ ತಿಪ್ಪೇಸ್ವಾಮಿಗೆ ಒಂದು ವೈಯಕ್ತಿಕ ...ರ್ಚಸ್ಸಿತ್ತು. ಆ ವರ್ಚಸ್ಸು ಅವರ ರಾಜಕೀಯ ಬದುಕನ್ನು ...ಸನುಗೊಳಿಸಿತೆ ವಿನಃ ಕ್ಷೇತ್ರದ ಉದ್ಧಾರಕ್ಕೆ ಸವೆದದ್ದು ...ಷ್ಟರಲ್ಲೇ ಇದೆ ಅನ್ನೋದು ಬೇರೆ ಮಾತು. ಆದರೆ ...ವರ ಮಗ ಕುಮಾರಸ್ವಾಮಿ ಅಪ್ಪನ ರಾಜಕೀಯ ...ಟ್ಟುಗಳನ್ನು ಕಲಿಯಲೇ ಇಲ್ಲ. ಆತ ಜನರೊಂದಿಗೆ ...ರೆಯುವುದಕ್ಕಿಂತ ಬೆಂಗಳೂರಿನ ತನ್ನ ಕಸುಬುಗಳಲ್ಲಿ ...ಳುಗಿದ್ದೇ ಹೆಚ್ಚು.

ಹಾಗಾಗಿ ಇದ್ದ ಸರ್ಕಾರಿ ನೌಕರಿಗೆ ರಾಜೀನಾಮೆ ...ಸಾಕಿ ರಾಜಕಾರಣಕ್ಕೆ ಧುಮುಕಿದ್ದ ರಘುಮೂರ್ತಿ ಮೇಲೆ ...ನರಿಗೆ ಒಂದು ಭರವಸೆ ಮೂಡಿತ್ತು. ತಿಪ್ಪೇಸ್ವಾಮಿಯ ...ಟುಂಬ ರಾಜಕಾರಣಕ್ಕಿಂತ ಹೊಸ ಮುಖಕ್ಕೆ ...ಣೆಹಾಕಲು ಜನ ನಿರ್ಧರಿಸಿದ್ದರು. ಅಲ್ಲದೇ, ಇತ್ತ ರಾಜ್ಯ ...ಜೆಪಿ ಭ್ರಷ್ಟಾಚಾರದ ಹೊಡೆತಕ್ಕೆ ಸಿಲುಕಿ ...ದ್ಧಿಗ್ರವಾದದ್ದೂ ರಘುಮೂರ್ತಿಗೆ ಪ್ಲಸ್‌ಪಾಯಿಂಟ್ ಆಯ್ತು, ಬಿಜೆಪಿಯಿಂದ ಕಣಕ್ಕಿಳಿದಿದ್ದ ಜಯಪಾಲಯ್ಯ **12,981** ಮತ ಕಿತ್ತರೆ ಕೆಜೆಪಿಯಿಂದ ನಿಂತಿದ್ದ ಕೆ.ಟಿ.ಕುಮಾರಸ್ವಾಮಿಗೆ ಜನ ನೀಡಿದ್ದು **37,074** ಮತಗಳನ್ನು ಮಾತ್ರ. ಆದರೆ ರಘುಮೂರ್ತಿಗೆ ಒಲಿದದ್ದು ಬರೋಬ್ಬರಿ **60,179** ಮತಗಳು.

ಆನಂತರ ಚಳ್ಳಕೆರೆ ಒಂದಷ್ಟು ಅಭಿವೃದ್ಧಿಯನ್ನು ಕಂಡಿದೆ. ಚಳ್ಳಕೆರೆಯಲ್ಲಿ ಕೇಂದ್ರ ಸರ್ಕಾರದ ಡಿಆರ್‌ಡಿಒ ಬೃಹತ್ ಘಟಕ ಸ್ಥಾಪನೆ ಒಲಿದು ಬಂದದ್ದು ಒಂದಷ್ಟು ಕಾಂಕ್ರೀಟ್ ಅಭಿವೃದ್ಧಿಗಳು ಕದಲಾಡುವಂತೆ ಮಾಡಿದೆ. ಅಲ್ಲದೆ ಇಲ್ಲಿನ ಜನ ಸಹ ಮೊದಲಿನಂತೆ ಮತ ಹಾಕುವ ರಾಜಕಾರಣಕ್ಕಷ್ಟೇ ತಮ್ಮನ್ನು ಸೀಮಿತವಾಗಿಸಿಕೊಳ್ಳದೆ ಕ್ಷೇತ್ರದಲ್ಲಿ ಆಗಬೇಕಾದ ಕೆಲಸಗಳಿಗಾಗಿ ಪಟ್ಟು ಹಿಡಿಯುವಷ್ಟು ಬದಲಾಗಿರೋದು ಕೂಡಾ ಚಳ್ಳಕೆರೆಯ ಬದಲಾವಣೆಗೆ ಕಾರಣ. ಆದರೆ ಜನರು ನಿರೀಕ್ಷಿಸಿದ್ದಷ್ಟು ಬದಲಾವಣೆ ಆಗದಿರುವುದು ರಘುಮೂರ್ತಿಯ ಗೆಲುವು ಕಷ್ಟವಾಗಿಸಬಹುದು.


ಕುಮಾರಸ್ವಾಮಿ


ತಿಪ್ಪೇಸ್ವಾಮಿ


ಡಿ.ಸುಧಾಕರ್

ರಘುಮೂರ್ತಿಯಲ್ಲಿ ಈಗ ಚುನಾವಣೆಯಲ್ಲಿ ಗೆದ್ದು ಬಂದಾಗಿನ ಹುರುಪಿಲ್ಲ. ರಘುಮೂರ್ತಿ ಕ್ಷೇತ್ರದಲ್ಲಿ ತಂಗುವುದೇ ಕಮ್ಮಿಯಾಗಿದೆ ಎಂಬ ಆರೋಪವೂ ಕೇಳಿಬರುತ್ತಿದೆ. ಇದೆಲ್ಲದರಿಂದಾಗಿ ಕ್ಷೇತ್ರದಲ್ಲಿ ರಘುಮೂರ್ತಿ ಬಗ್ಗೆ ಕೊಂಚ ಮುನಿಸಿದೆ. ಹಿರಿಯೂರಿನ ಸುಧಾಕರನ ಪ್ರಭಾವದ ಹೊರತಾಗಿಯೂ ಚುನಾವಣಾ ಫಲಿತಾಂಶವನ್ನು ಈ ಅಂಶ ತಲೆಕೆಳಗು ಮಾಡಬಹುದಾದ ಸಾಧ್ಯತೆಯನ್ನು ತಳ್ಳಿ ಹಾಕುವಂತಿಲ್ಲ.

ಬಿಜೆಪಿಗೆ ಆರ್‌ಎಸ್‌ಎಸ್ ಕ್ಯಾಂಡಿಡೇಟು?

ಕಳೆದ ಎಲೆಕ್ಷನ್‌ನಲ್ಲಿ ಸೋತ ನಂತರ ಕ್ಷೇತ್ರದಿಂದಲೇ ನಾಪತ್ತೆಯಾಗಿದ್ದ ಕುಮಾರಸ್ವಾಮಿ ಈಗ ಮುಖ ತೋರಿಸುತ್ತಿದ್ದಾನೆ. ಬಿಜೆಪಿ ಟಿಕೆಟ್ ನನಗೇ ಎನ್ನುವ ಖಾತರಿಯಲ್ಲಿರುವ ಈತ ಅದೆಷ್ಟು ಅಪ್ರಬುದ್ಧ ಎನ್ನುವುದಕ್ಕೆ ಇವನ ಬೆನ್ನಹಿಂದೆ ಬಿಜೆಪಿಯಲ್ಲಿ ನಡೆಯುತ್ತಿರುವ ವಿದ್ಯಮಾನಗಳೇ ಸಾಕ್ಷಿ. ಇತ್ತ ಈತ ತಾನೇ ಬಿಜೆಪಿ ಕ್ಯಾಂಡಿಡೇಟು ಎಂದು ತಿರುಗಾಡುತ್ತಿದ್ದರೆ ಅತ್ತ ಬಿಜೆಪಿಯಿಂದ ಆರ್‌ಎಸ್‌ಎಸ್ ಮನುಷ್ಯನನ್ನು ಅಭ್ಯರ್ಥಿಯಾಗಿಸುವ ಕಸರತ್ತು ಸದ್ದಿಲ್ಲದೆ ನಡೆಯುತ್ತಿದೆ. ಇದ್ಯಾವುದರ ಅಂದಾಜೇ ಈತನಿಗೆ ಇದ್ದಂತಿಲ್ಲ.


ಬಿಜೆಪಿ ರಾಜ್ಯಾಧ್ಯಕ್ಷ ಯಡಿಯೂರಪ್ಪನ ಸ್ಪೀಡ್‌ಗೆ ಬ್ರೇಕ್ ಹಾಕಬೇಕೆಂದರೆ ಗೆದ್ದು ಶಾಸಕರಾಗುವವರಲ್ಲಿ ಆವರ ಬೆಂಬಲಿಗರ ಸಂಖ್ಯೆಯನ್ನು ಮೊಟಕುಗೊಳಿಸಬೇಕು ಅನ್ನೋದು ಆರ್‌ಎಸ್‌ಎಸ್‌ನ ಅಜೆಂಡಾ. ಆ ಕಾರಣಕ್ಕೆ ಜಿಲ್ಲೆಯೊಂದರಲ್ಲಿ ಕನಿಷ್ಠ ಒಂದು ಕ್ಷೇತ್ರದಲ್ಲಿ ಆರ್‌ಎಸ್‌ಎಸ್ ಪ್ರಚಾರಕನನ್ನು ಕಣಕ್ಕಿಳಿಸಬೇಕೆನ್ನುವ ನಿರ್ಣಯ ಕೇಶವಕೃಪಾದಿಂದ ಹೊರಬಿದ್ದಿದೆಯಂತೆ. ಆಗ ಬಿಜೆಪಿಯೊಳಗೆ ಯಡಿಯೂರಪ್ಪ ಗಣದ ಸಂಖ್ಯೆ ಕ್ಷೀಣವಾಗಿ ಪಕ್ಕಾ ಕೇಸರಿ ಪಡೆ ಶಕ್ತಿ ಪಡೆದುಕೊಳ್ಳುತ್ತದೆ. ಅಧಿಕಾರಕ್ಕೇರಿದರೆ ತಮ್ಮ ಕೋಮುವಾದಿ ಅಜೆಂಡಾಗಳನ್ನು ಕಾರ್ಯರೂಪಕ್ಕೆ ತರಬಹುದು ಎಂಬ ಲೆಕ್ಕಾಚಾರ ಆರ್‌ಎಸ್‌ಎಸ್‌ನದ್ದು. ಚಿತ್ರದುರ್ಗದ ಮಟ್ಟಿಗೆ ಆ ಕೋಟಾದಡಿ ಆಯ್ಕೆಯಾಗಿರೋದು ಚಳ್ಳಕೆರೆ!

ಹಾಗಾಗಿ ಚಳ್ಳಕೆರೆಯವನೇ ಆದ, ಆರ್‌ಎಸ್‌ಎಸ್ ಸಂಚಾಲಕ ರಾಮದಾಸ ಎನ್ನುವ ನಕಲಿ ದೇಶಭಕ್ತನ ಹೆಸರು ಕ್ಷೇತ್ರದಲ್ಲಿ ಹರಿದಾಡತೊಡಗಿದೆ. ಈತನ ತಮ್ಮ ಓಬಳೇಶ, ತಳಕು ಜಿ.ಪಂ. ಕ್ಷೇತ್ರದ ಮೆಂಬರು. ವಿಚಿತ್ರವೆಂದರೆ ಪಕ್ಕಾ ಆರೆಸ್ಸೆಸ್ ಗಣಧಾರಿಯಾದ ಈತ ಪರಿಶಿಷ್ಟ ಪಂಗಡವಾದ ನಾಯಕ ಸಮುದಾಯದವನು. ಆರ್‌ಎಸ್‌ಎಸ್ ಸೇರಿದ ನಂತರ ವೈದಿಕ ಟಚ್‌ಗಾಗಿ ಹೆಸರನ್ನು ರಾಮದಾಸ ಎಂಬುದಾಗಿ ಬದಲಿಸಿಕೊಂಡಿದ್ದಾನೆ. ಕಳೆದ ಬಾರಿ ಸೋತ, ಅದಕ್ಕಿಂತಲೂ ಹೆಚ್ಚಾಗಿ ಯಡಿಯೂರಪ್ಪನ ಹಿಂದೆ ಕೆಜೆಪಿಗೆ ಹೋಗಿದ್ದ ಕೆ.ಟಿ.ಕುಮಾರಸ್ವಾಮಿಗೆ ಟಿಕೆಟ್ ಕೊಡುವುದಕ್ಕಿಂತ ರಾಮದಾಸನನ್ನು ಕಣಕ್ಕಿಳಿಸಲು ಆರೆಸ್ಸೆಸ್ ಸಜ್ಜಾಗಿದೆ. ಹಾಲಿ ಶಾಸಕ ರಘುಮೂರ್ತಿಯ ವಿರುದ್ಧ ಸಣ್ಣದಾಗಿ ಇರುವ ಅಸಮಾಧಾನವನ್ನು ಎನ್‌ಕ್ಯಾಶ್ ಮಾಡಿಕೊಳ್ಳಬೇಕೆಂದರೆ ಹೊಸ ಮುಖವೇ ಸೂಕ್ತ ಅಂತ ಯಡಿಯೂರಪ್ಪನನ್ನು ಒಪ್ಪಿಸುವುದೂ ಆರೆಸ್ಸೆಸ್‌ಗೆ ಕಷ್ಟವಾಗಲಾರದು. ಆದರೆ ರಾಜಕಾರಣದ ಇಂಥಾ ಒಳಸುಳಿಗಳನ್ನೇ ಅರ್ಥಮಾಡಿಕೊಳ್ಳದ ಕುಮಾರಸ್ವಾಮಿ ಬಿಜೆಪಿ ಟಿಕೆಟ್ ಕನಸಿನಲ್ಲೇ ಬೆಂಗಳೂರಿಗೂ ಚಳ್ಳಕೆರೆಗೂ ಓಡಾಡಿಕೊಂಡಿದ್ದಾನೆ.

ನಟ ಶಶಿಕುಮಾರ್ ಜೆಡಿಎಸ್‌ಗೆ?

ಇನ್ನು ಚಿತ್ರರಂಗದಲ್ಲೂ ನೆಲೆಯಿಲ್ಲದೆ, ರಾಜಕೀಯದಲ್ಲೂ ಭವಿಷ್ಯವಿಲ್ಲದೆ ಅತಂತ್ರನಾಗಿರುವ ನಟ ಶಶಿಕುಮಾರ್ ಈ ಸಲ ಚಳ್ಳಕೆರೆಗೆ ವಕ್ಕರಿಸಬಹುದೆನ್ನುವ ವರ್ತಮಾನವೂ ಹರಿದಾಡುತ್ತಿದೆ. ಸದ್ಯ ಶಶಿಕುಮಾರ್ ಕಾಂಗ್ರೆಸ್‌ನಲ್ಲೇ ಇದ್ದನಾದರು ಆತನಿಗೆ ಕಾಂಗ್ರೆಸ್‌ನಿಂದ ಟಿಕೆಟ್ ಸಿಗುವ ಚಾನ್ಸು ತುಂಬಾ ಕಮ್ಮಿ. ಚಳ್ಳಕೆರೆ ಮಾತ್ರವಲ್ಲದೆ ಚಿತ್ರದುರ್ಗದ ಯಾವ ವಿಧಾನಸಭಾ ಕ್ಷೇತ್ರದಲ್ಲೂ ಆತನಿಗೆ ಕಾಂಗ್ರೆಸ್ ಟಿಕೆಟ್‌ನ ಅವಕಾಶವಿಲ್ಲ. ಹಾಗಾಗಿ ಆತ ಕಾಂಗ್ರೆಸ್‌ಗೆ ಟಾಟಾ ಹೇಳಿ ಹಳೇ ಗಂಡನ ಪಾದವೇ ಗತಿ ಎನ್ನುವಂತೆ ಜೆಡಿಎಸ್‌ಗೆ ನೆಗೆದು ಕಣಕ್ಕಿಳಿಯಲಿದ್ದಾನೆ ಎಂಬುದು ಸದ್ಯದ ಗಾಳಿ ಮಾತು.

ಚಿತ್ರದುರ್ಗ ಪಾರ್ಲಿಮೆಂಟ್ ಚುನಾವಣೆಯಲ್ಲಿ ಜೆಡಿಯು ಪಕ್ಷದಿಂದ 1999ರಲ್ಲಿ ಗೆದ್ದುಬಂದಿದ್ದ ಶಶಿಕುಮಾರ್‌ನ ಕೈಹಿಡಿದದ್ದು ಆತನ ಜಾತಿ. ಈ ಭಾಗದ ನಿರ್ಣಾಯಕವೆನಿಸಿದ ನಾಯಕ ಜನಾಂಗಕ್ಕೆ ಸೇರಿರುವುದರಿಂದ ಆತನಿಗೆ ಗೆಲುವು ಒಲಿದು ಬಂದಿತ್ತು. ಆದರೆ ಪಾರ್ಲಿಮೆಂಟ್ ಮೆಂಬರಾದ ಶಶಿಕುಮಾರ್ ಚಿತ್ರದುರ್ಗದ ಮತದಾರನ ಕೈಗೆ ಸಿಗದೇಹೋದ. ಜಿಲ್ಲೆಯಲ್ಲಿ ತನ್ನ ಹೆಸರೇಳುವಂತಹ ಕೆಲಸಗಳನ್ನೇ ಆತ ಮಾಡಲಿಲ್ಲ. ಸದಾ ಅಮಲಿನಲ್ಲೇ ಮತದಾರನನ್ನು ಮರೆತ ಶಶಿಕುಮಾರ್‌ನನ್ನೂ ಮತದಾರ ಮರೆತು ಬಹಳ ಕಾಲವೇ ಆಗಿಹೋಗಿದೆ. ಹಾಗೊಮ್ಮೆ ಆತ ಚಳ್ಳಕೆರೆಯಲ್ಲಿ ಜೆಡಿಎಸ್ ಅಭ್ಯರ್ಥಿಯಾಗಿ ಕಣಕ್ಕಿಳಿದರೆ


ಶಶಿಕುಮಾರ್

ಜಾತಿಯ ಕಾರಣಕ್ಕೆ ಮತಗಳು ಹೋಗುವುದೂ ಡೌಟು. ಯಾಕೆಂದರೆ ಕಾಂಗ್ರೆಸ್‌ನ ರಘುಮೂರ್ತಿ ಮತ್ತು ಬಿಜೆಪಿಯ ಕುಮಾರಸ್ವಾಮಿ ಅಥವಾ ರಾಮದಾಸ ಇವರೂ ಅದೇ ನಾಯಕ ಸಮುದಾಯದವರು. ಅವರನ್ನೆಲ್ಲಾ ಮೀರಿ ನಾಯಕರ ಮತಗಳು ಬೆಳ್ಳಿಮನುಷ್ಯ ಶಶಿಕುಮಾರ್ ಜೋಳಿಗೆಗೆ ಹೋಗಿ ಬೀಳುತ್ತವೆನ್ನುವುದೇ ಕನಸಿನ ಮಾತು. ಅದೂಅಲ್ಲದೇ, ಈ ಹಿಂದೆ ತಿಪ್ಪೇಸ್ವಾಮಿ ಜನತಾ ಪರಿವಾರದ ಕ್ಯಾಂಡಿಡೇಟಾಗಿದ್ದಂತಹ ಸಂದರ್ಭದಲ್ಲಿ ಹುಟ್ಟಿಕೊಂಡ ಜನತಾ ಪಾರ್ಟಿಯ ಮತಗಳೂ ಚಳ್ಳಕೆರೆಯಲ್ಲಿ ಸಾಕಷ್ಟಿವೆ. ಅವೆಲ್ಲವೂ ಕಳೆದ ಸಲ ಜೆಡಿಎಸ್‌ನಿಂದ ಸ್ಪರ್ಧಿಸಿದ್ದ ಪಿ.ತಿಪ್ಪೇಸ್ವಾಮಿಯ ಸುಪರ್ದಿಯಲ್ಲಿವೆ. 2013ರಲ್ಲಿ ಆತ 27,373 ಮತಗಳನ್ನು ಕಬಳಿಸಿಕೊಂಡಿದ್ದ. ಇವು ಬಿಜೆಪಿಯ ಜಯಪಾಲಯ್ಯ ಗಳಿಸಿದ್ದಕ್ಕಿಂತ ದುಪ್ಪಟ್ಟು ಮತಗಳು. ಅಂಥಾ ತಿಪ್ಪೇಸ್ವಾಮಿಗೆ ಟಿಕೆಟ್ ತಪ್ಪಿಸಿ ಶಶಿಕುಮಾರ್‌ಗೆ ಟಿಕೆಟ್ ನೀಡಿದರೆ ಜೆಡಿಎಸ್ ಮತಗಳಿಕೆ ಪಾತಾಳಕ್ಕಿಳಿಯುವುದರಲ್ಲಿ ಯಾವ ಸಂಶಯವೂ ಇಲ್ಲ.

ಹೀಗೆ ಮೂರೂ ಪಕ್ಷಗಳಲ್ಲಿ ಗೆಲುವಿಗಾಗಿ ತಾಲೀಮು ಜೋರಾಗಿಯೇ ನಡೆಯುತ್ತಿದೆ. ಚಳ್ಳಕೆರೆ ಒಂದು ಕಾಲಕ್ಕೆ ಮಿನಿಬಾಂಬೆ ಎಂದು ಹೆಸರು ಮಾಡಿತ್ತು. ನೂರಾರು ಆಯಿಲ್‌ಮಿಲ್‌ಗಳಿದ್ದವು. ಸಾವಿರಾರು ಕಾರ್ಮಿಕರಿದ್ದರು. ಶೇಂಗಾ ಬೆಳೆಗೆ ರಾಜ್ಯದಲ್ಲೇ ಹೆಸರುವಾಸಿಯಾಗಿತ್ತು. ಒಂದರ್ಥದಲ್ಲಿ ಚಿತ್ರದುರ್ಗ ಜಿಲ್ಲೆಯಲ್ಲೇ ಶ್ರೀಮಂತ ವಿಧಾನಸಭಾ ಕ್ಷೇತ್ರವಾಗಿತ್ತು ಚಳ್ಳಕೆರೆ. ಆದರೆ ದಶಕಗಳಿಂದೀಚೆಗೆ ಅಂಥದೊಂದು ಮಿನಿಬಾಂಬೆಯ ಆರ್ಥಿಕ ಖದರೇ ನೆಲಕಚ್ಚಿಹೋಗಿದೆ. ಆದರೂ ಚಳ್ಳಕೆರೆಯ ರಾಜಕಾರಣ ಮಾತ್ರ ಅದೇ ಹಳೇ ಖದರನ್ನೇ ಉಳಿಸಿಕೊಂಡಿದೆ. ಇಲ್ಲಿಗೆ ಕೇಂದ್ರ ಸರ್ಕಾರದ ಯೋಜನೆಗಳು ಹರಿದುಬಂದಿವೆಯಾದರೂ ಅವು ಜನಸಾಮಾನ್ಯರ ಬದುಕಿಗೆ ಪೂರಕವಾದವುಗಳಲ್ಲ. ಸಾವಿರಾರು ಎಕರೆ ಅರೆಅರಣ್ಯ ಪ್ರದೇಶವೀಗ ಡಿ.ಆರ್.ಡಿ.ಓ. ಯೋಜನೆಯ ಪಾಲಾಗಿದೆ. ಹತ್ತು ಸಾವಿರ ಎಕರೆಯಷ್ಟಿದ್ದ ಗೋಮಾಳ ಕಂಡವರ ಪಾಲಾಗುವ ಮೂಲಕ ಕೃಷಿಕರು ಮತ್ತು ಕುರಿ ಸಾಕಾಣಿಕೆಯ ಕುಟುಂಬಗಳಿಗೆ ತೊಂದರೆಯಾಗಿದೆ. ಇಂಥಾ ಯಾವೊಂದು ಸಮಸ್ಯೆಗೂ ತಲೆಕೆಡಿಸಿಕೊಳ್ಳದ ರಾಜಕಾರಣಿಗಳು ಎಲೆಕ್ಷನ್ನು, ಟಿಕೆಟು, ಬಕೇಟು ಅಂತ ಬ್ಯುಸಿಯಾಗಿದ್ದಾರೆ. ಶಾಸಕ ರಘುಮೂರ್ತಿ ಈಗಲಾದರೂ ಎಚ್ಚೆತ್ತುಕೊಂಡು ಜನರಿಗೆ ಸ್ಪಂದಿಸದ್ದಿದ್ದರೆ, ಕ್ಷೇತ್ರದಲ್ಲಿ ಅಲೆದಾಡದಿದ್ದರೆ ಸೋಲಿಂದ ತಪ್ಪಿಸಿಕೊಳ್ಳೋದು ಬಹಳ ಕಷ್ಟವಾದೀತು.

■ ಟಿ.ಎನ್. ಷಣ್ಮುಖ

...ಹಿಂದೆಲ್ಲ
...ಮನೆಗೆ ನೆಂಟರು ಬರುವಾಗ
...ಮಕ್ಕಳಿಗಾಗಿ
...ತಿಂಡಿ ಕಟ್ಟಿಸಿಕೊಂಡು ಬರುತ್ತಿದ್ದರು
...ಆತಿಥ್ಯವನುಂಡು ಹೋಗುತ್ತಿದ್ದರು
...ಇಂದೆಲ್ಲ ಹಾಗಿಲ್ಲ
...ತಿಂಡಿ ಕಟ್ಟಿಸಿಕೊಂಡು ಬರುತ್ತಾರೆ
...ತಾವೇ ಅದನುಂಡು ಹೋಗುತ್ತಾರೆ
* * *

...ಓಟಿಗಾಗಿಯೇ ಊಟದ ನಾಟಕವೆಂದು
...ನಮಗೂ ಮೊದಲೇ ತಿಳಿದಿತ್ತು
...'ಅತಿಥಿಯಾಗಿ ಮನೆಗೆ ಬರುತ್ತೇವೆ'
...ಎಂದ ಮಾತು ನಮ್ಮ ಬಾಯಿಕಟ್ಟಿತ್ತು!
* * *

ಊಟ ಮಾಡಿದರೆ ಮಲಿನ
ಓಟು ಪಡೆದರೆ ಕುಲೀನ
ಬರೆದಿಟ್ಟುಕೋ ಜಗವೇ
ನಿನ್ನೆದೆಯಲ್ಲಿ
ಈ ಹೊಸ ಗಾದೆಯನ್ನ
* * *

ನನ್ನ ಮನೆಗೆ ನೀ
ಎಂದೂ ಬರಬಹುದು
ಮನಬಂದಂತೆ ಇರಬಹುದು
ಅಪಮಾನಿಸಿಯೂ
ನಡೆದುಬಿಡಬಹುದು ಗೆಳೆಯಾ
ನಿನ್ನ ಮನೆಗೂ ಎಂದಾದರೊಮ್ಮೆ
ನನ್ನನ್ನೂ ಕರೆಯುವೆಯಾ?

■ ಕಾದಂಬಿನಿ



ಯಕ್ಷಗಾನಕ್ಕೆ ಕೇಸರಿ ಕಿರೀಟ ಕಟ್ಟಲು

ಚಕ್ರವರ್ತಿ ಕಸರತ್ತು!!

ಕರಾವಳಿ ಕರ್ನಾಟಕದ ಸಾಮಾಜಿಕ-ಸಾಂಸ್ಕೃತಿಕ-ಔದ್ಯೋಗಿಕ-ರಾಜಕೀಯ ಜನಜೀವನ ಅಸಹ್ಯಗೊಳಿಸಿ ಹೊಟ್ಟೆ ಹೊರೆದುಕೊಳ್ಳುತ್ತಿರುವ ಸಂಘ ಪರಿವಾರದ ಸೈತಾನರ ಕೆಟ್ಟ ಕಣ್ಣೀಗ ಯಕ್ಷಗಾನದ ಮೇಲೆ ಬಿದ್ದಿದೆ! ಅತ್ತ ಹಿಂದೂ ಧರ್ಮದ ಮರ್ಮ ಅರಗಿಸಿಕೊಳ್ಳಲಾಗದ, ಇತ್ತ ಯಕ್ಷಗಾನ, ಕಲೆಯ ನೆಲೆಯೂ ಅರ್ಥವಾಗದ ಅಪ್ಪಟ ಜಗಳಗಂಟ ಬಕ್ರವರ್ತಿ ಚೂಲಿಬಲೆ ಯಾನೆ ಚಕ್ರವರ್ತಿ ಸೂಲಿಬೆಲೆ ಉರುಫ್ ಮಿಥುನ್ ಚಕ್ರವತಿ ಡಿ. ಶೇಟ್‌ನ ಮೋದಿ ಬ್ರಿಗೇಡ್‌ಗೆ ಚಂಡೆ ಮದ್ದಲೆಯಲ್ಲಿ ಮತಾಂಧ ಭೂತ ಕಾಣಲಾರಂಭಿಸಿದೆ. ಬಕ್ರವರ್ತಿಯ ಹೈಲಾಟಕ್ಕೆ ಜನ ಬಿದ್ದುಬಿದ್ದು ನಗುತ್ತಿದ್ದರೂ, ಆತನ ಹಿಂದೂತ್ವದ ಬಯಲಾಟ ಮಾತ್ರ ಭಯಾನಕವಾಗಿದೆ!!

ಕಣ್ಣಿಗೇನೇ ಕಾಣಿಸಲಿ; ಅದರಲ್ಲಿ ಹಿಂದೂತ್ವದ ಹುಳುಕು ಹುಡುಕುವ ಮಂದಮತಿ ಬಕ್ರವರ್ತಿಯ ಮತಾಂಧ ಮಳ್ಳು ಕೆರಳಿಸಿ ಬಿಟ್ಟಿದೆ ಮುಳಿಯ ಕೇಶವಯ್ಯ ಎಂಬ ಯಕ್ಷ ಪ್ರಸಂಗ ರಚನಾಕಾರ ಬರೆದ "ಮಹಾಚೇತನ-ಏಸುಕ್ರಿಸ್ತ ಮಹಾತ್ಮೆ" ಎಂಬ ಪಠ್ಯ 1976 ರಲ್ಲೇ ಕೇಶವಯ್ಯ ರಚಿಸಿದ ಕೃತಿಯಿದು. ಅದನ್ನು ಕೇಶವಯ್ಯ ತಮ್ಮ 80 ಇಳಿವಯಸ್ಸಿನಲ್ಲಿ ಪರಿಷ್ಕರಿಸಿ ಅರ್ಥ ಸಹಿತ ಬರೆದಿದ್ದಾರೆ. ಹೊಸ ಹೊತ್ತಿಗೆ ಬಿಡುಗಡೆ ಹಾಗು ಸದ್ರಿ ಕೃತಿ ಆಧಾರಿತ ತಾಳಮದ್ದಲೆ ಕಾರ್ಯಕ್ರಮವನ್ನು ಮೇ 27ರಂದು ನಡೆಸಲು ಕೇಶವಯ್ಯನವರ ಮಕ್ಕಳು ಸಿದ್ಧತೆ ಮಾಡಿಕೊಂಡಿದ್ದರು. ಆ ಕಾರ್ಯಕ್ರಮದ ಆಮಂತ್ರಣ ಪತ್ರಿಕೆ ಭೀಷಣ ಭಾಷಣ ಪಾಷಾಣ ಪ್ರವೀಣ ಬಕ್ರವರ್ತಿ ಕೈಗೆ ಅದ್ಹೇಗೋ ಸಿಕ್ಕಿದೆ. ಅದನ್ನು ಕಂಡದ್ದೇ ತಡ, ಬಕ್ರನ ಮೇಲೆ ಹಿಂದೂತ್ವದ ದೆವ್ವ ಆವಾಹನೆ ಆಗಿಹೋಗಿದೆ!!

"ಇದು ಪಕ್ಕಾ ಕ್ರಿಶ್ಚಿಯನ್ನರ ಮತಾಂತರಕ್ಕೆ ನೆರವಾಗುವಂಥ ಕಾರ್ಯಾಚರಣೆ... ಈ ತಾಳಮದ್ದಲೆ- ಬಿಡುಗಡೆ ಕಾರ್ಯಕ್ರಮ ಯಾವ ಕಾರಣಕ್ಕೂ ನಡೆಯಲು ಬಿಡಬಾರದು..." ಎನ್ನುತ್ತ ಬಕ್ರ ಬ್ರಿಗೇಡ್ ಬಳಗದ ಭಂಡರ ಮುಂದೆ ನೆಗೆನೆಗೆದು ಹಾರಾಡಿದ್ದಾನೆ. ಅಷ್ಟಕ್ಕೆ ಸಮಾಧಾನ ಆಗುವ ಹಿಂದೂ ಕಟ್ಟಾಳಲ್ಲ ಆತ. ಏನಾದರೂ ಗೊಂದಲ-ಗಲಾಟೆ ಆದಾಗಲೇ ಆತನಿಗೆ ನಿದ್ದೆ ಬೀಳೋದು. ಬಕ್ರ ವಿಕೃತಿಗೆ ಸಾಮಾಜಿಕ ಜಾಲತಾಣ ಬಳಸಿಕೊಂಡಿದ್ದಾನೆ.

ಕಳೆದ ಸೋಮವಾರ (15-5-2017) ಮಧ್ಯಾಹ್ನದ ವೇಳೆಗೆ ಏಸು ಮಹಾತ್ಮ ಬಿಡುಗಡೆ ಸಮಾರಂಭದ ಕರೆಯೋಲೆ ತನ್ನ ಫೇ(ಕ್)ಸ್ ಬುಕ್ ಖಾತೆಗೆ ಹಾಕಿ ಕ್ಯಾತೆ ತೆಗೆದಿದ್ದಾನೆ. "# ಉರ್ಳಾಡ್ಕೊಂಡ್ನಕ್ಕೆ" ಎಂಬ ಹ್ಯಾಷ್ ಟ್ಯಾಗ್‌ಗೆ "ಇದೊಂದು ಕಡಿಮೆ ಇತ್ತು!! ಯಕ್ಷಗಾನದಲ್ಲಿ ಏಸು ಮಹಿಮೆ..." ಎಂಬ ಒಣ ಒಕ್ಕಣಿಕೆ ಪೋಣಿಸಿದ್ದಾನೆ. ಇದನ್ನು ಬಕ್ರನ ಸಮಾನ ಮನಸ್ಕರು ಶೇರ್ ಮಾಡಿಕೊಂಡು ಸಂಭ್ರಮಿಸಿದ್ದಾರೆ.

ಪರಿಷ್ಕೃತ ಏಸು ಮಹಿಮೆ ಯಕ್ಷ ಪ್ರಸಂಗ ಬಿಡುಗಡೆ ಹಾಗು ತಾಳಮದ್ದಲೆ ಕಾರ್ಯಕ್ರಮದ ಬಗ್ಗೆ ಹಿಂದೂತ್ವದ ಹರಾಮಿಗಳು ಬಾಯಿಗೆ ಬಂದದ್ದು ಫೇಸ್‌ಬುಕ್‌ನಲ್ಲಿ ಬೊಗಳಿದ್ದಾರೆ. ಸಾಮಾಜಿಕ ಜಾಲತಾಣದ ವಾಟ್ಸ್‌ಅಪ್,



ಫೇಸ್‌ಬುಕ್‌ನ ಹಿಂದೂತ್ವದ ಗ್ಯಾಂಗ್‌ನಲ್ಲಿ ಅಲ್ಲೋಲ ಕಲ್ಲೋಲವೇ ಆಗಿಹೋಗಿದೆ! ಕೆಲವು ವಿಕೃತ ಫೇಸ್‌ಬುಕ್ಕಿಗಳು ಕೇಶವಯ್ಯ ಹಣಕ್ಕೆ ಕಲೆ ಮಾರಿಕೊಂಡಿದ್ದಾರೆಂದು ಕುಟುಕಿದರೆ, ಇನ್ನೂ ಕೆಲವರು ಹಿಂದೂಗಳನ್ನು ಕ್ರೈಸ್ತ ಧರ್ಮಕ್ಕೆ ಮತಾಂತರ ಮಾಡಲು ಯಕ್ಷಗಾನ ಬಳಸಿಕೊಳ್ಳುವ ಕುತಂತ್ರ ಇದೆಂದು ತುಂಡುಗುಪ್ಪಳ ಹೊಡೆದಿದ್ದಾರೆ. ಬಕ್ರನ ಪೋಸ್ಟ್‌ಗೆ ಪ್ರತಿಕ್ರಿಯಿಸಿರುವ ಬಹುತೇಕರು ಕಾರ್ಯಕ್ರಮ ನಡೆಯದಂತೆ ತಡೆಯಬೇಕೆಂಬ ಅಡ್ನಾಡಿ ಅನಿಸಿಕೆ ವ್ಯಕ್ತಪಡಿಸಿದ್ದಾರೆ.


27ನೇ ತಾರೀಖಿನ ಕೃತಿ ಬಿಡುಗಡೆ ಸಂದರ್ಭದ ತಾಳಮದ್ದಲೆ ಹಿಂದೂತ್ವದ ವೀರರ ಮಾನಸಿಕ ತಾಳವ[ನ್ನು] ತಪ್ಪಿಸಿ ಬಿಟ್ಟಿದೆ. ತಾಳಮದ್ದಲೆಯಲ್ಲಿ ಪಾಲ್ಗೊಳ್ಳುವ ಕಲಾವಿ[ದರ] ಬಗ್ಗೆ ಕೀಳಾಗಿ ಬರೆಯಲಾಗಿದೆ. ಕಲಾವಿದರನ್ನ ಮೂದ[ಲಿಸ]ಲಾಗಿದೆ. ತಾಳಮದ್ದಲೆಯಲ್ಲಿ ಭಾಗವಹಿಸದಂತೆ ತಾಕೀ[ತು] ಮಾಡಲಾಗಿದೆ. ಈ ಕಲಾವಿದರಲ್ಲಿ ಹೆಚ್ಚಿನವರು ಬ್ರಾಹ್[ಮಣ]ರೆಂಬುದು ಬ್ರಿಗೇಡ್‌ನ ಜನಿವಾರಿಗಳಿಗೆ ಮುಜು[ಗರ] ಮೂಡಿಸಿದೆ. ಬ್ರಾಹ್ಮಣರಾಗಿ ಕ್ರಿಶ್ಚಿಯನ್ನರ ಏಸು ಮಹಿ[ಮೆ] ಸಾರುವುದೆಂದರೇನು?.... ಅಕಟಕಟಾ.... ಅಪಚಾ[ರ] ಹಿಂದೂತ್ವಕ್ಕೆ ಅವಮಾನ.... ತಾಳಮದ್ದಲೆಗೆ ಹೋಗಬ[ೇಡಿ] ಯೆಂದು ಅಲವತ್ತುಕೊಳ್ಳಲಾಗಿದೆ ಫೇಸ್‌ಬುಕ್-ವಾಟ್ಸ[್‌ಅಪ್] ಪುಟಪುಟಗಳ ತುಂಬ!

ಏಸು ಮಹಾತ್ಮೆ ಕೃತಿ ಬಿಡುಗಡೆ ಮತ್ತು ಪ್ರದರ್ಶ[ನಕ್ಕೆ] ಅಡ್ಡಗಾಲು ಹಾಕಿಕೊಂಡು ಕೇಸರಿಕ್ರಿಮಿಗಳು ಕುಂತಿದ[್ದಾರೆ]. ಆದರೆ ಯಕ್ಷಗಾನ ರಂಗದ ಬಹುತೇಕ ಕಲಾವಿದರು ಮ[ತ್ತು] ಸಂಘಟಕರು ಕಲೆ ಧರ್ಮಾತೀತ, ಅದಕ್ಕೆ ಹಿಂದೂ[ತ್ವದ] ಸೋಂಕು ಸಲ್ಲದು ಎನ್ನುತ್ತಿದ್ದಾರೆ. ಇವರೆಲ್ಲ ಕೃತಿಕಾರ ಮ[...] ಕಾರ್ಯಕ್ರಮಕ್ಕೆ ಬೆಂಬಲವಾಗಿ ನಿಂತಿದ್ದಾರೆ. ಬೈಬ[ಲ್] ಆಧಾರಿತ ಈ ಪ್ರಸಂಗ ಯಕ್ಷರಂಗದಲ್ಲಿ ಒಂದು ವಿ[...] ಪ್ರಯೋಗವೆಂದೇ ಮೆಚ್ಚಿಕೆಗೆ ಪಾತ್ರವಾಗಿದೆ. ಇದು ಇಂ[ದು] ನಿನ್ನೆ ದಿಢೀರ್ ಹುಟ್ಟಿಕೊಂಡ ಪ್ರಸಂಗವಲ್ಲ. ಮುಳಿ[ಯ] ಕೇಶವಯ್ಯನವರ ಮಹಾಚೇತನ ಅರ್ಥಾತ್ ಏಸು ಮಹಾ[ತ್ಮೆ]ಗೆ ಬರೋಬ್ಬರಿ ನಾಲ್ಕು ದಶಕದ ಇತಿಹಾಸವಿದೆ. ದ[...] ಕನ್ನಡ ಚೆಡ್ಡಿಗಳ ಚಿತಾವಣೆಯಿಂದ ಮತೀ[ಯ] ಬಲಿಪೀಠವಾಗುವ ಮೊದಲೇ ಈ ಕೃತಿ ರಂಗದಲ್ಲಿ ನೂರ[ಾರು] ಪ್ರದರ್ಶನ ಕಂಡಿದೆ.

"ಏಸು ಮಹಿಮೆ" ಪ್ರಸಂಗ 1976ರ ಆಗಸ್ಟ್[...] "ಜನತಾ ಯಕ್ಷಗಾನ ಮಂಡಳಿ"ಯವರಿಂದ ಮಂಗಳೂ[ರು] ಪುರಭವನದಲ್ಲಿ ಮೊದಲ ಬಾರಿ ಪ್ರದರ್ಶನಗೊಂಡಿ[ತು]. ಆನಂತರ ತೆಂಕುತಿಟ್ಟು ಮತ್ತು ಬಡಗುತಿಟ್ಟಿನಲ್ಲಿ ಈ ಪ್ರ[ಸಂಗ] ಭರ್ಜರಿ ಪ್ರಸಿದ್ಧಿ ಪಡೆಯಿತು. ಎರಡೂ ತಿಟ್ಟಿನಲ್ಲಿ ಜ[...] ಪ್ರಶಂಸೆ ಮತ್ತು ಕುತೂಹಲಕ್ಕೆ ಏಸು ಮಹಾತ್ಮೆ ಪಾತ್ರವಾ[ಯಿತು].



ಚಕ್ರವರ್ತಿ ಚಡಪಡಿಕೆ



ನರೇಶ್ ಶೆಣೈ ಜೊತೆ ಸೂಲಿಬೆಲೆ

ಕರಾವಳಿಯಲ್ಲಿ ಕೇಸರಿ ಕರಾಮತ್ತಿನ ಕರಸೇವೆಗೆ ಸದಾ ಸಂಚು ಹೂಡುವ ಭೀಷಣ ಭಾಷಣ ಪಾಷಾಣಕಾರ ಚಕ್ರವರ್ತಿ ಸೂಲಿಬೆಲೆಯ ಹಿಡನ್ ಅಜೆಂಡಾ-ಇಲ್ಲಿಂದಲೇ ಎಂಪಿ ಅಥವಾ ಎಮ್ಮೆಲ್ಲೆ ಆಗೋದು. ಮತೋನ್ಮತ್ತ ಮಾತುಗಾರಿಕೆಯಿಂದ ಸಂಘ ಪರಿವಾರದಲ್ಲಿ ಮುಂಚೂಣಿಗೆ ಬಂದಿರುವ ಈ ಅಖಂಡ ಬ್ರಹ್ಮಚಾರಿ ಇತಿಹಾಸ-ಭೂಗೋಳ-ವಿಜ್ಞಾನ-ತಂತ್ರಜ್ಞಾನ- ರಾಜಕಾರಣವನ್ನೆಲ್ಲ ಹೇಗೆ ಬೇಕೋ ಹಾಗೆ ತಿರುಚಿ ಅಮಾಯಕರ ದಿಕ್ಕುತಪ್ಪಿಸಿ ಚಪ್ಪಾಳೆ ಗಿಟ್ಟಿಸಬಲ್ಲ ಪ್ರಳಯಾಂತಕ! ಈ ಕಲಹಪ್ರಚೋದಕ ಮಾತುಗಾರಿಕೆಗೆ ಬೀಳುವ ಚಪ್ಪಾಳೆಯೇ ಎಂಪಿ-ಎಮ್ಮೆಲ್ಲೆಗಿರಿಗೆ ಮೆರಿಟ್ ಎಂಬ ಭ್ರಮೆ ಬಕ್ರವರ್ತಿಯದು.

ಧೀರೋದಾತ್ತ ದಲಿತ ಹೋರಾಟಗಾರ ಜಿಗ್ನೇಶ್ ಮೇವಾನಿ ಉಡುಪಿಯ ದಲಿತ-ದಮನಿತರ ಸಮಾವೇಶದಲ್ಲಿ ಭಾಗವಹಿಸಿದಾಗ ಬೆಚ್ಚಿಬಿದ್ದಿದ್ದ ಪೇಜಾವರ ಸ್ವಾಮೀಜಿಗೆ ಸಾಂತ್ವನ ಹೇಳಲು ಬಂದು ನಗೆಪಾಟಲಿಗೀಡಾಗಿದ್ದ ಚಕ್ರವರ್ತಿ ಉಡುಪಿಯ ಬೀದಿಗಳು ದಲಿತರ ನಡೆಯಿಂದ ಮಲಿನವಾಗಿದೆ ಎಂದು ಸೂಚಿಸಿ ತನ್ನತನ ತೋರಿಸಿಕೊಂಡಿದ್ದ. ದಲಿತರು-ಪ್ರಜ್ಞಾವಂತರು, ಕರಾವಳಿಯ ಜನರು ಸ್ವಾಭಿಮಾನದ ಕೆಚ್ಚು ತೋರಿಸಿದಾಗ ಕಂಗಾಲಾಗಿ ಬಾಲ ಮುದುರಿಕೊಂಡು ಪಲಾಯನ ಮಾಡಬೇಕಾಗಿ ಬಂದಿತ್ತು ಸೂಲಿಬೆಲೆ! ಕಚ್ಚೆ ಹರುಕು ರಾಘು ಸ್ವಾಮಿಯ ಹಾದರ ಸಮರ್ಥಿಸುತ್ತ ದಕ್ಷಿಣೋತ್ತರ ಕನ್ನಡ ಜಿಲ್ಲೆಯಲ್ಲಿ ಬಾಡಿಗೆ ಭಾಷಣ ಬಿಗಿಯುತ್ತ "ದಂಡ" ಯಾತ್ರೆ ಮಾಡಿದ್ದ ಸೂಲಿಬೆಲೆ ಚಕ್ರ ಸಂಘಿಗಳ ಹಿಂದೂ ಧರ್ಮದಲ್ಲಿ ಹೆಣ್ಣಿಗೆಂಥ ಸ್ಥಾನ-ಮಾನವಿದೆ ಎಂಬುದನ್ನು ತೋರಿಸಿದ್ದ. ಅಸಹಾಯಕ ಹೆಣ್ಣಿನ ಚಾರಿತ್ರ್ಯ ವಧೆ ಮಾಡಿ ಮೂದಲಿಸಿ ಕೇಕೆ ಹಾಕಿ ತನ್ನ ಕೊಳಕು ಬುದ್ಧಿ ಬಹಿರಂಗ ಮಾಡಿಕೊಂಡಿದ್ದ. ಕರಾವಳಿಯ ಉತ್ತರ ಕನ್ನಡ, ಉಡುಪಿ ಅಥವಾ ದಕ್ಷಿಣ ಕನ್ನಡದ ಯಾವುದಾದರೂ ಸುರಕ್ಷಿತ ಕ್ಷೇತ್ರದಿಂದ ಎಮ್ಮೆಲ್ಲೇ ಆಗಬೇಕೆಂಬ ಹಗಲುಗನಸು ಕಾಣುತ್ತಿರುವ ಈತನ ಕಣ್ಣು ಮೊದಲು ಬಿದ್ದಿದ್ದು ಮಂಗಳೂರು ದಕ್ಷಿಣ ಕ್ಷೇತ್ರದ ಮೇಲೆ. ಯೋಗೀಶ್ ಭಟ್ ಎಂಬ ಸೌಮ್ಯ ಚೆಡ್ಡಿ ಕೊಂಕಣಿಗನ ಸೋಲಿನಿಂದ ಖಾಲಿಯಾಗಿರುವ ಮಂಗಳೂರು ಬಿಜೆಪಿಯಲ್ಲಿ ಮೆರೆಯುವ ಸ್ಕೆಚ್ ಹಾಕಿದ್ದ ಬಕ್ರ!

ಮೋದಿ ಬ್ರಿಗೇಡ್ ಎಂಬ ಶುದ್ಧ ದಾಂಧಲೆಕೋರರ ತಂಡ ಕಟ್ಟಿಕೊಂಡು ಮಂಗಳೂರನ್ನ "ಕರ್ಮ" ಭೂಮಿ ಮಾಡಿಕೊಳ್ಳಲು ಹವಣಿಸಿದ್ದ ಈತನಿಗೆ ಜತೆಯಾಗಿದ್ದು ಸ್ಥಳೀಯ ಕೊಂಕಣಿಗರ ವೆಂಕಟಣರಮಣ ದೇವಸ್ಥಾನದ ಹುಂಡಿ ಕಳ್ಳ ನರೇಶ್ ಶೆಣೈ! ಸೂಲಿಬೆಲೆ-ಶೆಣೈ ಸೇರಿಕೊಂಡು ಮೋದಿ ಮುಖವಾಡದ ಕ್ಯಾಪು-ಟಿಶರ್ಟ್ ದಂಧೆ ಮಾಡಿ ಕೋಟಿ-ಕೋಟಿ ಬಾಚಿದ್ದರು. ಈ ಬಿಸ್ನೆಸ್ ಯಶಸ್ಸು ನರೇಶ್ ಶೆಣೈಗೆ ತಾನೇ ಏಕೆ ಮಂಗಳೂರು ಶಾಸಕನಾಗಬಾರದೆಂಬ ಚಟ ಹತ್ತಿಸಿತು. ಆಗ ಅನಿವಾರ್ಯವಾಗಿ ಮಂಗಳೂರಿನ ಮೋಹ ಸೂಲಿಬೆಲೆ ಬಿಡಬೇಕಾಯ್ತು. ಆರ್‌ಟಿಐ ಕಾರ್ಯಕರ್ತ ವಿನಾಯಕ ಬಾಳಿಗಾರನ್ನು ಕೊಲ್ಲಿಸಿದ ಆರೋಪದಲ್ಲಿ ಜೈಲಿಗೆ ಹೋದ ನರೇಶ್ ಶೆಣೈಗೆ ಸ್ವಜಾತಿ ಕೊಂಕಣಿಗರೇ ಛಿ-ಥೂ ಅನ್ನುತ್ತಿದ್ದಾರೆ. ಜೈಲಿಂದ ಜಾಮೀನಲ್ಲಿ ಹೊರಬಂದಾಗ ಈ ಕ್ರಿಮಿನಲ್ ಪಾತಕಿ ಮಿತ್ರನ ಸ್ವಾಗತಿಸಲು ಹೋಗಿದ್ದ ಸೂಲಿಬೆಲೆಗೂ ಮಂಗಳೂರಿನ ಜನ ಕಂಡಲ್ಲಿ ಕ್ಯಾಕರಿಸಿ ಉಗಿಯುವಂತಾಗಿದೆ. ಈ ಸೂಲಿಬೆಲೆ ಅದೆಂಥ ದೇಶದ್ರೋಹಿ ಎಂದರೆ ಕೊಲೆ ಪಾತಕಿ ನರೇಶನ ಹೆಗಲ ಮೇಲೆ ಕೈಹಾಕಿ ಮಂಗಳೂರಲ್ಲಿ ಅಂಡಲೆಯುತ್ತಿದ್ದಾನೆ. ಇಂಥ ನೀಚನನ್ನು ಮಂಗಳೂರು ಮಂದಿ ಶಾಸಕನಾಗಿ ಮಾಡಲು ಸಾಧ್ಯವಾ?

ಮಂಗಳೂರು ಬಿಜೆಪಿ ಟಿಕೆಟ್ ಸಿಗೋದು ಅಥವಾ ಅಲ್ಲಿ ಗೆಲ್ಲೋದು ಕಷ್ಟವೆಂಬುದು ಈಗ ಸೂಲಿಬೆಲೆಗೂ ಪಕ್ಕಾ ಆಗಿದೆ. ಹಾಗಾಗಿ ಆತ ಉತ್ತರ ಕನ್ನಡದ ಕುಮಟಾ ಕ್ಷೇತ್ರದ ಟಿಕೆಟ್‌ಗಾಗಿ ಕೇಶವಕೃಪಾದಲ್ಲಿ ಶಿರ್ಷಾಸನ ಹಾಕುತ್ತಿದ್ದಾನೆ. ಸೂಲಿಬೆಲೆಯ ಮೂಲ ಕುಮಟಾ ಕ್ಷೇತ್ರದ ವ್ಯಾಪ್ತಿಯ ಹೊನ್ನಾವರ. ಇಲ್ಲಾತನ ದೊಡ್ಡಪ್ಪ-ಚಿಕ್ಕಪ್ಪಂದಿರಿದ್ದಾರೆ. ಈತ ಹುಟ್ಟಿ ಬೆಳೆದಿದ್ದೆಲ್ಲ ಬೆಂಗಳೂರು ಗ್ರಾಮಾಂತರ ಹೊಸಕೋಟೆಯ ಸೂಲಿಬೆಲೆ ಎಂಬಲ್ಲಿ. "ವೈಶ್ಯವಾಣಿ" (ಕೊಂಕಣಿ ವಾಣಿ) ಸಮುದಾಯದ ಈತನ ತಂದೆ ಸೂಲಿಬೆಲೆಯಲ್ಲಿ ಶಿಕ್ಷಕ-ವೃತ್ತಿಯಲ್ಲಿದ್ದರು. ಸಿನಿಮಾ ಜಮಾನಾದಲ್ಲಿ ಮಿಥುನ್ ಚಕ್ರವರ್ತಿ ಸ್ಟಾರ್ ಆಗಿದ್ದಾಗ ಹುಟ್ಟಿದ ಮಗನಿಗೆ ಶೇಟ್ ಮಾಸ್ತರ್ "ಮಿಥುನ್ ಚಕ್ರವರ್ತಿ" ಎಂದೇ ಹೆಸರಿಟ್ಟಿದ್ದರು. ಮಿಥುನ್ ಚಕ್ರವರ್ತಿಯ ಫ್ಯಾನ್ ಆಗಿದ್ದರು ಮಾಸ್ತರ್ ಶೇಟ್.

"ಮಿಥುನ್ ಚಕ್ರವರ್ತಿ ಶೇಟ್" ಎಂಬುದು ಸಂಘಿ ಸರದಾರ ಚಕ್ರವರ್ತಿ ಸೂಲಿಬೆಲೆಯ ನಿಜ ನಾಮಧೇಯ. ಚೆಡ್ಡಿ ಸೆಳೆತಕ್ಕೆ ಬಿದ್ದು ಸ್ವಯಂಘೋಷಿತ ದೇಶಭಕ್ತನಾಗಿ ಹೆಸರುವಾಸಿ ಆಗುತ್ತಲೇ ಆತ ಹೆಸರು ಬದಲಿಸಿಕೊಳ್ಳುತ್ತಾನೆ. ಮಿಥುನ್ ಮತ್ತು ಚಕ್ರವರ್ತಿ ತೆಗೆದುಹಾಕಿ ಬರೀ ಚಕ್ರವರ್ತಿ ಇಟ್ಟುಕೊಳ್ಳುತ್ತಾನೆ. ಅದಕ್ಕೆ ಊರ ಹೆಸರು-ಸೂಲಿಬೆಲೆ ಸೇರಿಸುತ್ತಾನೆ. ಕಳೆದ ಲೋಕಸಭಾ ಇಲೆಕ್ಷನ್ ಹೊತ್ತಲ್ಲಿ ಈ ಮಿಥುನ್ ಚಕ್ರವರ್ತಿ ಯಾನೆ ಚಕ್ರವರ್ತಿ ಸೂಲಿಬೆಲೆ ಉತ್ತರ ಕನ್ನಡದ ಬಿಜೆಪಿ ಕ್ಯಾಂಡಿಡೆಂಟಾಗಲು ಒಳಗೊಳಗೆ ಪರದಾಡಿದ್ದ. ಈಗಲೂ ಆತನಿಗೆ ಕೆನರಾ ಸಂಸದನಾಗುವ ತೆವಲು ಕಡಿಮೆಯಾಗಿಲ್ಲ.

ಕೆನರಾದ ರೌಡಿ ಸಂಸದ ಅನಂತ್ಕುಮಾರ್ ಎಮ್ಮೆಲ್ಲೆಯಾಗಿ ಮಂತ್ರಿಯಾಗುವ ಮಸಲತ್ತು ಮಸೆಯುತ್ತಿದ್ದಾನೆ. ಆತನೂ ಕುಮಟಾದಿಂದಲೇ ಸ್ಪರ್ಧೆಗಿಳಿವ ಗಡಿಬಿಡಿಗೆ ಬಿದ್ದಿದ್ದಾನೆ. ಇದು ಸೂಲಿಬೆಲೆಗೂ ಗೊತ್ತಾಗಿದೆ. ಆಕಸ್ಮಾತ್ ಅನಂತ್ಕುಮಾರ್ ಕುಮಟಾದ ಶಾಸಕನಾದರೆ ಖಾಲಿಯಾಗುವ ಕೆನರಾದ ಎಂಪಿ ಆಗುವುದು ಇಲ್ಲವೇ ಅನಂತ್ಕುಮಾರ್‌ಗೆ ಟಿಕೆಟ್ ಇಲ್ಲವೆಂದಾದರೆ ತಾನೇ ಕುಮಟಾ-ಹೊನ್ನಾವರದಿಂದ ಕಣಕ್ಕಿಳಿಯುವುದು ಚಕ್ರವರ್ತಿಯ ಅಂತರಂಗದ ಅಭಿಲಾಷೆ. ಇದಕ್ಕೆ ಆರೆಸ್ಸೆಸ್ ವಲಯದಲ್ಲೂ ಸಮ್ಮತಿ ಸಿಕ್ಕಿದೆ.

ಹೀಗಾಗಿ ಚಕ್ರವರ್ತಿ ಸೂಲಿಬೆಲೆ ಆಗಾಗ ಉತ್ತರ ಕನ್ನಡಕ್ಕೆ ವಕ್ಕರಿಸುತ್ತಿದ್ದಾನೆ. ಕರಾವಳಿಯ ಕಮ್ಯುನಲ್ ಹವಾಕ್ಕೆ ಮತ್ತಷ್ಟು ಉಪ್ಪು-ಹುಳಿ-ಖಾರ ಬೆರೆಸಿ ಬಾಯಿ ಚಪ್ಪರಿಸುತ್ತಿದ್ದಾನೆ. ಅದರ ಮುಂದುವರಿದ ಭಾಗವೇ "ಏಸುಕ್ರಿಸ್ತ ಮಹಾತ್ಮೆ" ಯಕ್ಷ ಪ್ರಸಂಗದ ಬಗ್ಗೆ ಕ್ಯಾತೆ ತೆಗೆದು ಜಗಳಕ್ಕೆ ಕಾಲು ಕೆರೆಯುತ್ತಿರುವುದು! ಅಧಿಕಾರ ವ್ಯಾಮೋಹಕ್ಕೆ ಬಿದ್ದಿರುವ ಸೂಲಿಬೆಲೆ ಎಂಥಾ ಪಾತಕಕ್ಕೂ ಸರ್ವಸನ್ನದ್ಧವಾಗಿದ್ದಾನೆ! ಸಮಯಸಾಧಕತನವೇ ಸೂಲಿಬೆಲೆಯ ಸಿದ್ಧಾಂತ. ಹೇಳೋದು ವೇದಾಂತ; ಇಕ್ಕೋದು ಕೊಬ್ಬೆಯಲ್ಲೇ ಗಾಳ!!

ಸ್ತನ ಯಕ್ಷಗಾನ ನೋಡಿದ ಜನ ಮತಾಂತರವಾಗುವುದಿಲ್ಲ

ವಾರದ ಕೊನೆಗೆ ಪ್ರದರ್ಶನವಾಗಲಿರುವ 'ಏಸು ಹಾತ್ಮೆ' ಎಂಬ ಕನ್ನಡ ಯಕ್ಷಗಾನ ತಾಳಮದ್ದಳೆ ಕ್ರಮಕ್ಕೆ ಹಿಂದುತ್ವವಾದಿಗಳಿಂದ ವಿರೋಧ ತ್ತಿದೆ. ಇದು ಮತಾಂತರದ ಹುನ್ನಾರು ಎಂದು ಎಂಬವನು ತನ್ನ ಫೇಸ್‌ಬುಕ್ಕಿನಲ್ಲಿ ಕಿರುಚಾಡಿದ್ದಾನೆ. ಗತಿ ಏನೆಂದರೆ ಈ ಪ್ರಸಂಗವನ್ನು ಮುಳಿಯ ಎಂಬವರು 40 ವರ್ಷದ ಹಿಂದೆಯೇ ಬರೆದು ಹಾಗೂ ಮುಂಬೈಯಲ್ಲೂ ನೂರಾರು ಪ್ರದರ್ಶನ ಈ ಯಕ್ಷಗಾನ ನೋಡಿದ ಸಾವಿರಾರು ಜನರಲ್ಲಿ 40 ವರ್ಷಗಳಿಂದ ಯಾರೂ ಕ್ರೈಸ್ತ ಧರ್ಮಕ್ಕೆ ರವಾಗಿಲ್ಲ. ಹಾಗಾದರೆ ಈಗ ಒಮ್ಮೆಲೇ ಈ ಸಂಘಿಗಳಲ್ಲಿ ಹುಟ್ಟಿದ್ದು ಯಾಕೆ? ಕೆಲವೇ ತಿಂಗಳಲ್ಲಿ ದ ವಿಧಾನಸಭಾ ಚುನಾವಣೆ ಇದೆ ಎಂದೇ? ಚುನಾವಣೆ ಕಾಲಕ್ಕೆ ಕೋಮು ವಿವಾದ ಎಬ್ಬಿಸಲು ೂ ನೆಪ ಬೇಕು ಅಲ್ಲವೇ?



ಯಕ್ಷಗಾನ ನೋಡಿದ ಮಾತ್ರಕ್ಕೆ ವೀಕ್ಷಕರು ಮತಾಂತರ ಹೊಂದುವುದೇ ಆಗಿದ್ದರೆ ಇಷ್ಟೊತ್ತಿಗೆ ಕರಾವಳಿಯ ಎಲ್ಲಾ ಮುಸ್ಲಿಂ ಮತ್ತು ಕ್ರೈಸ್ತರು ಹಿಂದೂ ಧರ್ಮಕ್ಕೆ ಮತಾಂತರ ಹೊಂದಲೇ ಬೇಕಿತ್ತು! ಯಾಕೆಂದರೆ ಇಲ್ಲಿ ಪ್ರದರ್ಶಿತವಾಗುವ ಕನ್ನಡ ಮತ್ತು ತುಳು ಯಕ್ಷಗಾನಗಳೆಲ್ಲಾ ನೂರಕ್ಕೆ ನೂರು ಹಿಂದೂ ಪುರಾಣ ಆಧಾರಿತವಾದವುಗಳು ಹಾಗೂ ಇಲ್ಲಿಯ ಹಳ್ಳಿಗಳಲ್ಲಿ ಪ್ರತಿಯೊಬ್ಬ ಕ್ರೈಸ್ತ ಹಾಗೂ ಮುಸ್ಲಿಮರು ಹಿಂದೂ ಪುರಾಣದ ಯಕ್ಷಗಾನ ತಪ್ಪದೇ ನೋಡಿರುತ್ತಾರೆ.

ನಿಜವಾಗಿ ಯಕ್ಷಗಾನಗಳೆಲ್ಲಾ ವೈದಿಕರ ಜಾಹೀರಾತು ಕಂಪನಿಗಳು ಎಂಬುದು ನಿಜ. ವೈದಿಕ ದೇವರನ್ನು ವೈಭವೀಕರಿಸಿ ಜನರನ್ನು ಮೂಢನಂಬಿಕೆಗಳ ದಾಸರನ್ನಾಗಿಸುವ ಕೆಲಸ ಮಾತ್ರ ಈಗಿನ ಯಕ್ಷಗಾನಗಳು ಮಾಡುತ್ತವೆ. ಹಿಂದಿನ ಕಾಲದಲ್ಲಿ ಯಕ್ಷಗಾನಗಳು ಹಳ್ಳಿಗರ ಮನೋರಂಜನೆಗಾಗಿ ಮಾತ್ರ ಆಡಿಸಲಾಗುತ್ತಿತ್ತು ಹಾಗೂ ಹೆಚ್ಚಿನ ಪಾತ್ರಧಾರಿಗಳು ಶೂದ್ರರೇ ಆಗಿರುತ್ತಿದ್ದರು. (ಬ್ರಾಹ್ಮಣ ಹೆಂಗಸರಿಗೆ ಇಂದಿಗೂ ಯಕ್ಷಗಾನ ನೋಡುವುದು ನಿಷಿದ್ಧ). ಅಷ್ಟೇ ಅಲ್ಲ ಹಿಂದಿನ ಕಾಲದಲ್ಲಿ ಮುಖ್ಯ ಪಾತ್ರಗಳಿಗೆ ತಮ್ಮ ಸಂಭಾಷಣೆ ಬದಲಾಯಿಸಿಕೊಳ್ಳುವ ಪೂರ್ಣ ಸ್ವಾತಂತ್ರ್ಯ ಇರುತ್ತಿತ್ತು. ಅದರಿಂದಾಗಿ ವೇದಿಕೆಯ ಮೇಲೆಯೇ ಎರಡು ಪಾತ್ರಗಳ 'ಜುಗಲ್ ಬಂದಿ' ನಡೆದು ಪ್ರೇಕ್ಷಕರಿಗೆ ಪ್ರತಿ ಸಾರಿ ವಿನೂತನ ಮನೋರಂಜನೆ ಸಿಗುತ್ತಿತ್ತು. ಆಗಿನ 'ವಾಲಿ ವಧೆ' ಪ್ರಸಂಗದಲ್ಲಿ ವಾಲಿ ಪಾತ್ರಧಾರಿ ರಾಮನ ಪಾತ್ರಧಾರಿಯನ್ನು ಹಿಗ್ಗಾಮುಗ್ಗಾ ಹೀಯಾಳಿಸಿ, "ಮರೆಯಲ್ಲಿ ನಿಂತು ಬಾಣ ಬಿಡುವ ರಾಮಾ ನೀನು ಷಂಡ ಹೇಡಿ" ಎಂದೆಲ್ಲಾ ನಿಂದಿಸುವ ಸ್ವಾತಂತ್ರ್ಯವಿತ್ತು. ಅದೇ ಪ್ರಕಾರ 'ಕಲ್ಲುರ್ಟಿ ಪ್ರತಾಪ'ದಲ್ಲಿ ಕಲ್ಲುರ್ಟಿ ಎಂಬ ದೈವಿಶಕ್ತಿಯ ಮಹಿಳೆ ಕಾರ್ಕಳದ ಜೈನ ಅರಸನ ಮೇಲೆ ಯುದ್ಧಕ್ಕೆ ಹೊರಟಾಗ ತನ್ನ ದಾರಿಗೆ ಅಡ್ಡಬಂದು ತನಗೆ ಕಿರುಕುಳ ಕೊಡಲು ಹವಣಿಸಿದ ಕೃಷ್ಣನನ್ನು ಥಳಿಸಿ ಒದ್ದು ಓಡಿಸುವ ದೃಶ್ಯವಿರುತ್ತಿತ್ತು, 'ನಾಗಶ್ರೀ' ಎಂಬ ಪ್ರಸಂಗದಲ್ಲಿ ಕೃಷ್ಣನು ಒಬ್ಬ ಹೆಣ್ಣುಬಾಕ, ಮಹಾ ಕುತಂತ್ರಿ ಎಂದು ಬಿಂಬಿಸಿದ್ದು ಮಾತ್ರವಲ್ಲ ಅವನು ಪತಿವ್ರತೆ ನಾಗಶ್ರೀಯನ್ನು ಪಡೆಯಲೋಸುಗ ಅವಳ ಗಂಡನನ್ನು ಮೋಸದಿಂದ ಕೊಲ್ಲುವುದು ಹಾಗೂ ನಾಗಶ್ರೀ ಇದರ ಸೇಡು ತೀರಿಸಲು ಕೃಷ್ಣನ ಬೆನ್ನು ಹತ್ತುವಾಗ ಅವನು ತನ್ನ ಜೀವ ಉಳಿಸಿಕೊಳ್ಳಲು ಉಡುಪಿ ದೇವಸ್ಥಾನದ ಕೃಷ್ಣನ ಮೂರ್ತಿಯಲ್ಲಿಯೇ ಅಡಗಿ ಕುಳಿತುಕೊಳ್ಳುವುದು ಮತ್ತು ನಾಗಶ್ರೀ ಆ ಮೂರ್ತಿಗೇ ಕಚ್ಚಿ ಬಿಳಿಯಾಗಿದ್ದ ಆ ಮೂರ್ತಿಯನ್ನು ತನ್ನ ವಿಷದಿಂದ ಕಪ್ಪು ಮಾಡುವುದು (ಉಡುಪಿ ಕೃಷ್ಣನ ಮೂರ್ತಿ ಇಂದಿಗೂ ಕಪ್ಪಾಗಿದೆ), ಇವೆಲ್ಲಾ ದೃಶ್ಯಗಳು ಇದ್ದ ಕಥೆಯನ್ನು ಹಿಂದೆಲ್ಲಾ ಯಾವುದೇ ಆಕ್ಷೇಪಣೆ ಇಲ್ಲದೇ ಆಡಲಾಗುತ್ತಿತ್ತು, ಆದರೆ ಇತ್ತೀಚೆಗೆ ಈ ಕಥೆ ಹಿಂದೂಗಳ ಭಾವನೆಗೆ ನೋವುಂಟು ಮಾಡುತ್ತದೆ ಎಂಬ ಕುಂಟು ನೆಪದಲ್ಲಿ ಒಂದೋ ಪ್ರಸಂಗ ಆಡುವುದನ್ನೇ ಬಲಾತ್ಕಾರದಿಂದ ನಿಲ್ಲಿಸಲಾಗಿದೆ ಅಥವಾ ಕಲ್ಲುರ್ಟಿ ಮತ್ತು ನಾಗಶ್ರೀ ಇಬ್ಬರೂ ಕೊನೆಗೆ ಕೃಷ್ಣನ ಭಕ್ತರಾಗಿ ಮುಕ್ತಿ ಹೊಂದುವ ತಿರುಚಿದ ಕಥೆಯನ್ನು ಸಂಘಿಗಳ ಒತ್ತಡದಿಂದ ಸೇರಿಸಲಾಗಿದೆ.

ಹಿಂದೆಲ್ಲಾ ಹರಕೆ ಯಕ್ಷಗಾನಗಳು ಇರಲಿಲ್ಲ, ಆದರೆ ಜನರಲ್ಲಿ ಹಣ ಹೆಚ್ಚಿದಂತೆ ಭಯವೂ ಹೆಚ್ಚಿ ದೇವರ ಇಗೋ ಬೂಸ್ಟು ಮಾಡಿ ಲಂಚ ಕೊಟ್ಟು ದೇವರನ್ನು ಒಲಿಸಿಕೊಳ್ಳಲು ಆಯಾ ದೇವರ ಕಟ್ಟುಕತೆಯುಳ್ಳ ಯಕ್ಷಗಾನ ಹರಕೆ ಕೊಡುವ ಪದ್ಧತಿ 30-40 ವರ್ಷಗಳಿಂದ ಶುರುವಾಗಿ ಈಗ ಅದು ವಿಪರೀತ ಹೆಚ್ಚಿದೆ. ಇದರಿಂದಾಗಿ ಒಳ್ಳೆಯ ಪ್ರಸಂಗಗಳು ಕಣ್ಮರೆಯಾಗಿ ಕೇವಲ 'ದೇವಿ ಮಹಾತ್ಮೆ' ಎಂಬ ಒಂದೇ ಪ್ರಸಂಗ ಎಲ್ಲೆಡೆ ಪ್ರದರ್ಶನವಾಗಿ ಜನರನ್ನು ಬೋರ್ ಹೊಡೆಸುತ್ತಿದೆ. ವಿಚಿತ್ರವೆಂದರೆ ಎಂಟು ಗಂಟೆ ಅವಧಿಯ ದೇವಿ ಮಹಾತ್ಮೆ ಪ್ರಸಂಗ ಆಡುವಾಗ ಮೊದಲಿಗೆ ಹರಕೆದಾರನ ಕುಟುಂಬದ ಹತ್ತು ಜನ ಪ್ರೇಕ್ಷಕರು ಇರುತ್ತಾರೆ. ಆದರೆ ಒಂದೆರಡು ಗಂಟೆಯ ನಂತರ ಒಬ್ಬ ಪ್ರೇಕ್ಷಕನೂ ಇರುವುದಿಲ್ಲ, ಆದರೂ ಖಾಲಿ ಕುರ್ಚಿಗಳ ಎದುರು ವೇದಿಕೆಯಲ್ಲಿ ನೀರಸ ಹರಕೆ ಯಕ್ಷಗಾನ ನಡೆಯುತ್ತಲೇ ಇರುತ್ತದೆ. ಸಂಪೂರ್ಣ ಕಟ್ಟುಕಥೆ ಹೊಂದಿರುವ ಇಂತಹ ಅರ್ಥವಿಹೀನ ಹರಕೆಯಿಂದ ಯಾವ ನೈಜ ದೇವರು ಸಂತುಷ್ಟರಾಗಲು ಸಾಧ್ಯ? ಇಂತಹ ಸಂದರ್ಭದಲ್ಲಿ ಏಸು ಕ್ರಿಸ್ತ ಮಹಾತ್ಮೆ ಎಂಬ ಅರ್ಥಪೂರ್ಣ ಯಕ್ಷಗಾನ ಪ್ರದರ್ಶನವಾದರೆ ಅವನತಿಯ ದಾರಿಯಲ್ಲಿರುವ ಈ ಕಲೆಗೆ ಸ್ವಲ್ಪ ಕಾಯಕಲ್ಪ ಹಾಗೂ ನಾವೀನ್ಯತೆ ಸಿಗಬಹುದು.

ಯೇಸು ಕ್ರಿಸ್ತನ ಕತೆಯುಳ್ಳ ಯಕ್ಷಗಾನ ಒಂದೇ ರಾತ್ರಿ ನೋಡಿ ಜನರು ಮತಾಂತರ ಹೊಂದುವುದಾದರೆ ಕ್ರೈಸ್ತರ ಶಾಲೆ-ಕಾಲೇಜುಗಳಲ್ಲಿ 10-15 ವರ್ಷ ಕಲಿತ ಮಕ್ಕಳು ಕ್ರೈಸ್ತ ಧರ್ಮ ಸ್ವೀಕರಿಸಬಹುದು ಎಂಬ ಭಯ ಹಿಂದೂತ್ವವಾದಿಗಳಲ್ಲಿ ಮೂಡುತ್ತಿಲ್ಲವೇಕೆ? ಕರಾವಳಿಯಲ್ಲಿ ಹಳ್ಳಿ ಹಳ್ಳಿಗಳಲ್ಲಿ ಕ್ರೈಸ್ತರ ಕನ್ನಡ ಮಾಧ್ಯಮ ಶಾಲೆಗಳಿವೆ. ನಗರಗಳಲ್ಲಿ ಹೆಚ್ಚಿನ ಕಾಲೇಜುಗಳೂ ಕ್ರೈಸ್ತ ಸಂಸ್ಥೆಗಳದ್ದೇ ಆಗಿವೆ. ಇವತ್ತು ಕರಾವಳಿ ಸಂಪೂರ್ಣ ಸಾಕ್ಷರತೆ ಹೊಂದಿದ್ದರೆ ಅದಕ್ಕೆ ಅತಿ ದೊಡ್ಡ ಕಾಣಿಕೆ ಕೊಟ್ಟಿದ್ದು ಕ್ರೈಸ್ತರ ಶೈಕ್ಷಣಿಕ ಸಂಸ್ಥೆಗಳು. ಕ್ರೈಸ್ತ ಶಾಲೆಗಳಿರದಿದ್ದರೆ ಕರಾವಳಿ ಇಂದಿಗೂ ಬೀದರ್‌ನಷ್ಟೆ ಹಿಂದುಳಿದಿರುತ್ತಿತ್ತು. ಇವೆಲ್ಲಾ ಸೂಲಿಬೆಲೆ ಯಂತಹ ಸಂಕುಚಿತ ಬುದ್ಧಿಯವರಿಗೆ ಕಾಣಿಸದಿರುವುದು ಆಶ್ಚರ್ಯ.

■ ಪ್ರವೀಣ್ ಎಸ್ ಶೆಟ್ಟಿ, ಮಂಗಳೂರು

ದಗು ತಿಟ್ಟಿನ ಜನಪ್ರಿಯ ಕಲಾವಿದರು ಪ್ರಸಂಗದಲ್ಲಿ ಮಾಡುತ್ತಿದ್ದರು. ಸುಪ್ರಸಿದ್ಧ ಕಲಾವಿದರಾಗಿದ್ದ ಮಲ್ಪೆ ವ ಸಾಮಗರಂಥವರು ಏಸು ಪಾತ್ರ ಮಾಡಿದ್ದೂ ಗ ಯಾವ ಅಡ್ಡ ಶೃತಿ ಎದ್ದಿರಲಿಲ್ಲ; ಮತೀಯ ನುಮಾನ ಮೂಡಿರಲಿಲ್ಲ, ಆಗ ಏಸು ಮಹಾತ್ಮೆ ತರಕ್ಕೆ ಪ್ರೇರಣೆಯಾದ ಯಾವ ಕುರುಹುಗಳೂ ಇದರರ್ಥ ಇಷ್ಟೇ. 40 ವರ್ಷದ ಹಿಂದೆ ಯಲ್ಲಿ ಸೌಹಾರ್ದದ, ಸೌಜನ್ಯದ, ಸಾಮರಸ್ಯದ ಇತ್ತು. ಕಲೆಯಲ್ಲಿ ಕೊಂಕು ಹುಡುಕಿ ಮತೀಯ ಜ್ ಪಡೆಯುವ ಸಣ್ಣತನದ ರೋಗ ಆಗ ಯಲ್ಲಿ ಇರಲಿಲ್ಲ.

ಗ ಎದ್ದಿರುವ ವಿವಾದಕ್ಕೆ ಚೆಡ್ಡಿ ಪಡೆಯ ನ್ಮಾದದ ಆಯಾಮ ಬಿಟ್ಟರೆ, ಮತ್ಯಾವ ತಾರ್ಕಿಕ ಇಲ್ಲ. ಕಿತಾಪತಿಗಾರರಿಗೆ ಏಸು ಮಹಿಮೆ ಪ್ರಸಂಗ ರ್ಷದ ಹಿಂದಿನದೆಂಬುದೇ ಗೊತ್ತಿಲ್ಲ. ತ್ತಿರುವುದು ಮರು ಮುದ್ರಣದ ಸಮಾರಂಭ ಎಂಬ ಳಿವಳಿಕೆ ಇಲ್ಲದ ಮಂದಿಗೆ ಯಕ್ಷಗಾನ ರಂಗದ , ಆಳಗಳೂ ಗೊತ್ತಿಲ್ಲ, ಮಜಾ ಎಂದರೆ ಜನ್ಮಾಪಿ ಯಕ್ಷಗಾನ ನೋಡದ ಕೇಸರಿ ಬ್ರಿಗೇಡ್‌ನ ರೂ "ಆ ಯಕ್ಷಗಾನದವರಿಗೆ ಸ್ವಲ್ಪ ಬುದ್ಧಿ ಹೇಳಿ ಪ್ರಿ..." ಎಂದು ಜಾಲತಾಣದಲ್ಲಿ ಹಲಬುತ್ತಿದ್ದಾರೆ. ಕ್ಕೆ ಮತಾಂತರ ಥಳಕು ಹಾಕುವುದೇ ಹಾಸ್ಯಾಸ್ಪದ!

ಕಾರ ಮುಳಿಯ ಕೇಶವಯ್ಯ ಪ್ರಸಂಗದ ಯಲ್ಲಿ ಬರೆದಿರುವ ಮಾತುಗಳು ಕೃತಿಯ ಉದ್ದೇಶ ವಾಗಿ ಮನದಟ್ಟು ಮಾಡುವಂತಿದೆ. ಪುಣ್ಯ ೂ-ಮಹಾತ್ಮನೂ ಆದ ಏಸುವಿನ ಕತೆಯನ್ನು ನಕ್ಕೆ ಅಳವಡಿಸಿದರೆ ನಮ್ಮವರೇ ಆದ ಕ್ರೈಸ್ತ ರಿಗೆ ಯಕ್ಷಗಾನದ ಮೇಲೆ ಪ್ರೀತಿಯನ್ನು, ರಿಗೆ ಕ್ರೈಸ್ತ ಮತದ ಸಾರಾಂಶವನ್ನೂ, ಏಸುವಿನ ಜೀವನದ ಮೇಲೆ ಆಸಕ್ತಿಯನ್ನೂ ಮಾಡುವುದರಲ್ಲಿ ಸಂಶಯವಿಲ್ಲ, ಹಾಗಂತ ಕೇಶವಯ್ಯ ರೆ. ಯಕ್ಷಗಾನ ಎಂಬುದು ಬರಿ ಕಲೆಯ ಅದು ಕರಾವಳಿಯ ಒಂದು ಉಪ- ಯೂ ಹೌದು.


ಗಾನ ಅದೇ ಹೊತ್ತಿಗೆ ಹಿಂದೂಗಳ ಆರಾಧನಾ ವ್ಯಾಪಿಸಿಕೊಂಡಿದೆ. ಯಕ್ಷಗಾನ ಪುರೋಹಿತಶಾಹಿ ಚಾರದ ಮಾಧ್ಯಮ ಎಂಬ ಟೀಕೆಯೂ ಇದೆ. ೂ ಏರಿ. ಈ ಯಕ್ಷಲೋಕ ಕಲೆಯಾಗಿ ಎಲ್ಲಾ ಜಾತಿ-ಧರ್ಮದವರನ್ನು ತನ್ನೊಳಗೆ ಸೇರಿಸಿಕೊಂಡಿದೆ. ಬೇರೆ-ಬೇರೆ ಮತ-ಪಂಥ-ಜಾತಿಯವರೂ ಯಕ್ಷಗಾನದ ನೃತ್ಯ-ತಾಳ-ಲಯ-ವೇಷಗಾರಿಕೆ-ಕಥನ ಕಲೆಗೆ ತಲೆದೂಗುತ್ತಿದ್ದಾರೆ. ಹಿಂದೂಗಳಷ್ಟೇ ಅಲ್ಲ, ಮುಸ್ಲಿಮ್-ಕ್ರಿಶ್ಚಿಯನ್ ಸಮುದಾಯದಲ್ಲೂ ಅದ್ಭುತ ಕಲಾವಿದರಿದ್ದಾರೆ. ಪುರಾಣ-ಇತಿಹಾಸ-ಭಾಗವತ-ರಾಮಾಯಣ-ಮಹಾಭಾರತಗಳ ಪಾತ್ರಗಳ ಮರು ವ್ಯಾಖ್ಯಾನ ಮಾಡಬಲ್ಲ ಸಮರ್ಥ ಹಿಂದೂಯೇತರ ಕಲಾವಿದರಿದ್ದಾರೆ. ಆಟ ಆಡಿಸುವವರಲ್ಲಿ ಕ್ರಿಶ್ಚಿಯನ್-ಮುಸ್ಲಿಮ್ ಧರ್ಮೀಯರೂ ಇದ್ದಾರೆ. ಇಂಥ ನಮನೀಯ ಕಲೆ ಬರೀ ಹಿಂದೂಗಳಿಗಷ್ಟೇ ಸೀಮಿತವಾಗಿಲ್ಲ ಎಂಬುದು ಧರ್ಮಾಂಧತೆಯ ರೋಗಕ್ಕೆ ತುತ್ತಾಗಿರುವ ಬಕ್ರವರ್ತಿಯಂಥವರಿಗೆ ಅರ್ಥವಾಗೋದಾದರೂ ಹೇಗೆ?!

ಯಕ್ಷಗಾನದ ಬಗ್ಗೆ ಕರಾವಳಿಗರಿಗೆ ಅವರದೇ ಆದ ಒಲವು-ನಿಲುವುಗಳಿವೆ. ಸ್ಥಳೀಯ ಐತಿಹ್ಯದ ಹಲವು ಆಖ್ಯಾನಗಳು ವರ್ಷವಿಡೀ ನಡೆಯುತ್ತವೆ. ಇದರಿಂದ ಪ್ರಚೋದಿತರಾಗಿ ದಾರಿ ತಪ್ಪುವಷ್ಟು ದುರ್ಬಲರಲ್ಲ ಕರಾವಳಿಗರು. ಒಳ್ಳೆಯದಕ್ಕೆ ಯಕ್ಷರಂಗ ಪ್ರೇರಣೆ ಆಗಿರಬಹುದು. ಅರ್ಧ ಶತಮಾನಕ್ಕೂ ದೊಡ್ಡದಾದ ಇತಿಹಾಸದ ಯಕ್ಷಗಾನ ಇತಿಹಾಸದುದ್ದಕ್ಕೂ ಅನೇಕ ಪ್ರಯೋಗ ಕಂಡಿದೆ. ಯಕ್ಷಗಾನದಷ್ಟು ಚಲನಶೀಲ ಕಲೆ ಜಗತ್ತಿನಲ್ಲಿ ಮತ್ತೊಂದಿಲ್ಲ ಎಂಬ ಚರ್ಚೆಗಳೂ ನಡೆದಿವೆ. ಈ ಪ್ರಯೋಗಶೀಲತೆಯಿಂದಾಗಿಯೇ ಇವತ್ತಿಗೂ ಯಕ್ಷಗಾನ ಜನಮನಕ್ಕೆ ಹತ್ತಿರವಾಗಿದೆ. ದೇವಾನುದೇವತೆಗಳನ್ನು ಸ್ತುತಿಸುವಂತೆಯೇ, ಟೀಕಿಸುವ, ಮೂದಲಿಸುವ, ಪ್ರಶ್ನೆ ಮಾಡುವ ಪ್ರಸಂಗ ಯಕ್ಷಗಾನದಲ್ಲಿದೆ. ವಾಲಿಯ ಮೇಲೆ ಕದ್ದು ಬಾಣ ಬಿಡುವ ರಾಮನ ಬಣ್ಣ ಬಯಲಾಗಿಸುವ "ವಾಲಿ ವಧೆ", ಬಪ್ಪನಾಡು ದುರ್ಗಾಪರಮೇಶ್ವರಿಗೆ ಗುಡಿ ಕಟ್ಟಿಸುವ ಬಪ್ಪಬ್ಯಾರಿ ಎಂಬ ಸಾಬಿಯ ಕತೆಯ "ಬಪ್ಪ ನಾಡು ಕ್ಷೇತ್ರ ಮಹಾತ್ಮೆ" ಯಂಥ ಯಕ್ಷಗಾನ ಪರಂಪರೆಯ ಮುಂದುವರಿದ ಭಾಗವೇ "ಏಸುಕ್ರಿಸ್ತ ಮಹಾತ್ಮೆ."

ದಕ್ಷಿಣ ಕರಾವಳಿಯನ್ನು ಕೇಸರಿ 'ಕರ್ಮ' ಭೂಮಿಯಾಗಿ ಮಾಡಿಕೊಂಡಿರುವ ಡಾನ್ ಕಲ್ಲಡ್ಕ ಭಟ್ಟ, ಜಗದೀಶ್ ಕಾರಂತ, ಸೂಲಿಬೆಲೆ ಚಕ್ರವರ್ತಿಯಂಥ ಜನಿವಾರಿ ಸನಾತನಿಗಳಿಗೆ ತಾವು ಪ್ರತಿಪಾದಿಸುವ ಹಿಂದೂತ್ವದ ಗಟ್ಟಿತನದ ಬಗ್ಗೇ ಹಲವು ಅನುಮಾನ-ಅಪನಂಬಿಕೆಯಿದೆ. ಒಂದು ಯಕ್ಷಗಾನ ಪ್ರಸಂಗ ನೋಡಿದ ಮಾತ್ರಕ್ಕೆ ಹಿಂದೂಗಳು ಮತಾಂತರ ಮಾಡಬಹುದೆಂಬ ತೀರ್ಮಾನಕ್ಕೆ ಸೂಲಿಬೆಲೆ ಚಕ್ರವರ್ತಿಯಂಥ ಹಿಂದೂ ಹರಿ ಹರಿಕಾರರು ಬರುತ್ತಾರೆಂದಾದರೆ, ಆ ಹಿಂದೂ ಧರ್ಮದ ತಳ ಸಮುದಾಯದ ಮಂದಿ ಅದೆಂಥ ಹೇಯ-ಬರ್ಬರ ಸ್ಥಿತಿಯಲ್ಲಿರಬಹುದು, ಪುರೋಹಿತಶಾಹಿಗಳ ದಬ್ಬಾಳಿಕೆಗೆ ತುತ್ತಾಗಿರಬಹುದೆಂಬುದನ್ನು ಸಾಬೀತುಪಡಿಸುತ್ತದೆ! ಈ ಆತಂಕವೇ ಸೂಲಿಬೆಲೆ ಚಕ್ರವರ್ತಿಯ ಏಸು ಮಹಾತ್ಮೆ ವಿರುದ್ಧದ ಬೊಬ್ಬೆಯ ಹಿಂದಿನ ಗುಟ್ಟು. ಸೂಲಿಬೆಲೆ ಚಕ್ರವರ್ತಿ ಗ್ಯಾಂಗಿಗೆ ಹಿಂದೂತ್ವದ ಟೊಳ್ಳುತನ ಖಾತ್ರಿಯಾಗಿರುವುದರಿಂದಲೇ ಏಸು ಮಹಾತ್ಮೆ ಮತಾಂತರದ ಗುಮ್ಮವಾಗಿ ಕಾಡುತ್ತಿವೆ. ಅಷ್ಟೇ ಅಲ್ಲ, ಹಿಂದೂಗಳೆಂದರೆ, ಪೆದ್ದುಗಳೆಂದು ಸೂಲಿಬೆಲೆ ಚಕ್ರವರ್ತಿಯ ಫೇಸ್‌ಬುಕ್ - ವಾಟ್ಸ್‌ಆಪ್ ರೋಳಿ ನಂಬಿದಂತಿದೆ.

ಎಲ್ಲ ಧರ್ಮೀಯರೂ ಮೆಚ್ಚುವ ಯಕ್ಷಗಾನದಂಥ ಕಲೆಗೆ ಕಲ್ಲು ಹಾಕುವ ಬಕ್ರವರ್ತಿ ಬಳಗ ಏಸು ಮಹಾತ್ಮೆಗೆ ಗಂಟು ಬಿದ್ದು ಬೊಬ್ಬಿರಿಯುತ್ತಿರುವುದು ಹಿಂದೂತ್ವದ ಅಸಲಿಯತ್ತು ಜಗಜ್ಜಾಹೀರುಮಾಡುತ್ತಿದೆ. ಈ ಸರಳ ಸತ್ಯ ಮತೋನ್ಮತ್ತ ಹಾಹಾಗಾ ಭಾಷಣ ಪಂಡಿತ ಬಕ್ರವರ್ತಿಗೆ ಅರ್ಥ ಮಾಡಿಸೋರು ಯಾರು?

■ ಶುದ್ದೋಧನ



'ಮಹಾಚೇತನ-ಏಸುಕ್ರಿಸ್ತ ಮಹಾತ್ಮೆ'

ಶ್ರೀ ಮುಳಿಯ ಕೇಶವಯ್ಯ ವಿರಚಿತ

ಅರ್ಥಸಹಿತ ಪರಿಷ್ಕೃತ ಯಕ್ಷಗಾನ ಪ್ರಸಂಗಕೃತಿಯ ಲೋಕಾರ್ಪಣೆ

ದಿನಾಂಕ :

27-5-2017 ಶನಿವಾರ

ಸಮಯ : ಅಪರಾಹ್ನ 3-00 ಗಂಟೆಗೆ

ಸ್ಥಳ : ಡಾನ್ ಬಾಸ್ಕೋ ಹಾಲ್, ಬಲ್ಮಠ, ಮಂಗಳೂರು.

ಅಧ್ಯಕ್ಷತೆ : ಡಾ. ಕೆ. ಚಿನ್ನಪ್ಪ ಗೌಡ
ಪ್ರಾಧ್ಯಾಪಕರು, ಕನ್ನಡ ವಿಭಾಗ, ಮಂಗಳೂರು ವಿಶ್ವವಿದ್ಯಾಲಯ

ಉದ್ಘಾಟಕರು : ರೆ. ಡಾ. ಅಲೋಶಿಯಸ್ ಪಾಲ್ ಡಿ'ಸೋಜ
ಧರ್ಮಾಧ್ಯಕ್ಷರು, ಕಥೋಲಿಕ್ ಧರ್ಮ ಪ್ರಾಂತ್ಯ, ಮಂಗಳೂರು

ಮುಖ್ಯ ಅತಿಥಿಗಳು : ರೆ. ಡಾ. ಹನಿ ಕಬ್ರಾಲ್
ಪ್ರಾಂಶುಪಾಲರು, ಕರ್ನಾಟಕ ಥಿಯೋಲಾಜಿಕಲ್ ಕಾಲೇಜು
ಸೆಕ್ರೆಟರಿ, ಕರ್ನಾಟಕ ಕ್ರಿಶ್ಚಿಯನ್ ಎಜುಕೇಶನ್ ಸೊಸೈಟಿ

ಗೌರವಾನ್ವಿತ ಅಭ್ಯಾಗತರು : ರೆ. ಫಾ. ಮಾರ್ಕ್ ವಾಲ್ಡರ್
ವಿಶ್ರಾಂತ ಧರ್ಮಗುರುಗಳು, ಅಲಂಗಾರು ಚರ್ಚ್, ಮೂಡಬಿದ್ರೆ

ಕೃತಿ ಪರಿಚಯ : ಡಾ. ಆನಂದರಾಮ ಉಪಾಧ್ಯ
ಖ್ಯಾತ ಕನ್ನಡ ಸಾಹಿತಿಗಳು, ಯಕ್ಷಗಾನ ವಿಮರ್ಶಕರು.


ತಾಳಮದ್ದಳೆ : ಏಸುಕ್ರಿಸ್ತ ಮಹಾತ್ಮೆ

ಹಿಮ್ಮೇಳ : ಶ್ರೀ ರಮೇಶ ಭಟ್ ಪುತ್ತೂರು
ಶ್ರೀ ಕೃಷ್ಣಪ್ರಸಾದ ಉಳಿತ್ತಾಯ, ಶ್ರೀ ರಾಮಪ್ರಸಾದ್ ವಧ್ವ

ಮುಮ್ಮೇಳ : ಶ್ರೀ ಶಂಭು ಶರ್ಮ ವಿಟ್ಲ, ಶ್ರೀ ರಾಧಾಕೃಷ್ಣ ಕಲ್ಚಾರ್
ಶ್ರೀ ಸೇರಾಜೆ ಸೀತಾರಾಮ ಭಟ್, ಶ್ರೀ ಎಸ್. [illegible]
ಶ್ರೀ ರಮಾನಂದ ನೆಲ್ಲಿತ್ತಾಯ, ಶ್ರೀ ಎಸ್.ಎನ್. ಪಂಜಾಜೆ
ಶ್ರೀ ರಘು ಮುಳಿಯ, ಶ್ರೀ ಅನುರಾಗ್ ಮುಳಿಯ ಮತ್ತಿತರರು.

ಕಲಾಪ್ರೇಮಿಗಳಿಗೆ ಆತ್ಮೀಯ ಸ್ವಾಗತ.

ಕಾಂಗ್ರೆಸ್ ಕುರುಬ್ರು ಜೆಡಿಎಸ್ ಕಡೆ ವಂಟಿದ್ದರಂತೆ



• ಬಿ.ಚಂದ್ರೇಗೌಡ

ಕಟ್ಟೆಪುರಾಣ

ಮಳೆ ಬಿದ್ದ ನೆಲದಿಂದ ಧಗೆ ಏಳುತ್ತಿತ್ತು. ಜೊತೆಗೆ ಸೂರ್ಯನ ಧಗೆ ಬೇರೆ. ಹಾಗಾಗಿ ಮನುಷ್ಯರ ಮಾತಿನಲ್ಲೂ ಬಿಸಿಯುಸಿರು. ಒಂದು ಕಾಲದಲ್ಲಿ ಕಂಡವರ ಮನೆ ಸುದ್ದಿಗಳನ್ನು ಕವುಚುತ್ತಿದ್ದವರು ಈಗ ತಮ್ಮೆದುರಿಗಿನ ಮೂರು ಪಾರ್ಟಿಗಳ ಸುದ್ದಿಯಲ್ಲಿ ಮುಳುಗಿದ್ದರು. ಆಗ ವಾಟಿಸ್ಸೆ,

"ರಿಯಲಿ ತಮಾಸಿ ಅಂದ್ರೆ ಇದಪ್ಪ" ಎಂದ.

"ಯಾವುದ್ನ?" ಎಂದಳು ಜುಮ್ಮಿ.

"ಎಡೂರಪ್ಪನೂ, ಈಸ್ಪುರಪ್ಪನೂ ಟೂ ಬಾಡಿ ಒನ್ ಸೋಲಂತೆ."

"ಅಂಗಂದ್ರೇನ್ಲ?"

"ಎರಡು ದೇಹ ಒಂದೇ ಜೀವ ಅಂತೆ."

"ಯಾರ್ಲ ಅಂಗಂದೋರು?"

"ಈಸ್ಪುರಪ್ಪ"

"ಅದ್ಕೆ ಎಡೂರಪ್ಪೇನಂದವುನೆ?"

"ಎಡೂರಪ್ಪನೂ ಶೋಭಕ್ಕನೂ ನಗಾಡಿದರಂತೆ."

"ಹರಿಯ ಮುರಿಯ ಜಗಳಾಡತಿದ್ರು?" ಎಂದ ಕಾಳಮಾವ.

"ಅದೀಗ ಸ್ಟಾಪಾಗ್ಯದೆ ದ್ವಡಪ್ಪ, ಬಿಜೆಪಿ ಹೈಕಮ್ಯಾಂಡು ಅದ್ಯಾವಾಗ ಗೂಟ ಹ್ವಡಿತೂ ಏನೊ, ಕೂಡ್ಲೆ ಈಶ್ವರಪ್ಪ ಅಂಗಂದವುನೆ."

"ಅವುನಂದಿರದ್ರಲ್ಲೂ ಒಂದು ಮರ್ಮ ಅದೆ ಕಣೊ" ಎಂದ ಉಗ್ರಿ.

"ಏನು ಮರ್ಮನಪ್ಪ?"

"ಈಗ ಯರಡು ದೇಹ ಒಂದು ಜೀವ ಅಂದ್ರೆ ಮುಂದೆ ಏನೇ ಆದ್ರು ಯರಡು ದೇಹದ ಜೀವಕ್ಕೆ ತೊಂದ್ರೆ ಆಲವೆ?"

"ಅದಕ್ಕಿಂತ್ಲೂ ನಮದು ಒಂದೇ ದೇಹ, ಯರಡು ಜೀವ ಅಂದಿದ್ರೆ ಭಾಳ ಅನಾಹುತ ಇರದು ಕಣೊ ಉಗ್ರೀ."

"ಅದ್ಯಾವ ಅನಾಹುತನಪ್ಪಾ?"

"ಇಬ್ಬರ ದೇಹನೂ ಒಂದೇ ಅಂತ ಪರಿಗಣಿಸಿದ್ರೆ ತೊಂದ್ರೆ ಇಲ್ಲ, ಆದ್ರೆ ಅವರ ಮನಿಯೋರು ಕತೆ ಹೇಳು. ಹಯವದನ ನಾಟಕ ಆಯ್ತಲ್ಲೊ,"

"ಅರ್ಥಾಗಲಿಲ್ಲ,"

"ಈಗ ಎಡೂರಪ್ಪನ ದೇಹದಲ್ಲಿ ಈಶ್ವರಪ್ಪ ಅಡಗಿದ್ದು ಅದೇ ಈಶ್ವರಪ್ಪನ ದೇಹದಲ್ಲಿ ಎಡೂರಪ್ಪ ಅಡಗಿದ್ರೆ ಅವರವರ ಹೆಂಗುಸರ ಭಾವನೆ ಬಗ್ಗೆ ಯೋಚನೆ ಮಾಡೊ" ಎಂದು ವಾಟಿಸ್ಸೆ ನಕ್ಕ.

"ಈ ಹಲ್ಕ ನನ್ನ ಮಗನ ಮಾತು ನೋಡು" ಎಂದಳು ಜುಮ್ಮಿ.

"ಇದಕಿಂತ್ಲೂ ಹಿಂದೆ ನಮ್ಮ ಸಿದ್ದರಾಜನೆದ್ದಿ ತನ್ನ ಗಂಡ ಸತ್ತು ಸಿದ್ದರಾಮಯ್ಯನ ಶರೀರದಲ್ಲಿ ಸೇರಿಕಂಡವ್ಪನೆ ಅಂದಿದ್ಲು ಕಣಕ್ಕ."

"ಅದೇನೋ ಮಾತಿಗಂದವುರೆ ಬುಡ್ರ" ಎಂದ ಕಾಳಮಾವ.

"ಮಾತ್ನ ಯೇಚನೆ ಮಾಡಿ ಆಡಬೇಕು ದೊಡಪ್ಪ, ಅದರಲ್ಲೂ ರಾಜಕಾರಣದಲ್ಲಿರೋರು."

"ಅಂಗೆ ಮಾತಾಡೋರ್ಯಾರಿದ್ದರಿವತ್ತು?"

"ಯಾರು ಇಲ್ಲ ದ್ವಡಪ್ಪ ಅದರಲ್ಕಲ್ಲ ಸಿದ್ದರಾಮಯ್ಯನೆ ಒಸಿ ತೂಕವಾಗಿ ಮಾತಾಡೋನು."

"ಭಾಳ ಗತಿಗೆಟ್ಟ ಸ್ಥಿತಿ ಬುಡಿದು" ಎಂದ ಉಗ್ರಿ.

"ಅಂತ ಸ್ಥಿತಿ ತಂದೋನು ಸಿದ್ದರಾಮಯ್ಯನಂತೆ."

"ಅವುನೇನು ಮಾಡಿದಾ?" ಎಂದ ಕಾಳಮಾವ.

"ಅವುನೇನು ಮಾಡ್ಲಿಲ್ಲ ದೊಡಪ್ಪ, ಅವುನಾಳ್ತಕವುನು ಸುಮ್ಮನಿದ್ದ. ಆದ್ರೆ ಅವುನಿಗುಪಕಾರ ಮಾಡಿದೋರು ಸಿದ್ದರಾಮಯ್ಯ ನಮಿಗೇನೋ ಮಾಡ್ತನೆ ಅಂತ ಕಾಯ್ತಾಯಿದ್ರು. ತಪ್ಯಾರದೇಳು?"

"ಕಾದೋರದೇ ತೆಪ್ಪು ಅಂತಿಯಾ?"

"ಊ ಮತ್ತೆ, ವಿಶ್ವನಾಥನಿಗೆ ಸಿದ್ದರಾಮಯ್ಯ ಏನೂ ಮಾಡಕ್ಯಾಗದಿಲ್ಲ, ಯಾಕಪ್ಪಾ ಅಂದ್ರೆ ಅವುನಂಗೆ ಹದುನೇಳು ಜನ ಎಂ.ಪಿ.ಗಳು ಸೋತಿದ್ರು. ಅವುರನ್ನಲ್ಲ ಬುಟ್ಟು ವಿಶ್ವನಾಥನಿಗೆ ಏನಾರ ಮಾಡಿದ್ರೆ ಈ ಪೇಪರ್ ಟಿವಿ ವಳಗಿರೊ ಜಾತಿವಾದಿಗಳು ಸಿದ್ದರಾಮಯ್ಯನ್ನ ಜಾತಿವಾದಿ ಅಂದುಬುಡೋರು. ಅದ್ಕೆ ಅವುನು ಸುಮ್ಮನಿದ್ದ. ಇವುನು ಕಾದು ಬೇಜಾರಾದ."



"ಅವುನಿಗೂ ವಿಶ್ವನಾಥನಿಗೂ ಬಿದ್ದುಬುಟ್ಟದಲ್ಲ ಹೇಳು" ಎಂದ ಉಗ್ರಿ.

"ಊ ಕಣೊ ಉಗ್ರಿ. ಆ ಎಡೂರಪ್ಪ, ಈಶ್ವರಪ್ಪನ ಯರಡ ದೇಹ ಒಂದಾಯ್ತಾಯಿರುವಾಗ ಈ ಯರಡು ದೇಹ ದೂರ ಆಯ್ತಾ ಅವೆ. ಇದಕೇನೇಳನಾ?"

"ಅವುರ್ಯಾಕ್ ದೂರ ಆಯ್ತಾಯಿದ್ದಾರ್ಲ" ಎಂದಳು ಜುಮ್ಮಿ.

"ಕಾಲನೆ ಅಂಗೆ ದೂರ ಮಾಡ್ತಾ ಅದೆ ಕಣಕ್ಕ. ಪಾಪ ಆ ವಿಶ್ವನಾಥ ಸಿದ್ದರಾಮಯ್ಯ ಏನೊ ಮಾಡ್ತನೆ ಅಂತ ಕಾದ. ಕಾದು, ಕಾದು ಬೇಜಾರಾಗಿ ಕಡಿಗತ್ತಗೆ ಜೆಡಿಎಸ್ ಕಡಿಕೆ ವಂಟವುನೆ."

"ಅದೇನು ಕಾದ ಸರಿಯಾಗೇಳ್ಲ...."

"ನೋಡಕ್ಕ, ಅವುನೆದ್ರಿಗೆ ಮೈಸೂರಿನಲ್ಲಿ ಬಿಜೆಪಿಯಿಂದ ಪ್ರತಾಪ ಸಿಮ್ಮ ಅಂತ ಒಂದು ಕ್ಯಾಂಡೇಟ್ ನಿಂತಿತ್ತು, ದ್ಯಾವೇಗೌಡ್ರು ಜೆಡಿಎಸ್‌ನಿಂದ ಒಂದು ಡೆಮ್ಮಿ ಕ್ಯಾಂಡೇಟಾಕಿ ವಿಶ್ವನಾಥ ಸೋಲಂಗೆ ಮಾಡಿದ್ರು. ಆಗ ಈ ವಿಶ್ವನಾಥ ತನ್ನ ಸೋಲಿಗೆ ಜೆಡಿಎಸ್ ಕಾರಣ ಅಂದ. ಇವತ್ತು ಅದೇ ಜೆಡಿಎಸ್ಸಿಗೆ ಹೋಯ್ತಾ ಅವುನೆ."

"ಅಲ್ಲಾ ಕಣೊ ವಾಟಿಸ್ಸೆ, ವಿಶ್ವನಾಥ ಕಾಂಗ್ರೆಸ್ನಲಿದ್ರೂ ದಳದಲ್ಲಿ ಸಿದ್ದರಾಮಯ್ಯನ್ನ ದಡಾಬಂದು ಮಾಡಿದ್ಕೆ ಬೇಜಾರಾಗಿ ಮಾತಾಡೋನು. ಅಂಥೋನಿಗೆ ಇವುನೇನು ಮಾಡಿದ?" ಎಂದ ಉಗ್ರಿ.

"ಅದೇನೊ ನಿಜ. ಸಿದ್ದರಾಮಯ್ಯನಿಗೆ ಏನಾರ ಆದೇಟಿಗೆ ವಿಶ್ವನಾಥ ಪ್ರೆಸ್‌ಮೀಟ್ ಮಾಡೋನು. ಅದೂ ಅಲ್ದೆ ಅವುನ್ನ ಕಾಂಗ್ರೆಸ್ಸಿಗೆ ಕರಕಂಡೋಗಿ ಸೇರಸದ್ರಲ್ಲಿ ವಿಶ್ವನಾಥನ ಕ್ಯಲಸ ಮರಿಯಂಗಿಲ್ಲ" ಎಂದ ವಾಟಿಸ್ಸೆ. ಆಗ ಉಗ್ರಿ.

"ನೋಡಿದ್ಯಂಗದೆ. ಅವತ್ತು ದ್ಯಾವೇಗೌಡ್ರು ಸಿದ್ದರಾಮಯ್ಯನ್ನ ಬೀದಿಗೆ ಬಿಸಾಕಿದಾಗ ಅವುನ್ನ ಕಾಂಗ್ರೆಸ್ಸಿಗೆ ಕರಕಂಡೋಗಕ್ಕೆ ಸಹಾಯ ಮಾಡಿದೋನು ವಿಶ್ವನಾಥ. ಇವತ್ತು ಅದೇ ವಿಶ್ವನಾಥ ಕಾಂಗ್ರೆಸ್ ಬುಟ್ಟು ಜೆಡಿಎಸ್‌ಗೋಗಿ ದ್ಯಾವೇಗೌಡ್ರು ಜ್ವತೆ ನಿಂ[illegible] ಸಿದ್ದರಾಮಯ್ಯನ್ನ ಬೈಯಂಗಾಗ್ಯದೆ" ಎಂದ.

"ಇದಕೇನೇಳ್ತಿ ದ್ವಡಪ್ಪ?" ಎಂದ ವಾಟಿಸ್ಸೆ.

"ಏನೇಳದ್ನ, ಕಾಲಾದಿಂದ ಇದನ್ನಲ್ಲ ನೋಡಿ[illegible] ಬಂದಿದ್ದಿವಿ. ಆಗ ಯಗಡೆ ದ್ಯಾವೇಗೌಡ ಜಗಳ[illegible] ಒಂದಾಗರು. ತಿರಗ ಜಗಳಾಡೋರು, ಒಂದಾಗ[illegible] ಹೀಗೆ ರಾಜಕಾರಣದಲ್ಲಿ ಇವ್ನಲ್ಲ ಮಾಮೂಲು. ಅಂದ್ರೆ ಊರು ಜನಗಳು ಹಿಂಗ್ಯಲ್ಲ ಜಗಳಾ[illegible] ಯಾವತ್ತೂ ಒಂದಾಗದಿಲ್ಲ, ಅಂಗೇ ಸತ್ತೋಯ್ತವ[illegible]

"ಎಜ್ಜಾಟ್ಲಿ ಕರಟ್ ದೊಡಪ್ಪ, ನಾನು ಅ[illegible] ಮಾಡಿದಂಗೆ ನಮ್ಮೂರ ಜನ ಬುಟ್ರೆ ಈ ಸಾಯಿ[illegible] ಯಾವತ್ತೂ ಒಂದಾಗದಿಲವಂತೆ. ಹಳೆ ಜ[illegible] ಮುಂದುವರಿಸಿಗಂಡು ಸತ್ತೋದವಂತೆ. ಅವುರಿಗೊ[illegible] ಈ ರಾಜಕಾರಣಿಗಳೇ ಪರವಾಗಿಲ್ಲ, ವಿಶ್ವನಾಥ ಯ[illegible] ಕುಮಾರಣ್ಣ ದ್ಯಾವೇಗೌಡ್ರ ಬೈಕಂಡು ಬಂದ್ರೂ ಬಂದ[illegible]

"ಅಂಗರಲ್ಲೂ ಇರಕುಲವೇನ್ಲ?"

"ನೋಡಕ್ಕ, ಈ ವಿಶ್ವನಾಥ ಹೆ[illegible] ಕುಮಾರಸ್ವಾಮಿಯ ಹೈ ದೀಲ್ ಕುಮಾರಸ್ವಾಮಿ ಅ[illegible] ಅದವುರು ಮರತಿದ್ದರೇ? ಇದೇ ದ್ಯಾವೇಗೌಡ್ರ ಧ[illegible] ಅಂದಿದ್ದ. ಅದು ನೆನಪಲ್ಲಿಲ್ಲವೆ? ಏನಪ್ಪಾ ದ್ಯಾವೇಗೌಡ್ರಿಗೆ ಮುಂದಿನ ಚುನಾವಣೆಗೆ ಬಲಿ [illegible] ಒಳ್ಳೆ ಟಗರ್‌ಗಳು ಬೇಕಾಗ್ಯದೆ. ಅಂಗಾಗಿ ಈ ಬಕ್ರ [illegible] ಸಿಕ್ಕದೆ. ಅಲ್ಲಿಗೋಗಿ ಗೆಲ್ಲಬವುದು, ಸೋಲಬವುದು[illegible] ಒಂದು ವಿಶೇಷ ಏನಪ್ಪಾ ಅಂದ್ರೆ ವಿಶ್ವನಾಥನ [illegible] ಕುರುಬ್ರು ಕಾಂಗ್ರೆಸ್ ಬುಟ್ಟು ಜೆಡಿಎಸ್ ಕಡೆ ವ[illegible] ಚೆಲುವರಾಯಸ್ವಾಮಿ ಜೊತೆ ಒಕ್ಕಲಿಗರು ಜೆಡಿಎಸ್ ಕಾಂಗ್ರೆಸ್‌ಗೆ ಹೋಯ್ತಾ ಅವುರೆ."

"ಕುರುಬರ್‍ಯಾಕ್ಲ ಕಾಂಗ್ರೆಸ್ ಬುಡ್ತರೆ?"

"ಅವುರಿಗೆ ಸಿದ್ದರಾಮಯ್ಯ ಏನು ಮಾಡ್ಲಿಲ್ಲವಂತ[illegible] ಕುಮಾರಣ್ಣ ಮುಖ್ಯಮಂತ್ರಿಯಾಗಿದ್ದಾಗ ಏಳೆಂಟು[illegible] ಸ್ವಜಾತಿಯವರ ಮಂತ್ರಿ ಮಾಡಿಕಂಡಿದ್ದ. ಅದೇ ಎಡ[illegible] ಒಂದು ಡಜನ್ ಲಿಂಗಾಯತ್ರ ಮಂತ್ರಿ ಮಾಡಿದ[illegible] ಸಿದ್ದರಾಮಯ್ಯ ಎಲ್ಲಿ ನನ್ನ ಜಾತಿವಾದಿ ಅಂದುಬು[illegible] ಅಂತ ಇವನು ವಬ್ಬ ಕುರುಬನ್ನ ಮಂತ್ರಿ ಮಾಡಿ[illegible] ಇದ್ದ ವಬ್ಬ ಮೇಟ. ಹಗಲೊತ್ತೇ ಹಳ್ಳದ ಸಾಲಲ್ಲಿ ಅ[illegible] ಮಾಡಿ ಸಿಗಾಯ್ಕೊಂಡ ಅಂತ ಮನಿಗೋದ. [illegible] ಮನಿಗೋದ ಮ್ಯಾಲೆ ಆ ಖಾತೆಯ ಹೆಚ್ಚಿ ರೇವಣ್ಣ[illegible] ಕೊಡಬೇಕಿತ್ತು, ಅದ್ನೂ ಮಾಡ್ಲಿಲ್ಲ, ಇವುನಿಂದ [illegible] ಅಂತ, ಯಲ್ಲ ಜೆಡಿಎಸ್ ಕಡಿಕೆ ವಂಟವುರಂತೆ."

"ಯತ್ತ ಮುಂದಾಗಿ ನೋಡಿದ್ರೂ ಸಿದರಾಮ[illegible] ಪರವಾಗಿಲ್ಲ ಕಂಡ್ರ" ಎಂದ ಕಾಳಮಾವ.

"ಯಂಗೆ ದೊಡಪ್ಪ?"

"ಅಧಿಕಾರದಲಿ ನಮ್ಮೋರು ತಮ್ಮೋರು ನೋಡಬಾರ್ದು."

"ವಂದ್ರುಪುಲ್ಲು!!"



ತಲಮಲೈನ ಚಿರತೆ

ಇಂಗ್ಲಿಷ್ ಮೂಲ: ಆರ್ಥರ್ ಪೋವೆಲ್


ಕನ್ನಡಕ್ಕೆ: ವಸಂತ್ ನಡಹಳ್ಳಿ

ಅದು ಕ್ರಿಸ್ಮಸ್ ರಜದ ಸಮಯ. ಹುಲಿಯನ್ನು ಬೇಟೆಯಾಡುವುದರ ಜೊತೆಗೆ ನಾಗರಿಕತೆಯಿಂದ ದೂರ ಹೋಗಿ ವಿಶ್ರಾಂತಿ ಪಡೆಯುವ ಉದ್ದೇಶದಿಂದ ನಾನು ದಕ್ಷಿಣದ ಕಡೆ ಹೊರಟಿದ್ದೆ ಆಗಿನ ದಿನಗಳಲ್ಲಿ ಮೈಸೂರಿನಿಂದ ನಂಜನಗೂಡು ಮಾರ್ಗವಾಗಿ ಸತ್ಯಮಂಗಲಮ್, ಕೊಯಮತ್ತೂರು ಕಡೆ ಹೋಗುವ ರಸ್ತೆ ಸರಿಯಾಗಿರಲಿಲ್ಲ, ಬೆಂಗಳೂರಿನಿಂದ ಹೊರಟು ದಿಂಬಂ ತಲುಪುವಷ್ಟರಲ್ಲಿ ಸಂಜೆಯಾಗಿತ್ತು, ಅಲ್ಲಿಂದ 13 ಮೈಲು ಕಾಡಿನ ದಾರಿಯಲ್ಲಿ ಹೋದರೆ ತಲಮಲೈ ಸಿಗುತ್ತಿತ್ತು, ನನ್ನ ಕಾರು ಜನ ಮತ್ತು ಸಾಮಾನು ಸರಂಜಾಮುಗಳಿಂದ ತುಂಬಿಹೋಗಿತ್ತು, ಮಳೆಯಿಂದ ಹಾಳಾದ ರಸ್ತೆಯಲ್ಲಿ ಇವುಗಳನ್ನೆಲ್ಲಾ ಸಾಗಿಸಲು ಕಷ್ಟವಾಗಬಹುದಾದ್ದರಿಂದ ಎತ್ತಿನಗಾಡಿಯ ವ್ಯವಸ್ಥೆ ಮಾಡಿಕೊಂಡೆ.

ಮರುದಿನ ಬೆಳಗ್ಗೆ ಸಾಮಾನುಗಳನ್ನು ಮತ್ತು ಕೆಲವು ಜನಗಳನ್ನು ಗಾಡಿಗೆ ವರ್ಗಾಯಿಸಿ ಅಡಿಗೆಯವನೊಂದಿಗೆ ನಾನು ಕಾರಿನಲ್ಲಿ ಹೊರಟೆ. ಭಾರೀ ಮಳೆಯಿಂದ ಕೆಸರಾದ ರಸ್ತೆಯಲ್ಲಿ ಹೋಗುವಾಗ ಕೆಳಗಿನ ಕಣಿವೆಯ ಅದ್ಭುತ ದೃಶ್ಯಗಳನ್ನು ನೋಡಬಹುದಾಗಿದ್ದರೂ ಪ್ರಯಾಣ ಅಪಾಯಕಾರಿಯಾಗಿತ್ತು, ಬೆಟ್ಟಗುಡ್ಡಗಳನ್ನು ಹಾದು ಒಂದು ಸಣ್ಣ ಹೊಳೆಯ ಹತ್ತಿರ ಬಂದಾಗ ಕಾಡಾನೆಗಳ ಗುಂಪೊಂದು ಎದುರಾಯಿತು. ಅದೇ ಸಮಯಕ್ಕೆ ಹೊಳೆಯ ಹತ್ತಿರದ ಕೆಸರಿನಲ್ಲಿ ಕಾರಿನ ಗಾಲಿಗಳು ಹೂತುಹೋಯಿತು. ಇಂತಹ ಪರಿಸ್ಥಿತಿಯನ್ನು ಜೀವಮಾನದಲ್ಲಿ ಎದುರಿಸದಿದ್ದ ಪಂಜಾಬಿ ಚಾಲಕ ಭಯದಿಂದ ನಡುಗುತ್ತಿದ್ದ. ಸೌದೆಗಾಗಿ ಕಾಡಿಗೆ ಬಂದಿದ್ದ ಕೆಲವು ಜನರ ಸಹಾಯದಿಂದ ನಾವು ಕಾರಿನ ಗಾಲಿಯನ್ನು ಕೆಸರಿನಿಂದ ತೆಗೆದು ಮುಂದುವರೆದೆವು. ದಟ್ಟ ಕಾಡಿನ ಅದ್ಭುತ ದೃಶ್ಯಗಳನ್ನು ಸವಿಯುತ್ತಾ ಘಾಟಿಯ ರಸ್ತೆಗಳಲ್ಲಿ ಹಾದು ನೀಲಗಿರಿ ಬೆಟ್ಟಗಳ ಬುಡದಲ್ಲಿದ್ದ ತಲಮಲೈ ಎಂಬ ಹಳ್ಳಿಗೆ ಬಂದೆವು.

ಹಳ್ಳಿಯಲ್ಲಿರುವ ಶಿಕಾರಿಗಳ ಬಗೆಗೆ ವಿಚಾರಿಸಿದಾಗ ಕೃಷ್ಣ ಎನ್ನುವವನ ಹೆಸರನ್ನು ಸೂಚಿಸಲಾಯಿತು. ಹಿಂದೂಗಳಂತೆಯೇ ಬಟ್ಟೆಹಾಕಿಕೊಂಡು ಹಿಂದೂ ದೇವರ ಹೆಸರನ್ನಿಟ್ಟುಕೊಂಡಿದ್ದ ಅವನೊಬ್ಬ ಮುಸ್ಲಿಂ ಆಗಿದ್ದು ಸ್ವಚ್ಛ ಉರ್ದು ಮಾತನಾಡುತ್ತಿದ್ದ. ಇಲ್ಲಿ ಪರಿಚಯವಾದ ಕೃಷ್ಣನನ್ನು ನಾನು ಜೀವಮಾನವಿಡೀ ಮರೆಯಲು ಸಾಧ್ಯವಾಗಲಿಲ್ಲ.

ಕೃಷ್ಣನ ಜೊತೆಗೂಡಿಕೊಂಡು ಹತ್ತಿರದ ಅರಣ್ಯವಸತಿ ಗೃಹಕ್ಕೆ ಹೋದೆ. ಅರ್ಧಗಂಟೆಯಲ್ಲಿ ಎಲ್ಲದರ ವ್ಯವಸ್ಥೆಯಾಗಿ ಅಡಿಗೆಯವ ಕೆಲಸ ಪ್ರಾರಂಭಿಸಿದ. ಕೃಷ್ಣ ಬಲಿಪಶುಗಳನ್ನು ಒಟ್ಟುಮಾಡಲು ಊರಿನೊಳಗೆ ಹೋದ. ನಾನು ಸುತ್ತಲಿನ ಕಾಡುಗಳ ಸೌಂದರ್ಯವನ್ನು ಸವಿದುಕೊಂಡು ಹಿಂತಿರುಗುವಷ್ಟರಲ್ಲಿ ಕೃಷ್ಣ ಸಾಕುಪ್ರಾಣಿಗಳನ್ನು ಅದರ ಮಾಲೀಕರೊಂದಿಗೆ ಕರೆತಂದಿದ್ದ. ಅಲ್ಲಿ ನೆರೆದಿದ್ದ [illegible]ಗಳ ವೈವಿಧ್ಯವನ್ನು ನೋಡಿ ನನಗೆ ತುಂಬಾ ತಮಾಷೆಯೆನಿಸಿತು. ನನ್ನ ನಗುವಿನಲ್ಲಿ ಒಳ್ಳೆಯ ಹಾಸ್ಯಪ್ರಜ್ಞೆ ಹೊಂದಿದ್ದ ಊರಿನವರೂ ಸೇರಿಕೊಂಡರು. ನಾನು ಭಾರತದ ಬೇರೆ ಭಾಗಗಳಲ್ಲಿ ನೋಡಿದ್ದಕ್ಕಿಂತ ಇಲ್ಲಿನ ಜನರು ಹೆಚ್ಚು ಪ್ರಾಮಾಣಿಕರು ಮತ್ತು ಸರಳ ನಡತೆಯವರು ಅನ್ನಿಸಿತು. ಅವರು ಕೇಳಿದ ಬೆಲೆ ಕೂಡ ಸೂಕ್ತವಾಗಿತ್ತು ಮತ್ತು ಪ್ರಾಣಿಗಳನ್ನು ಜೀವಂತ ಹಿಂತಿರುಗಿಸಿದರೆ ಅರ್ಧಬೆಲೆಯನ್ನು ಮಾತ್ರ ತೆಗೆದುಕೊಳ್ಳಲು




ಒಪ್ಪಿದರು. ಬೇರೆಯ ಕಡೆಗಳಲ್ಲಿ ಮಾಲೀಕರು ಒಪ್ಪುತ್ತಿರಲಿಲ್ಲ. ನನಗೆ ಬೇಕಾದ ಬಲಿಪಶು[illegible] ಆಯ್ದುಕೊಂಡೆ.

ಸಂಜೆ ನಾನು ಕೃಷ್ಣನ ಜೊತೆ ದಕ್ಷಿಣದ ಅ[illegible] ದಟ್ಟವಲ್ಲದ ಕಾಡುಗಳಿಗೆ ಹೋದೆ. ಒಂದುಗ[illegible] ತಿರುಗಾಟದಲ್ಲಿ ಯಾವ ವನ್ಯಮೃಗವನ್ನೂ ನೋಡ[illegible] ಹಿಂತಿರುಗುತ್ತಿದ್ದಾಗ ದನಗಾಹಿಯೊಬ್ಬ ಹುಲಿ ತನ್ನ [illegible] ಎತ್ತನ್ನು ಕೊಂದುಹಾಕಿದೆ ಎಂದು ಓಡುತ್ತಾ ಬಂದು [illegible] ತಕ್ಷಣ ನಾವು ಅಲ್ಲಿಗೆ ಹೋದೆವು. ಎತ್ತಿನ ಗಂ[illegible] ಹರಿಯಲಾಗಿತ್ತಲ್ಲದೆ ಮೂಗಿನ ಹೊಳ್ಳೆಗಳಿಂದಲ[illegible] ಸುರಿಯುತ್ತಿತ್ತು. ಉಸಿರನ್ನು ಎಳೆಯಲು ಕಷ್ಟಪ[illegible] ಅದನ್ನು ಓಡಾಡಿಸುವ ಪ್ರಯತ್ನದಲ್ಲಿ ನಾವು ಸೋ[illegible] ಅಂತಹ ಸ್ಥಿತಿಯಲ್ಲಿ ಗುಂಡುಹೊಡೆದು ಕೊಲ್ಲುವುದು [illegible] ದಯೆತೋರುವ ಕೆಲಸವಾಗುತ್ತಿತ್ತೇನೋ. ಆದರೆ [illegible] ಮಾಡುವುದು ಹಿಂದೂಗಳ ಧಾರ್ಮಿಕ ಭಾವ[illegible] ಧಕ್ಕೆಮಾಡಬಹುದಾದ್ದರಿಂದ ನಾನು ಸುಮ್ಮ[illegible] ಕತ್ತಲಾಗುವವರೆಗೆ ಮರೆಯಲ್ಲಿ ಕಾದರೂ ಹುಲಿ ಬ[illegible]

ಕುತ್ತಿಗೆಯ ಮೇಲಿನ ಉಗುರಿನ ಗುರುತನ್ನು ನೋ[illegible] ಇದು ಚಿರತೆಯ ಕೆಲಸ ಎನ್ನುವುದು ಸ್ಪಷ್ಟವಾಗ[illegible] ಚಿರತೆಗಳು ಮಾತ್ರ ಬಲಿಯ ಮುಖದ ಮೇಲೆ ಆ[illegible] ಮಾಡಿ ಒತ್ತಿಹಿಡಿಯುತ್ತವೆ. ಈ ಎತ್ತು [illegible] ಪ್ರಾಣಿಯಾದ್ದರಿಂದ ಚಿರತೆಯನ್ನು ಹೋರಾಡಿ ಓ[illegible] ಆದರೆ ಪರಿಣಾಮ ಮಾತ್ರ ಭೀಕರವಾಗಿತ್ತು.

ಮರುದಿನ ಬೆಳಗ್ಗೆ ಮತ್ತೆ ಅಲ್ಲಿಗೆ ಹೋದಾಗ [illegible] ಶವ ಮಾಯವಾಗಿತ್ತು. [illegible]ದನ್ನು ಎಳೆದುಕೊ[illegible] ಕಣಿವೆಯೊಂದರ ಕೆಳಗೆ ಎಸೆಯಲಾಗಿತ್ತು. ಅಲ್ಲಿ [illegible] ಪೊದೆಗಳ ನಡುವೆ ಸಿಕ್ಕಿಕೊಂಡಿತ್ತು. ಬಹಳ ಕಷ[illegible] ನಾವು ಇಳಿದು ಅಲ್ಲಿಗೆ ಹೋದಾಗ ಶವದ ಹಿಂಭಾ[illegible] ತಿಂದಿರುವುದನ್ನು ಗಮನಿಸಿದೆವು. ಅಲ್ಲಿನ ಹೆಜ್ಜೆಗುರುತು[illegible]



ಭಾಗ- ನಾಲ್ಕು

ರಾಮಮಂದಿರ ಏಕೆ ಬೇಡ?

■ ಪ್ರೊ। ಕೆ. ಎಸ್. ಭಗವಾನ್

ರಾಮ ವೈದಿಕರ ಹಿತಾಸಕ್ತಿ ಕಾಯುವ ಕೀಲುಗೊಂಬೆ



...ಮಾನತೆಯನ್ನು ಒಪ್ಪದ ವೈದಿಕ ಮನಸ್ಸು ...ರೂ ಮಾಡಿ ತಾವು ಇತರೇ ಹಿಂದೂಗಳಿಗಿಂತ ... ಭಾರತೀಯರಿಗಿಂತ ಭಿನ್ನ ಮತ್ತು ಮೇಲು ಎಂದು ...ಕೊಳ್ಳಬೇಕು, ಹಾಗೆಯೇ ನಡೆದುಕೊಳ್ಳಬೇಕು ಎಂಬ ... ಧ್ರುವೆಯಿಂದ ರಾಮಮಂದಿರ ...ಕೆಂದುಕೊಂಡಿದ್ದಾರೆ. ತನ್ಮೂಲಕ ತಮ್ಮ ...ಯನ್ನು ಉಳಿಸಿಕೊಳ್ಳಬೇಕೆಂಬ ಉಗ್ರ ಬಯಕೆ ... ತಾವು ಹೇಳಿದಂತೆ ರಾಮ ಚಾತುರ್ವರ್ಣವನ್ನು ...ರಿಂದ ಅವನ ಮೂಲಕ ತಮ್ಮ ಚಾತುರ್ವರ್ಣ ...ದ ಬ್ರಾಹ್ಮಣಿಕೆಯನ್ನು ಉಳಿಸಿಕೊಳ್ಳಬಹುದೆಂಬ ...ಸಂತೋಷದಿಂದ ಇದ್ದಾರೆ. ಸನಾತನಿಗಳದ್ದು ವಿಕೃತ ...

...ಗಾಗಲಿಕ್ಕೆ ಅವರು ಮಾಡುವ ಉಪನಯನ ಇತ್ಯಾದಿ ... ಕಾರಣ ಎನ್ನಬಹುದು. ಎಂಟು ಹತ್ತು ವರ್ಷದ ...ನಿಗೆ ಜನಿವಾರ ಧಾರಣೆ ಮಾಡುವ ಶಾಸ್ತ್ರ ಇದೆ. ...ದರ್ಭದಲ್ಲಿ:

...ನಾ ಜಾಯತೇ ಶೂದ್ರಃ ಕರ್ಮಣಾ ಜಾಯತೇ

...ದ ಪಾಠೇಣ ವಿಪ್ರಾಣಾಂ ಬ್ರಹ್ಮಜ್ಞಾನಂ ತು ಬ್ರಾಹ್ಮಣಃ.

...ಟ್ಟನಿಂದ ಎಲ್ಲರೂ ಶೂದ್ರರು. ಜನಿವಾರ ...ಯಿಂದ ದ್ವಿಜನಾಗುತ್ತಾನೆ. ವೇದ ಪಠಣದಿಂದ ...ಗುತ್ತಾನೆ. ಬ್ರಹ್ಮಜ್ಞಾನದಿಂದ ಬ್ರಾಹ್ಮಣನಾಗುತ್ತಾನೆ."

... ಶ್ಲೋಕ ಕುರಿತು ಖ್ಯಾತ ವಿಚಾರವಾದಿ ಜ. ಹೊ. ...ಣಸ್ವಾಮಿ ಸೊಗಸಾಗಿ ವಿಶ್ಲೇಷಿಸಿದ್ದಾರೆ. ಈ ಮಂತ್ರದ ...ಡು ಶಬ್ದಗಳ ಬಗ್ಗೆ ಇಲ್ಲಿ ಹೇಳಬೇಕಾಗಿದೆ.

... - ಎಂದರೆ ಎರಡು ಬಾರಿ ಹುಟ್ಟಿದವನು, ... ಜನ್ಮ ತಳೆದವನು. ಹಾವು ಮೊಟ್ಟೆ ಇಡುತ್ತದೆ. ...ಯಿಂದ ಮರಿ ಹೊರಬರುತ್ತದೆ.

...ಪನಯನ - ಬ್ರಾಹ್ಮಣರು ಮಾಡುವ ಶಾಸ್ತ್ರ ಇದರಲ್ಲಿ ... ಬಾಲಕ ವಟುವಿಗೆ ಜನಿವಾರ ತೊಡಿಸುತ್ತಾರೆ. ಅವನಿಗೆ ಗಾಯತ್ರೀ ಮಂತ್ರವನ್ನು ಕಿವಿಯಲ್ಲಿ ಪಿಸುಗುಡುತ್ತಾರೆ. ಈ ಮಂತ್ರದ ಅರ್ಥ, "ಎಲೈ ಸೂರ್ಯನೇ ಜಗದ ಕತ್ತಲೆಯನ್ನು ಹೋಗಲಾಡಿಸುವ ನೀನು ನನ್ನ ಮನದ ಕತ್ತಲೆಯನ್ನು ಹೋಗಲಾಡಿಸು - ಓಂ ತತ್ ಸವಿತುರ್ ವರೇಣ್ಯಂ ಭರ್ಗೋ ದೇವಸ್ಯ ಧೀಮಹಿ" (ಋಗ್ವೇದ, ಗಾಯತ್ರೀ ಮಂತ್ರ 3. 62. 10). ಇದು ಸಾರ್ವತ್ರಿಕವಾದ ಮಂತ್ರ; ಇದನ್ನು ಯಾರು ಬೇಕಾದರೂ ಹೇಳಬಹುದು. ಈ ಮಂತ್ರದ ದ್ರಷ್ಟಾರ ವಿಶ್ವಋಷಿ ವಿಶ್ವಾಮಿತ್ರ; ಈತ ಕ್ಷತ್ರಿಯ. ಇದನ್ನು ರಹಸ್ಯವಾಗಿ ಹೇಳುವ ಅಗತ್ಯ ಏನಿದೆ? ಆದರೆ ಇದಲ್ಲ ಅವರು ಬ್ರಾಹ್ಮಣ ಬಾಲಕನಿಗೆ ಹೇಳಿಕೊಡುವ ವಿದ್ಯೆ. ಅದೇನೆಂದರೆ - "ನೀನು ಹುಟ್ಟಿನಿಂದ ಬ್ರಾಹ್ಮಣ, ನೀನು ಹುಟ್ಟಿನಿಂದಲೇ ಶ್ರೇಷ್ಠ ನೀನು ಎಲ್ಲರಿಗಿಂತ ಮೇಲು." ಇದರಿಂದ ಬೆಳೆಯುವ ಹುಡುಗನ ಮನಸ್ಸು ಸಂಪೂರ್ಣವಾಗಿ ಬದಲಾಗುತ್ತದೆ. ಪ್ರಧಾನಿ ಮತ್ತು ಉಪಪ್ರಧಾನಿ, ಮುಖ್ಯಮಂತ್ರಿ ಹಾಗೂ ಉಪಮಂತ್ರಿ ಎಂದರೆ ಹೇಗೆ ವ್ಯತ್ಯಾಸ ಆಗುತ್ತದೆಯೋ ಹಾಗೆ ನಯನ ಮತ್ತು ಉಪನಯನ ಸಹ ವಿಭಾಗವಾಗಿ ಸತ್ವ ಕಳೆದುಕೊಳ್ಳುತ್ತವೆ. ಅವನ ಸಹಜ ದೃಷ್ಟಿ (ನಯನ) ಈಗ ಸಂಕುಚಿತ (ಉಪನಯನ) ವಾಗುತ್ತದೆ. ಮೇಲುಕೀಳು ದೃಷ್ಟಿಯ ಅಂಟುರೋಗ ಅವನಿಗೆ ಹೊಡೆಯುತ್ತದೆ. ಆದ್ದರಿಂದ ಅವನ ಮುಂದಿನ ಬದುಕು ಬೆಳಕಾಗುವ ಬದಲು ಕತ್ತಲ ಕೋಟೆಯಾಗುವುದು. ಜನಿವಾರ ಮನುಷ್ಯ ಸಹಜ ಸ್ವಾತಂತ್ರ್ಯವನ್ನು ಬಲಿ ತೆಗೆದುಕೊಳ್ಳುವ ನೇಣು ಹಗ್ಗವಾಗುತ್ತದೆ. ಅವನು ಜಾತಿ ಮಡಿ ಮೈಲಿಗೆ ಭಾವನೆಗಳಿಂದ ವ್ಯುತನಾಗುತ್ತಾನೆ. ಏಕೆಂದರೆ ಜಾತಿಭಾವನೆಯನ್ನೇ ತುಂಬಿಕೊಂಡು ಬೆಳೆಯುವ ಬಾಲಕ ಮುಂದೆ ಸಮಾಜದ ಒಡಕಿಗೆ ಕಾರಣನಾಗುತ್ತಾನೆ. ಇತರರು ತನಗಿಂತ ಉತ್ತಮ ಇದ್ದರೆ ಅದನ್ನು ಒಪ್ಪಿಕೊಳ್ಳಲು ಅವನು ಸರ್ವಥಾ ಸಿದ್ಧನಿರುವುದಿಲ್ಲ, ಕಾರಣ, ಈ ಮಂತ್ರ ಅವನ ಶ್ರೇಷ್ಠತೆಯ ಬಗ್ಗೆ ಯಾವಾಗಲೂ ವ್ಯಸನಿ ಆಗಿರುವಂತೆ ಮಾಡುತ್ತಿರುತ್ತದೆ.

ಆದರೆ ಬ್ರಾಹ್ಮಣ ಹೆಣ್ಣು ಮಗಳು ಸಹ ದ್ವಿಜಳಾಗದೆ ಶೂದ್ರಳಾಗಿಯೇ ಸಾಯುತ್ತಾಳೆ:

ನಾಸ್ತಿ ಸ್ತ್ರೀಣಾಂ ಕ್ರಿಯಾ ಮಂತ್ರೈಃ ಇತಿ ಧರ್ಮೇ ವ್ಯವಸ್ಥಿತಿಃ

ನಿರಿಂದ್ರಿಯಾ ಹಿ ಅಮಂತ್ರಾಃ ಚ ಸ್ತ್ರೀಯೋನೃತಮಿತಿ ಸ್ಥಿತಿಃ. (ಮನು, 9. 18.)

"ಸ್ತ್ರೀಯರಿಗೆ ಸಂಸ್ಕಾರವು ಮಂತ್ರಹೀನವಾಗಿರಬೇಕೆಂದು ಧರ್ಮ ನಿಯಮ. ಧರ್ಮ ಪ್ರಮಾಣಜ್ಞಾನ ಮತ್ತು ಮಂತ್ರ ಜಪ ಇಲ್ಲದ ಸ್ತ್ರೀಯರಿಗೆ ಪಾಪ ಪರಿಹಾರ ಇಲ್ಲ." ತಮ್ಮನ್ನು ಹಡೆದ ತಾಯಿ, ತಮಗೆ ಸುಖ ಕೊಟ್ಟು ಸಂತಾನ ಬೆಳೆಸುವ ಸತಿ, ತಮ್ಮ ಹೊಟ್ಟೆಯಲ್ಲಿ ಹುಟ್ಟಿದ ಮಗಳು ಸಹ ತಮಗೆ ಸಮ ಎಲ್ಲ ಎನ್ನುವ ಧರ್ಮ ಧರ್ಮವೇ? ಸ್ತ್ರೀಯರನ್ನು 'ಭಗವದ್ಗೀತೆ' ಪಾಪಯೋನಿಜರು (9. 32.) ಎಂದು ಕರೆಯುತ್ತದೆ. ಇಂಥದನ್ನು ಪವಿತ್ರ ಗ್ರಂಥ ಎನ್ನಬೇಕೇ?

ಇಂಥ ಅಪಾಯವನ್ನು ಅರಿತಿದ್ದ ಬಸವಣ್ಣನವರು ಜನಿವಾರ ಕಿತ್ತು ಬಿಸಾಡುತ್ತಾರೆ. ಶ್ರೀ ರಾಮಕೃಷ್ಣ ಪರಮಹಂಸರು ಯಜ್ಞೋಪವೀತವನ್ನು ವಿಸರ್ಜಿಸುವುದನ್ನು ನೆನೆಯಬೇಕು. ಗಾಂಧೀಜಿ ಕೂಡ ಜನಿವಾರ ತನ್ನನ್ನು ಇತರರಿಂದ ದೂರ ಇಡುವುದನ್ನು ಕಂಡು ಗಾಬರಿಗೊಂಡು ಅದನ್ನೇ ಅವರು ದೂರ ಮಾಡುವುದನ್ನು ತಿಳಿಯುವುದು ಸೂಕ್ತ, ಹಾಗಾಗಿ ಇವರೆಲ್ಲ ಎಲ್ಲರನ್ನೂ ತಬ್ಬಿಕೊಳ್ಳುವ ಹೃದಯವಂತರಾದರು. ಬ್ರಾಹ್ಮಣರು ದಯವಿಟ್ಟು ತಪ್ಪು ತಿಳಿದುಕೊಳ್ಳದೆ ಇದನ್ನು ಪರಿಶೀಲಿಸಬೇಕು: ಅವರು ಆಚಾರ್ಯರೆಂದು ತಿಳಿದುಕೊಂಡಿರುವ, ಶೂದ್ರರಿಗೆ ವಿದ್ಯೆಕೊಡಬಾರದು, ಶೂದ್ರರು ವೇದ ಓದಿದರೆ ಕೇಳಿದರೆ ಅವರನ್ನು ಕೊಂದುಹಾಕಬೇಕು ಎಂದು ಬರೆದಿರುವ ಸಂಕುಚಿತ ಮನಸ್ಸಿನವರಾದ ಶಂಕರಾಚಾರ್ಯ, ರಾಮಾನುಜಾಚಾರ್ಯ, ಮಧ್ವಾಚಾರ್ಯ ಮುಂತಾದವರನ್ನು ಕೈಬಿಟ್ಟು, ಸರ್ವಧರ್ಮ ಸಮನ್ವಯಾಚಾರ್ಯ, ಪರಮಜ್ಞಾನಿ ಶ್ರೀರಾಮಕೃಷ್ಣ ಪರಮಹಂಸರನ್ನು ಒಪ್ಪಿಕೊಳ್ಳುವುದರಿಂದ ಅವರು ಸರ್ವರಿಗೂ ಪ್ರಿಯವಾದ ಜನಾಂಗವಾಗುತ್ತಾರೆ ಹಾಗೂ ವರ್ಣ ಸಿದ್ಧಾಂತವನ್ನು ಮಂಡಿಸುವ ಹಳೆಯ ವೇದಗಳನ್ನು ತ್ಯಜಿಸಿ ಹೊಸ ವೇದವಾದ 'ಶ್ರೀರಾಮಕೃಷ್ಣ ವಚನವೇದ'ವನ್ನು ಸ್ವೀಕರಿಸುವುದು ಅವರಿಗೇ ಒಳ್ಳೆಯದು. ಏಕೆಂದರೆ ಅವರ ಆಚಾರ್ಯರಲ್ಲಿ ಯಾರೂ ಆತ್ಮ ಸಾಕ್ಷಾತ್ಕಾರ, ದೈವಸಾಕ್ಷಾತ್ಕಾರ ಪಡೆದವರಲ್ಲ, ಪರಮಹಂಸರ ಹಾಗೆ ದೇವರಿಗಾಗಿ ಅತ್ತವರಲ್ಲ, ಇವರು ಒಣಪಂಡಿತರು. ಭೇದ ಭಾವ ಮಾಡುವವರೆಲ್ಲ ಅಜ್ಞಾನಿಗಳು ಮತ್ತು ಮಾನವ ದ್ವೇಷಿಗಳು.

ಸರ್ವರೂ ಸಮಾನರು, ಸಹೋದರರು, ಸ್ವತಂತ್ರರು ಎಂದು ಸಂವಿಧಾನದ ಪೀಠಿಕೆಯಲ್ಲಿ ಹೇಳಿರುವುದನ್ನು ಸನಾತನಿಗಳು ಸಹಿಸಲಾರದೆ ಕ್ರೋಧೋನ್ಮತ್ತರಾಗಿದ್ದಾರೆ. ಆದರೆ ಅವರು ಇದಾವುದನ್ನೂ ತೋರಗೊಡದೆ ರಾಮ ದೇವರು, ಶ್ರೀರಾಮ ಮಂದಿರ ಕಟ್ಟಬೇಕು ಎಂದು ಪ್ರಚಾರ ಮಾಡುತ್ತಿದ್ದಾರೆ. ರಾಮನ ಮೂಲಕ ಚಾತುರ್ವರ್ಣದ ಮೇಲ್ಮೈಯನ್ನು ಕಾಪಾಡಿಕೊಳ್ಳಬೇಕೆಂಬ ಹತಾಶ ಹಂಬಲ ಉಳ್ಳವರಾಗಿದ್ದಾರೆ. ವರ್ಣವಾದಿಗಳ ಕುಟಿಲ ನೀತಿಯನ್ನು ಅರ್ಥ ಮಾಡಿಕೊಳ್ಳದ ಮುಗ್ಧ ಜನಸಾಮಾನ್ಯರು, ಅರಿವಿಲ್ಲದ ರಾಜಕಾರಣಿಗಳು ಹಾಗೂ ರಾಜಕೀಯ ಕಾರ್ಯಕರ್ತರು ರಾಮನನ್ನು ದೇವರೆಂದೇ ನಂಬಿಬಿಟ್ಟಿರುವುದುಂಟು. ಇವರ್‍ಯಾರೂ ರಾಮಾಯಣ ಕತೆಯನ್ನು, ವಾಲ್ಮೀಕಿ ಬರೆದಿರುವ ಮೂಲಕತೆಯನ್ನು, ವೈಜ್ಞಾನಿಕವಾಗಿ ಮಾನವೀಯವಾಗಿ ಸಮಾನತಾ ದೃಷ್ಟಿಯಿಂದ ನೋಡಲು ಪ್ರಯತ್ನಿಸಿಯೇ ಇಲ್ಲ, ಇನ್ನು ವಿಮರ್ಶಾತ್ಮಕವಾಗಿ ವಿಶ್ಲೇಷಿಸುವುದಾದರೂ ಎಲ್ಲಿಂದ ಸಾಧ್ಯ? ಭಕ್ತಿಯಿಂದ ಭಯದಿಂದ ಆರಾಧನೆಯಿಂದ ರಾಮನನ್ನು ನೋಡಿರುವುದರಿಂದ ರಾಮಾಯಣದ ನ್ಯೂನತೆಗಳು ಕಾಣದೆ ಹೋಗಿವೆ.

ವೈದಿಕರು ಎಂಥ ಕಿಲಾಡಿಗಳೆಂದರೆ ಅವರು ಮಾಡುವ ವಂಚನೆ ಎಂಥವರಿಗೂ ತಿಳಿಯಲಾರದು. ವಿಪ್ರರು ತಮ್ಮ ಎಲ್ಲಾ ಪಟ್ಟಭದ್ರ ಹಿತಾಸಕ್ತಿಗಳನ್ನು ರಾಮನ ಮನಸ್ಸಿನ ಒಳಕ್ಕೆ ಗಿಡಿದುಬಿಟ್ಟಿದ್ದಾರೆ. ರಾಮ ವೈದಿಕರ ಹಿತಾಸಕ್ತಿ ಕಾಯುವ ಕೀಲುಗೊಂಬೆ. ಆದ್ದರಿಂದ ಅವನು ಮಾಡುವುದೆಲ್ಲ ಧರ್ಮ ಸಮ್ಮತವಾದದ್ದು, ನೈತಿಕವಾದದ್ದು ಎಂಬ ಭ್ರಮೆ ಸುಲಭವಾಗಿ ಸಾರಾಸಗಟಾಗಿ ಹಿಂದೂ ಮಂದಿಯ ತಲೆಗೆ ಹತ್ತಿಬಿಟ್ಟಿದೆ.

(ಮುಂದುವರೆಯುವುದು)

...ರೆ ಅದು ಚಿರತೆ ಎನ್ನುವುದು ಖಚಿತವಾಗಿತ್ತು. ...ಲ್ಲಿ ಮಚಾನನ್ನು ನಿರ್ಮಿಸುವ ಬಗೆಗೆ ...ತ್ತಿರುವಾಗ ಕೃಷ್ಣ ಆ ಸ್ಥಳ ನನಗೆ ಬೇಟೆಯಾಡಲು ...ತಿ ಸೀಡಿದ ಪ್ರದೇಶದಿಂದ ಹೊರಗಿದೆ ಎಂದು ... ಕೂಡಲೆ ಬೇಟೆಯ ಎಲ್ಲಾ ಯೋಜನೆಗಳನ್ನು ... ಹಿಂತಿರುಗಿದೆವು.

...ರುದಿನ ಬೆಳಗ್ಗೆ ನಾಲ್ಕು ಮೈಲು ದೂರದ ...ದರಲ್ಲಿ ಚಿರತೆ ಮತ್ತೊಂದು ಎತ್ತನ್ನು ಕೊಂದಿರುವ ...ರ ಬಂದಿತು. ಕೃಷ್ಣ ಬಲಿಪಶುಗಳ ಮೇಲ್ವಿಚಾರಣೆಗೆ ...ದ್ದರಿಂದ ನಾನು ಬೇರೆ ಕೆಲವು ಜನರನ್ನು ...ಂಡು ಹೊರಟೆ. ಆದರೆ ನನಗೆ ಮತ್ತು ಪಂಜಾಬಿ ...ಜನರಿಗೆ ಅಲ್ಲಿನ ಭಾಷೆ ಬರದೆ ಪರದಾಟವಾಯಿತು. ...ಕೇವಲ ಸನ್ನೆಯ ಮೂಲಕ ನನ್ನ ಅಗತ್ಯಗಳನ್ನು ...ತ್ತಿನ ಶವದ ಹತ್ತಿರ ಮಚಾನನ್ನು ತಯಾರು ...ದೆ. ನಾನು ಅದರಲ್ಲಿ ಕುಳಿತು ಎಲ್ಲರಿಗೂ ...ಗಲು ತಿಳಿಸಿದೆ.

ಮಧ್ಯಾಹ್ನದ ನಾಲ್ಕು ಗಂಟೆಯಾಗಿತ್ತು, ಚಿರತೆ ...ಭೋಜನವನ್ನು ಮಾಡಿ ಹೋಗಿದ್ದರಿಂದ ಶವದ ...ಕ್ಷಣ ಹಿಂತಿರುಗುವ ಸಾಧ್ಯತೆಗಳಿರಲಿಲ್ಲ. ...ಳಿಯೊಂದರಿಂದ ಬಂದ ಕೂಗಿನ ಅರ್ಥವೂ ...ಯಲಿಲ್ಲ, ಆಕಾಶವನ್ನು ನೋಡುತ್ತಿದ್ದ ನಾನು ...ಗಿ ನೋಡಿದರೆ ಶವದ ಬಳಿ ದೊಡ್ಡ ...ದು ಪ್ರತ್ಯಕ್ಷವಾಗಿತ್ತು! ಶವದಿಂದ ರಕ್ತವನ್ನು ಒಮ್ಮೆ ...ರಿನ ಪ್ರದೇಶದ ಸಮೀಕ್ಷೆ ಮಾಡತೊಡಗಿತು. ...ದು ಯಾವುದೇ ಶಬ್ದ ಅಥವಾ ಚಲನೆಯನ್ನು ...ಸಿರಲಿಲ್ಲ, ಹಿಡಿದಿದ್ದ ಬಂದೂಕನ್ನು ಎತ್ತಿಕೊಳ್ಳಲು ...ಪಕ್ಕೆ ಬಾಯಿಹಾಕುವ ಸಮಯವಾಗ್ಗಿ ...ಡಿದೆ. ಚಿರತೆ ನನ್ನ ಮರದ ಬುಡಕ್ಕೆ ಬಂದು ...ದಾರಿನಲ್ಲಿ ಯಾರೂ ಇಲ್ಲದಿರುವುದನ್ನು



ಖಚಿತಪಡಿಸಿಕೊಂಡಿತು. ನಂತರ ಮತ್ತೆ ಶವದ ಬಳಿ ಬಂದು ನಾಯಿಯಂತೆ ನೇರವಾಗಿ ಕುಳಿತುಕೊಂಡಿತು. ನಾನು ಬಂದೂಕನ್ನು ಎತ್ತಿ ಹೆಗಲಿಗೇರಿಸುವಷ್ಟರಲ್ಲಿ ಅದು ನಿಧಾನವಾಗಿ ಕಾಡಿನ ದಟ್ಟ ಪೊದೆಗಳಲ್ಲಿ ಮರೆಯಾಯಿತು.

ನನ್ನ ಊಹೆಯ ಪ್ರಕಾರ ಚಿರತೆ ಮಚಾನನ್ನು ನಿರ್ಮಿಸುವಾಗಿನ ಸದ್ದನ್ನು ಕೇಳಿತ್ತು, ಹಾಗಾಗಿ ಜನಗಳು ಅಲ್ಲಿಂದ ಹೋದ ನಂತರ ಹಸಿವಾಗಿರದಿದ್ದರೂ ತನ್ನ ಬಲಿಯನ್ನು ಯಾರಾದರೂ ಮುಟ್ಟಿದ್ದಾರೆಯೇ ಎಂದು ಗಮನಿಸಲು ಮಾತ್ರ ಅಲ್ಲಿಗೆ ಬಂದಿತ್ತು, ಇಂತಹ ಅವಕಾಶವನ್ನು ಕಳೆದುಕೊಂಡಿದ್ದಕ್ಕಾಗಿ ನನ್ನನ್ನೇ ಶಪಿಸಿಕೊಂಡೆ.

ಅದೊಂದು ದೈತ್ಯ ಗಾತ್ರದ ಚಿರತೆಯಾಗಿದ್ದು ಪ್ರಖರ ಸೂರ್ಯನ ಬೆಳಕಿನಲ್ಲಿ ಅಷ್ಟು ಹತ್ತಿರದಿಂದ ನೋಡುವುದು ಕಣ್ಣಿಗೆ ಹಬ್ಬವಾಗಿತ್ತು.

ಕತ್ತಲಾಗುವ ಮೊದಲು ಅದು ಮತ್ತೊಮ್ಮೆ ಬರಬಹುದೆಂದು ನಾನು ಆಶಿಸಿದ್ದೆ, ಆದರೆ ನನಗೆ ನಿರಾಶೆ ಕಾದಿತ್ತು. ಮರುದಿನ ಬೆಳಗ್ಗೆ ನನಗೆ ಬಂದ ಮಾಹಿತಿಯ ಪ್ರಕಾರ ಹತ್ತಿರದ ಹಳ್ಳಿಯ ಜನಗಳು ಶವದ ಚರ್ಮವನ್ನು ಬಿಡಿಸಿ ಮಾಂಸವನ್ನು ತೆಗೆದುಕೊಂಡು ಹೋಗಿದ್ದರು. ಈ ಪ್ರದೇಶದ ಹಿಂದೂಗಳು ಹುಲಿ ಚಿರತೆಗಳು ಕೊಂದ ಹಸುವಿನ ಮಾಂಸವನ್ನು ತಿನ್ನುತ್ತಾರೆನ್ನುವ ವಿಷಯ ನನಗೆ ಆಶ್ಚರ್ಯವನ್ನುಂಟುಮಾಡಿತು. ಕೃಷ್ಣ ಹೇಳಿದ ಪ್ರಕಾರ ಇಲ್ಲಿನ ಜನಗಳು ಹಸುವನ್ನು ಕೊಲ್ಲದಿದ್ದರೂ ಈ ರೀತಿ ಬೇಟೆಯಾಡಲ್ಪಟ್ಟ ಪ್ರಾಣಿಗಳ ಮಾಂಸವನ್ನು ತಿನ್ನಲು ಹಿಂಜರಿಯುತ್ತಿರಲಿಲ್ಲ. ಉತ್ತರ ಅಥವಾ ಮಧ್ಯಭಾರತದ ಹಿಂದೂಗಳು ಹುಲಿ ಚಿರತೆಗಳಿಂದ ಸಾವನ್ನಪ್ಪಿದ ಹಸುವನ್ನು ತಿನ್ನುವುದಿರಲಿ ಮುಟ್ಟಲೂ ಹೇಸುತ್ತಿದ್ದರು.

ಈ ಚಿರತೆ ಸುಮ್ಮನೆ ನಮ್ಮ ಕೈಗೆಟುಕುವ ಸಾಧ್ಯತೆಗಳಿರಲಿಲ್ಲ, ಹಾಗಾಗಿ ಕೃಷ್ಣನಿಗೆ ಕುರಿಯೊಂದನ್ನು ತರಲು ಹೇಳಿದೆ. ಅವನು ಬರುವಷ್ಟರಲ್ಲಿ ಸ್ವಲ್ಪ ತಡವಾಗಿತ್ತು, ಅವನು ಹೇಳಿದ ಪ್ರಕಾರ ಕಾಡಿನಲ್ಲಿ ಕುರಿಯೊಡನೆ ಬರುವಾಗ ಚಿರತೆ ಅವನನ್ನು ಹಿಂಬಾಲಿಸುತ್ತಿತ್ತು, ಅವನು ಕುರಿಯ ಕಿವಿಯನ್ನು ತಿರುಚಿ ಅದು ಕೂಗುವಂತೆ ಮಾಡಿ ಚಿರತೆಯನ್ನೂ ಆಕರ್ಷಿಸುತ್ತಿದ್ದುದಾಗಿ ಹೇಳಿದ. ಕುರಿಯನ್ನು ಕಾಡಿನಲ್ಲಿ ಕಟ್ಟಿ ಅವನು ಹೊರಟುಹೋದ. ಎರಡು ನಿಮಿಷಗಳಾಗುವಷ್ಟರಲ್ಲಿ ಚಿರತೆ ಆಕ್ರಮಣ ಮಾಡಿಯೇ ಬಿಟ್ಟಿತು. ಇದಕ್ಕೆ ಸಂಪೂರ್ಣ ಸಿದ್ಧನಾಗಿದ್ದ ನಾನು ಅದನ್ನು ಹೊಡೆದುರುಳಿಸಿದೆ. ಆದರೆ ಇದು ಹಿಂದಿನ ದಿನ ನೋಡಿದ ದೈತ್ಯ ಗಂಡು ಚಿರತೆಯಾಗಿರಲಿಲ್ಲ ಎಂದು ಬೇಸರವಾಯಿತು.

ಮರುದಿನ ಬೆಳಗ್ಗೆ ಕೃಷ್ಣ ತಂದ ಸುದ್ದಿಯ ಪ್ರಕಾರ ನಾವು ಕಟ್ಟಿದ್ದ ಒಂದು ಬಲಿಪಶುವನ್ನು ಚಿರತೆ ಕೊಂದಿತ್ತು. ಟಿಪ್ಪು ಸುಲ್ತಾನನ ಹೆಸರಿನಿಂದ ಪ್ರಸಿದ್ಧವಾಗಿದ್ದ ಸುಲ್ತಾನ್ ರಸ್ತೆ ಕಾಡಿನ ಹಾದಿಯನ್ನು ಸೇರುವಲ್ಲಿ ಈ ಬಲಿಯನ್ನು ಕಟ್ಟಲಾಗಿತ್ತು, ಈ ಸ್ಥಳದಿಂದ ತಲಮಲೈ ಹಳ್ಳಿಗೆ ಹೋಗುವ ಒಂದು ಮೈಲು ಹಾದಿಯ ಎರಡೂ ಕಡೆಯಲ್ಲಿ ಎತ್ತರದ ಫಿಗ್ ಮರಗಳಿದ್ದವು. ಈ ಮರದಿಂದ ಚಳಿಗಾಲದಲ್ಲಿ ಭಾರೀ ಸಂಖ್ಯೆಯಲ್ಲಿ ಉದುರುವ ಹಣ್ಣುಗಳನ್ನು ತಿನ್ನಲು ರಾತ್ರಿಯ ಹೊತ್ತಿನಲ್ಲಿ ಕರಡಿಗಳು ಬರುತ್ತಿದ್ದವು. ಇಲ್ಲಿಂದ ವಿರುದ್ಧ ದಿಕ್ಕಿನಲ್ಲಿ ಹೋಗುತ್ತಿದ್ದ ಇನ್ನೊಂದು ಹಾದಿಯ ಒಂದು ಕಡೆ ದಟ್ಟವಾದ ಅರಣ್ಯವಿದ್ದರೆ ಮತ್ತೊಂದು ಕಡೆ ಹೊಲಗದ್ದೆಗಳಿದ್ದವು. ಹಾಗಾಗಿ ರಾತ್ರಿಯ ಹೊತ್ತಿನಲ್ಲಿ ಆನೆಗಳ ಹಿಂಡು ಹೊಲಗಳಿಗೆ ದಾಳಿಯಿಟ್ಟು ಫಸಲನ್ನು ನಾಶಮಾಡುತ್ತಿದ್ದವು. ನಾನು ಅಲ್ಲಿದ್ದ ಸಮಯದಲ್ಲಿ ಒಂಟಿಸಲಗವೊಂದು ಅಲ್ಲಿನ ಜನಗಳಲ್ಲಿ ಭೀತಿಯನ್ನು ಮೂಡಿಸಿತ್ತು, ಕೃಷ್ಣ ರಾತ್ರಿಯ ಹೊತ್ತಿನಲ್ಲಿ ಕಾದು ಅದನ್ನು ಕೊಲ್ಲಬೇಕೆಂದು ಕೇಳಿಕೊಂಡ. ಆದರೆ ಕಾಡಿಸಲಗವೆಂದು ಇನ್ನೂ ಘೋಷಿಸಲಾಗಿಲ್ಲದಿದ್ದರಿಂದ ಅದನ್ನು ಕೊಲ್ಲಲು ನಾನು ಒಪ್ಪಲಿಲ್ಲ.

ಆನೆಗಳಿಂದ ನನ್ನನ್ನು ರಕ್ಷಿಸಲು ಕೃಷ್ಣ 20 ಅಡಿ ಎತ್ತರದಲ್ಲಿ ನನ್ನ ಮಚಾನನ್ನು ಕಟ್ಟಿದ್ದ. ಆದರೆ ಆ ಮರ ಎಷ್ಟು ತೆಳುವಾಗಿತ್ತೆಂದರೆ ಕೋಪದಲ್ಲಿರುವ ಆನೆ ಅದನ್ನು ತಳ್ಳಿ ಬೀಳಿಸಲು ಸಾಧ್ಯವಿತ್ತು! ಬಹಳ ಕಷ್ಟದಿಂದ ಅದನ್ನು ಏರಿದ ನಾನು ದೃಷ್ಟಿಗೆ ಅಡ್ಡವಾಗಿದ್ದ ಒಂದು ರೆಂಬೆಯನ್ನು ಕಡಿಯಲು ಅವನಿಗೆ ಹೇಳಿದೆ. ಆದರೆ ಸರ್ಕಾರದ ಆಸ್ತಿಯಾದ ಆ... ಕಡಿದರೆ ನಾನು ಹೋದಮೇಲೆ ತನಗೆ ಅಧಿಕಾರಿಗ... ತೊಂದರೆಕೊಡುತ್ತಾರೆಂದು ಹೇಳಿದ! ಇ... ತೊಂದರೆಗಳಿಲ್ಲದ್ದರಿಂದ ಜನರಿಗೆ ಹಿಂತಿರುಗಲು ... ಹೇಳಿದ.

(ಮುಂದುವರೆಯುವುದು)

ಮೋದಿ ಸರ್ಕಾರದ ಮೂರು ವರ್ಷಗ

ಒಂದು ಅವಲೋಕನ



■ ಸುರೇಶ್ ಭಟ್ ಬಾಕ್ರಬೈಲ್

ಈ ಹೊತ್ತು ಮೋದಿ ಸರ್ಕಾರ ಮೂರು ವರ್ಷಗಳನ್ನು ಪೂರೈಸಿದ ಸಂದರ್ಭದಲ್ಲಿ ಸಂಘಿಗಳು 900 ನಗರಗಳಲ್ಲಿ 'ಮೋದಿ ಉತ್ಸವ್' ಆಚರಿಸುತ್ತಾ ಸರ್ಕಾರದ ಸಾಧನೆಗಳನ್ನು ಕೊಂಡಾಡುತ್ತಿದ್ದಾರೆ. ಹಾಗಾದರೆ ಮೋದಿ ಸರ್ಕಾರ ನಿಜಕ್ಕೂ ಅಷ್ಟೊಂದು ಸ್ತುತ್ಯಾರ್ಹವಾದ ಸಾಧನೆಗಳನ್ನು ಮಾಡಿದೆಯೆ ಎಂದು ನೋಡಬೇಡವೆ? ಚುನಾವಣಾ ಭರವಸೆಗಳ ಜಾಡು ಹಿಡಿಯುವ ತಂಡ (Election Promises Tracker) ನಡೆಸಿರುವ ಅಧ್ಯಯನವೊಂದು ಹೇಳುವಂತೆ 2014ರ ಚುನಾವಣೆಗೆ ಮೊದಲು ಬಿಜೆಪಿ ನೀಡಿದ್ದ 126 ಭರವಸೆಗಳ ಪೈಕಿ ಇದುವರೆಗೆ ಬರೀ ಶೇಕಡಾ 8ರಷ್ಟನ್ನು ಮಾತ್ರ ಈಡೇರಿಸಲಾಗಿದೆ. ಇವೆಲ್ಲವೂ ಯೋಗ, ಆಯುಷ್, ಕೃಷಿ ವಿಮೆ, ಕೆಲವೊಂದು ಪುರಾತನ ಕಾಯ್ದೆಗಳ ಪರಿಷ್ಕರಣೆ/ ರದ್ದತಿಯಂತಹ ಅಷ್ಟೇನೂ ಮುಖ್ಯವಲ್ಲದ ವಿಷಯಗಳಿಗೆ ಸಂಬಂಧಿಸಿವೆ! 'ಪ್ರಧಾನ ಮಂತ್ರಿ ಕೃಷಿ ವಿಮೆ ಯೋಜನೆ'ಯಿಂದ ರೈತರಿಗೆ ಯಾವ ಪ್ರಯೋಜನವೂ ಇಲ್ಲದಿರುವುದನ್ನು ಹಿಂದಿನ ಅಂಕಣವೊಂದರಲ್ಲಿ ವಿವರಿಸಲಾಗಿದೆ. ನಿಜಕ್ಕೂ ಅತ್ಯವಶ್ಯಕವಾದ ಎಲ್ಲಾ ಜನವರ್ಗಗಳ ಅಭಿವೃದ್ಧಿ, ಸೌಹಾರ್ದಯುತ ಸಮಾಜ ನಿರ್ಮಾಣ, ಭ್ರಷ್ಟಾಚಾರ ಮತ್ತು ಕಾಳಧನ ನಿರ್ಮೂಲನ, ಹೂಡಿಕೆ, ಉತ್ಪಾದನೆಯಲ್ಲಿ ಹೆಚ್ಚಳ, ನಿರುದ್ಯೋಗ ನಿವಾರಣೆ ಮೊದಲಾದ ಬಹುಮುಖ್ಯ ಕ್ಷೇತ್ರಗಳಲ್ಲಿ ಸರ್ಕಾರದ ವೈಫಲ್ಯ ಎದ್ದುಕಾಣುವಂತಿದೆ.


'ಸಬ್ ಕಾ ಸಾಥ್ ಸಬ್ ಕಾ ವಿಕಾಸ್'

ಜನಸಾಮಾನ್ಯರು ರಾಜಕೀಯಕ್ಕೆ ಸಂಬಂಧಿಸಿದ ವಿಚಾರಗಳನ್ನು ಬಹುಬೇಗನೆ ಮರೆಯುತ್ತಾರೆ ಎಂಬ ಸತ್ಯವನ್ನು ಅರಿತಿರುವುದರಿಂದಲೆ ನಟಸಾರ್ವಭೌಮ ಮೋದಿ ಅಂದು ಜನಪ್ರಿಯ ಘೋಷಣೆಗಳ ಮೂಲಕ ಮತದಾರರನ್ನು ಸೆಳೆಯುವಲ್ಲಿ ಯಶಸ್ಸು ಸಾಧಿಸಿದ. ಆತನ ಸು(ಕು)ಪ್ರಸಿದ್ಧ ಘೋಷಣೆಗಳಲ್ಲೊಂದಾದ 'ಸಬ್ ಕಾ ಸಾಥ್ ಸಬ್ ಕಾ ವಿಕಾಸ್' ಕೂಡಾ ಆತನ ಇನ್ನಿತರ ಘೋಷಣೆಗಳ ಹಾಗೆ ಬರೀ ಬಾಯಿಮಾತಿಗೆ ಸೀಮಿತವಾಗಿಬಿಟ್ಟಿದೆ. ಒಟ್ಟಾರೆಯಾಗಿ ನೋಡಿದರೆ ಕಳೆದ ಮೂರು ವರ್ಷಗಳ ಅವಧಿಯಲ್ಲಿ ಅತ್ತ ರೈತರ ವಿಕಾಸವೂ ಆಗಿಲ್ಲ, ಇತ್ತ ಕಾರ್ಮಿಕರ ವಿಕಾಸವೂ ಆಗಿಲ್ಲ, ಬಡವರ ವಿಕಾಸವೂ ಆಗಿಲ್ಲ, ನಿರುದ್ಯೋಗಿಗಳ ವಿಕಾಸವೂ ಆಗಿಲ್ಲ, ಅಲ್ಪಸಂಖ್ಯಾತರ ವಿಕಾಸವೂ ಆಗಿಲ್ಲ, ಮೋದಿ ಸರ್ಕಾರದಡಿ 'ಅಭಿವೃದ್ಧಿ' ಆಗಿರುವುದೆಂದರೆ ಗುಂಪುಗಳು ಕಾನೂನಿನ ಭಯವಿಲ್ಲದೆ ಕೊಲೆ, ಹಿಂಸಾಚಾರಗಳಲ್ಲಿ ತೊಡಗುವಲ್ಲಿ! ದಲಿತ, ದಮನಿತರ ಮೇಲಿನ ದೌರ್ಜನ್ಯಗಳಲ್ಲಿ! ಗೋರಕ್ಷಕರ ಹಲ್ಲೆಗಳಲ್ಲಿ! ಅನೈತಿಕ ಪೊಲೀಸ್‌ಗಿರಿಯಲ್ಲಿ! ಲವ್ ಜಿಹಾದ್ ಆರೋಪಗಳಲ್ಲಿ! ಸಿನಿಮಾ ಮಂದಿರಗಳಲ್ಲಿ ರಾಷ್ಟ್ರಗೀತೆ ಕಡ್ಡಾಯ ಮಾಡುವಲ್ಲಿ! ಆಡಳಿತದ ಪ್ರಮುಖ ಸ್ಥಾನಗಳಲ್ಲಿ ಆರೆಸ್ಸೆಸಿಗರ ನೇಮಕದಲ್ಲಿ! ಶ್ರೀಮಂತರ ಸಂಪತ್ತಿನಲ್ಲಿ! ಬ್ಯಾಂಕುಗಳ ಅನುತ್ಪಾದಕ ಆಸ್ತಿಯ (ಎನ್‌ಪಿಎ; ಮರಳಿಸದ ಸಾಲ) ಪ್ರಮಾಣದಲ್ಲಿ!

ಮೂರು ವರ್ಷಗಳ ಹಿಂದೆ 2.3 ಲಕ್ಷ ಕೋಟಿಯಷ್ಟಿದ್ದ ಬ್ಯಾಂಕುಗಳ ಎನ್‌ಪಿಎ ಇಂದು 6.8 ಲಕ್ಷ ಕೋಟಿಯಷ್ಟಾಗಿದೆ. ಅಂದರೆ ಸುಮಾರು ಮೂರುಪಟ್ಟು ಏರಿಕೆಯಾಗಿದೆ! ಈ ಮರಳಿಸದ ಸಾಲದ ಶೇಕಡಾ 70ರಷ್ಟಕ್ಕೆ ಬೆರಳೆಣಿಕೆಯ ಕಾರ್ಪೋರೇಟುಗಳೆ ಕಾರಣ. ಇದರರ್ಥ ಕಾರ್ಪೋರೇಟುಗಳಿಗೆ ಲೂಟಿ ಹೊಡೆದು ಅಭಿವೃದ್ಧಿಯಾಗಲು ಮುಕ್ತ ಅವಕಾಶಗಳನ್ನು ನೀಡಲಾಗಿದೆ. ಇಂತಹ ಕಾರ್ಪೋರೇಟುಗಳಿಗೆ ಸದ್ಯದಲ್ಲಿ ಸಾರ್ವಜನಿಕ ಕ್ಷೇತ್ರದ ಬ್ಯಾಂಕುಗಳನ್ನು ಖರೀದಿಸುವ ಅವಕಾಶವೂ ದೊರೆಯಲಿದೆ! Credit Suisse ಸಂಸ್ಥೆಯ ಸಮೀಕ್ಷಾ ವರದಿ ಪ್ರಕಾರ ಭಾರತದ ಜನಸಂಖ್ಯೆಯ ಶೇಕಡಾ 1ರಷ್ಟಿರುವ ಆಗರ್ಭ ಶ್ರೀಮಂತರ ಸಂಪತ್ತು 2015ರಲ್ಲಿ ಶೇಕಡಾ 53ರಷ್ಟಿದ್ದರೆ 2016ರಲ್ಲಿ ಅದು ಶೇಕಡಾ 58.4ಕ್ಕೇರಿದೆ. ಮೋದಿ ಸರ್ಕಾರದ ಆಡಳಿತದಲ್ಲಿ ನಿಜವಾಗಿ ಯಾರ ವಿಕಾಸ ಆಗಿದೆ ಎಂಬುದಕ್ಕೆ ಬೇರೆ ನಿದರ್ಶನಗಳ ಅವಶ್ಯಕತೆ ಇದೆಯೆ?

ನೋಟು ರದ್ದತಿ

"ಭ್ರಷ್ಟಾಚಾರ, ಭಯೋತ್ಪಾದನೆ, ಖೋಟಾನೋಟು" ಎಂಬ ಮೂರು ಆಪತ್ತುಗಳನ್ನು ಎದುರಿಸಲೆನ್ನಲಾದ ನೋಟು ರದ್ದತಿ ಮೂರೂ ರಂಗಗಳಲ್ಲಿ ವಿಫಲವಾಗಿದೆ. ಅಸಲಿಗೆ ಅದು ಯಶಸ್ವಿಯಾಗಿರುವುದು ವಿರೋಧ ಪಕ್ಷಗಳ ಬಲವನ್ನು ಕುಗ್ಗಿಸುವಲ್ಲಿ ಮತ್ತು ಪೇಟಿಎಂನಂತಹ ನಗದುರಹಿತ ಪಾವತಿ ಕಂಪೆನಿಗಳ ವ್ಯಾಪಾರ ಹೆಚ್ಚಿಸುವಲ್ಲಿ. ನೋಟು ರದ್ದತಿಯಿಂದಾಗಿ ಕಪ್ಪುಹಣವೆಲ್ಲ ಹೊರಬೀಳಲಿದೆ, "ದೇಶವನ್ನು ಶುದ್ಧೀಕರಿಸುವ ಈ ಮಹಾನ್ ತ್ಯಾಗಕ್ಕೆ" ಸಿದ್ಧರಾಗಿ ಎಂದು ಮುಂತಾಗಿ ಟಾಂಟಾಂ ಮಾಡಿದ ಮೋದಿ ಸರ್ಕಾರ ಇದುವರೆಗೂ ಎಷ್ಟು ಕಪ್ಪುಹಣ ಹೊರಬಂದಿದೆ ಎಂದು ಜನರಿಗೆ ತಿಳಿಸಿಲ್ಲ! ಅಮಾನ್ಯಗೊಳಿಸಿದ ದುಡ್ಡಿನ ಶೇಕಡಾ 97ರಷ್ಟು ಅಥವಾ ಅದಕ್ಕಿಂತಲೂ ಹೆಚ್ಚಿನ ಮೊತ್ತ ಮರಳಿಬಂದಿರುವಾಗ ಮೋದಿ ಸರ್ಕಾರದ ಮೌನಕ್ಕೆ ಕಾರಣವೇನೆಂದು ಬಿಡಿಸಿ ಹೇಳಬೇಕೆ?! ಈ ಸಂದರ್ಭದಲ್ಲಿ ಭ್ರಷ್ಟಾಚಾರ ನಿರ್ಮೂಲನೆಯ ಬಗ್ಗೆ ಉದ್ದುದ್ದ ಭಾಷಣ ಬಿಗಿಯುವವರು ಲೋಕಪಾಲ ಹುದ್ದೆಯನ್ನೇಕೆ ಖಾಲಿ ಇಟ್ಟಿದ್ದಾರೆ ಮತ್ತು 2013-14ರಲ್ಲಿ ಗುಜರಾತ್ ಮುಖ್ಯಮಂತ್ರಿ ಮತ್ತಿತರ ರಾಜಕಾರಣಿಗಳಿಗೆ ಲಂಚ ಪಾವತಿಯಾಗಿರುವುದಕ್ಕೆ ಸಂಬಂಧಿಸಿದ ಸಹಾರಾ ಬಿರ್ಲಾ ಪೇಪರ್ಸ್ ಹಗರಣವನ್ನು ಯಾಕೆ ತನಿಖೆಗೊಳಪಡಿಸುತ್ತಿಲ್ಲವೆಂದು ವಿವರಿಸುವ ಅಗತ್ಯ ಇದೆಯೆ? ಪಾಪ, "ಮಹಾನ್ ತ್ಯಾಗ" ಮಾಡಿರುವ ಜನರಿನ್ನೂ ವಿದೇಶಗಳಿಂದ ಬರಲಿರುವ ರೂ. 15 ಲಕ್ಷ ಕಪ್ಪುಹಣಕ್ಕಾಗಿ ಚಾತಕ ಪಕ್ಷಿಗಳಂತೆ ಕಾಯುತ್ತಿದ್ದಾರೆ!



ಚಿತ್ರಕೃಪೆ: ಸತೀಶ್ ಆಚಾರ್ಯ

ನೋಟು ರದ್ದತಿಯ ಪರಿಣಾಮವಾಗಿ 91 ಲಕ್ಷ ಜನ ಹೊಸದಾಗಿ ತೆರಿಗೆ ಜಾಲಕ್ಕೆ ಸೇರ್ಪಡೆಯಾಗಿದ್ದು ಭಾರಿ ಪ್ರಮಾಣದ ಕಪ್ಪುಹಣವನ್ನು ಪತ್ತೆಹಚ್ಚಲಾಗಿದೆ ಎಂದು ಭಟ್ಟಂಗಿ ಮಾಧ್ಯಮಗಳ ಮೂಲಕ ಪ್ರಚಾರ ಮಾಡಲಾಗುತ್ತಿದೆ. ಆದರೆ ವಾಸ್ತವ ಬೇರೆಯೆ ಇದೆ. ಈ 91 ಲಕ್ಷ ಸಂಖ್ಯೆ ಇಡೀ ವಿತ್ತ ವರ್ಷಕ್ಕೆ (2016-17) ಸಂಬಂಧಪಟ್ಟುದಾಗಿದೆ ಹೊರತು ನೋಟು ರದ್ದತಿ (2016ರ ನವಂಬರ್ 8) ನಂತರದ ಕಾಲಾವಧಿಯದಲ್ಲ! ಅದೇ 2014-15ರ ವಿತ್ತ ವರ್ಷದಲ್ಲಿ ಸುಮಾರು 76 ಲಕ್ಷ ಹೊಸ ತೆರಿಗೆದಾರರಿದ್ದರು. ಅಂದರೆ ಎರಡು ವರ್ಷಗಳಲ್ಲಿ ಸುಮಾರು 15 ಲಕ್ಷ ಹೊಸ ತೆರಿಗೆದಾರರ ಸೇರ್ಪಡೆಯಾಗಿದೆ. ಇದು ಆಗಿರುವುದು ಮಾಮೂಲಿ ಬೆಲೆ ಏರಿಕೆ ಮತ್ತು ಪ್ರತಿವರ್ಷ ಸಹಜವಾಗಿ ಸೇರ್ಪಡೆಯಾಗುವ ಹೊಸ ತೆರಿಗೆದಾರರಿಂದ ಹೊರತು ನೋಟು ರದ್ದತಿಯಿಂದ ಅಲ್ಲ ಎಂಬುದಕ್ಕೆ ಬಲವಾದ ಸಾಕ್ಷ್ಯಾಧಾರಗಳಿವೆ. ಏಕೆಂದರೆ ನೋಟು ರದ್ದತಿ ಇರದ 2012-13ರಲ್ಲಿ ಒಟ್ಟು ಅಘೋಷಿತ ಆದಾಯ (ಕಪ್ಪು ಹಣ) ರೂ. 29,629 ಕೋಟಿ ಇದ್ದರೆ 2013-14ರಲ್ಲಿ ರೂ. 1,01,182 ಕೋಟಿಯಷ್ಟಾಗಿತ್ತು! ನೋಟು ರದ್ದತಿ ನಡೆದ 2016-17ರಲ್ಲಿ ಇದು ಇನ್ನೂ ಹೆಚ್ಚಾಗಬೇಕಿತ್ತು ತಾನೆ. ಆದರೆ 2016-17ರಲ್ಲಿ ಒಟ್ಟು ಅಘೋಷಿತ ಆದಾಯದ ಪ್ರಮಾಣ ಸುಮಾರು 3 ಪಟ್ಟು ಕಡಿಮೆಯಾಗಿದ್ದು ಅದೀಗ ರೂ. 31,211 ಕೋಟಿಗಿಂತ ಸ್ವಲ್ಪ ಜಾಸ್ತಿ ಇರಬಹುದಷ್ಟೆ! ಇದರರ್ಥ ಏನೆಂದರೆ ಮೋದಿ ಸರ್ಕಾರದ ನೋಟು ರದ್ದತಿಯಿಂದ ಕಪ್ಪುಹಣದ ಸ್ಥಿತಿಯಲ್ಲಿ ಯಾವ ಬದಲಾವಣೆಯೂ ಆಗಿಲ್ಲ! ವಾಸ್ತವದಲ್ಲಿ 2012-13ರಿಂದೀಚೆಗಿನ ಅಂಕಿಅಂಶಗಳನ್ನು ಪರಿಶೀಲಿಸಿದಾಗ 2014-15ರ ನಂತರದಲ್ಲಿ ಆದಾಯ ತೆರಿಗೆ ಇಲಾಖೆ ಮೊದಲಿನಷ್ಟು ಪರಿಣಾಮಕಾರಿಯಾಗಿಲ್ಲ ಎಂದು ತಿಳಿದುಬರುತ್ತದೆ.

ನೋಟು ರದ್ದತಿಯಿಂದ ಭಯೋತ್ಪಾದನೆ, ಗಡಿ ಅತಿಕ್ರಮಣಗಳು ಕಡಿಮೆಯಾಗಲಿವೆ ಎಂದು ಕೊಚ್ಚಿಕೊಂಡವರು ಈಗ ಗಡಿ ಸಂಘರ್ಷಗಳಲ್ಲಿ ಹೆಚ್ಚಳವಾಗಿರುವ ಬಗ್ಗೆ ಜಾಣ ಮೌನ ವಹಿಸಿದ್ದಾರೆ. ಅಂದು ಯುಪಿಎ ಸರ್ಕಾರ ಮತ್ತು ಅದರ ಪ್ರಧಾನಿಯನ್ನು ದುರ್ಬಲರೆಂದು ಟೀಕಿಸುತ್ತಿದ್ದ ಮೋದಿ, ಬಿಜೆಪಿ ಅಧಿಕಾರಕ್ಕೆ ಬಂದರೆ ಪಾಕಿಸ್ತಾನ ಯಾವತ್ತೂ ಭಾರತದ ಮೇಲೆ ದಾಳಿ ಮಾಡುವ ಧೈರ್ಯ ತೋರದು ಎಂದಿದ್ದ. ಆದರೆ ಈಗ ಬಿಜೆಪಿ ಆಡಳಿತ ಇರುವಾಗ 2015ರಲ್ಲಿ 405 ಗಡಿ ಉಲ್ಲಂಘನೆಗಳಾಗಿದ್ದರೆ 2016ರಲ್ಲಿ ಅವುಗಳ ಸಂಖ್ಯೆ 449ಕ್ಕೆ ಏರಿದೆ; ಇದುವರೆಗೆ 23 ಭಾರತೀಯ ಯೋಧರು ಹತರಾಗಿದ್ದಾರೆ. ಕಳೆದ ಕೇವಲ ಎರಡು ವಾರಗಳ ಅವಧಿಯಲ್ಲಿ ಜಮ್ಮು ಕಾಶ್ಮೀರದಲ್ಲಿ ಪಾಕ್ ವತಿಯಿಂದ 8 ಉಲ್ಲಂಘನೆಗಳು ನಡೆದಿವೆ.

ಕೃಷಿ ವಲಯ

ಚುನಾವಣಾ ಪ್ರಚಾರದ ಕಾಲದಲ್ಲಿ ರೈತ ರ್‍ಯಾಲಿಗಳಲ್ಲಿ ರಂಗುರಂಗಿನ ಭರವಸೆಗಳನ್ನು ಕೊಟ್ಟಿದ್ದ ಮೋದಿ, ಬಿಜೆಪಿಯನ್ನು ಗೆಲ್ಲಿಸಿದರೆ ಕೃಷಿ ಉತ್ಪನ್ನಗಳ ಖರೀದಿ ಬೆಲೆಯನ್ನು ಸ್ವಾಮಿನಾಥನ್ ಸಮಿತಿಯ ವರದಿಗೆ ಅನುಸಾರವಾಗಿ (ರೈತರಿಗೆ ಶೇಕಡಾ 50ರಷ್ಟು ಲಾಭ ಸಿಗುವ ಹಾಗೆ) ನಿಗದಿಪಡಿಸಲಾಗುವುದೆಂದು ವಾಗ್ದಾನ ಮಾಡಿದ್ದ. ಆದರೆ ಇಂದು ಕೃಷಿ ಉತ್ಪನ್ನ ಖರೀದಿ ನೀತಿಯನ್ನು ವಿಶ್ವ ವಾಣಿಜ್ಯ ಮಂಡಳಿಯ ನಿಯಮಗಳಿಗೆ ಅನುಸಾರವಾಗಿ ರೂಪಿಸುವ ಮೂಲಕ ಹಿಂದಿನ ಭರವಸೆಗೆ ಬೆನ್ನು ತೋರಿಸಲಾಗುತ್ತಿದೆ. 2022ರೊಳಗಾಗಿ ಕೃಷಿ ವಲಯದಲ್ಲಿನ ಆದಾಯಗಳನ್ನು ಎರಡು ಪಟ್ಟು ಹೆಚ್ಚಿಸಲಾಗುವುದು ಎಂಬುದು ಮೋದಿ ಸರ್ಕಾರದ ಮತ್ತೊಂದು ಭರವಸೆಯಾಗಿತ್ತು, ಆದರೆ ಕೃಷಿ ವಲಯದ ಜಿಡಿಪಿಯನ್ನು ನೋಡಿದರೆ ಸಾಕು, ಮೋದಿ ಸರ್ಕಾರದ ಬಣ್ಣವೆಲ್ಲ ಬಯಲಾಗುತ್ತದೆ. ಯುಪಿಎ 2ರ ಕಾಲದಲ್ಲಿ ಜಿಡಿಪಿಯಲ್ಲಿ ಶೇಕಡಾ 3.6ರಷ್ಟು ಏರಿಕೆ ಆಗಿದ್ದರೆ 2014ರ ನಂತರದ 3 ವರ್ಷಗಳಲ್ಲಿ ಜಿಡಿಪಿಯಲ್ಲಿ ಆಗಿರುವ ಹೆಚ್ಚಳ ಕೇವಲ ಶೇಕಡಾ 1.7 ಅಷ್ಟೆ! ಆದರೆ ಈ ಬಿಕ್ಕಟ್ಟಿಗೆ ಮೋದಿ ಸೂಚಿಸಿರುವ ಪರಿಹಾರಗಳಾದ ಕೃಷಿ ವಿಮೆ ಮತ್ತು ಸಾಲ ಮನ್ನಾಗಳೆರಡೂ ಭೂಮಿ ಉಳ್ಳವರ ಪರವಾಗಿವೆ.

ಮನರೇಗಾ

ಮೋದಿ ಸರ್ಕಾರ ತೀರ ದಾರಿದ್ರ್ಯದಲ್ಲಿರುವ ಬ
ಕಾರ್ಮಿಕರ ಸಂಕಷ್ಟಗಳಿಗೆ ಮನರೇಗಾ ಕಾಯ
ಮೂಲಕ ಸ್ಪಂದಿಸುವ ಬದಲು 2014 ಮತ್ತು 2
ಮನರೇಗಾ ಅನುದಾನಗಳಲ್ಲಿ ಕಡಿತ ಮಾಡಿದೆ! 2
ಹಿಂದಿನ ಅನುದಾನ ಮೊತ್ತಕ್ಕೆ ಮರಳಲಾಗಿದೆ
ಅನೇಕ ರಾಜ್ಯಗಳಲ್ಲಿ ಆಗಿರುವ ಹೆಚ್ಚಳ ಬರೀ
2017-18ರ ಸಾಲಿನಲ್ಲಿ ಆಗಿರುವ 2.7 ಪ್ರತಿಶ
ಯೋಜನೆಯ ಇತಿಹಾಸದಲ್ಲೆ ಅತ್ಯಂತ ಕನಿಷ್ಠ ಹೆಚ್
2014-15ರ ಸಾಲಿನಲ್ಲಿ 4.65 ಕೋಟಿ ಕುಟ
ಕೆಲಸಕ್ಕಾಗಿ ಬೇಡಿಕೆ ಇಟ್ಟಿದ್ದರೆ 2015-16ರ
5.35 ಕೋಟಿಗೆ ಏರಿದೆ. ಮುಂದೆ 2016-17ರ
ಕೋಟಿಯಷ್ಟಾಗಿದೆ. ಆದರೆ ಅರ್ಜಿ ಹಾಕಿದವರಲ್
10-11ರಷ್ಟು ಜನರಿಗೆ ಕೆಲಸ ನೀಡಲಾಗುತ್ತಿ
ವರ್ಷ ಸುಮಾರು 58 ಲಕ್ಷ ಕುಟುಂಬಗಳನ್ನು
ಕಳುಹಿಸಲಾಗಿದೆ.

ಶಿಕ್ಷಣ ಮತ್ತು ಆರೋಗ್ಯ

ಕಳೆದ 3 ವರ್ಷಗಳಲ್ಲಿ ಶಿಕ್ಷಣ ಕ್ಷೇತ್ರದಲ್ಲಿ
ಸಾಧನೆ ಹೆಚ್ಚುಕಡಿಮೆ ಶೂನ್ಯ. 2014ರ ನಂತರದ
ಅಂಕಿಅಂಶಗಳು ಹೇಳುವಂತೆ ಸರ್ಕಾರ ಶಿಕ್ಷಣಕ್ಕಾಗಿ
ವೆಚ್ಚದಲ್ಲಿ ಇಳಿಕೆಯಾಗಿದೆ! 2016ರಲ್ಲಿ
ಅಂದಾಜಿನಲ್ಲಿ ಕನಿಷ್ಠ ಪ್ರಮಾಣದ ಏರಿಕೆ ಮಾ
ಯಾದರೂ ಅದರಿಂದ ಯಾವುದೇ ಗಮನಾರ್ಹ ಬ
ಆಗಿಲ್ಲ. ಅಣಬೆಗಳಂತೆ ತಲೆಎತ್ತುತ್ತಿರುವ
ವಿಶ್ವವಿದ್ಯಾಲಯಗಳಿಂದಾಗಿ ಶಿಕ್ಷಣ ಕೇವಲ
ಕೈಗೆಟಕುವಂತಾಗಿದೆ. ಇಂದು ಖಾಸಗಿ ವಿಶ್ವವಿದ್ಯಾ
ಸಂಖ್ಯೆ ಶೇಕಡಾ 33ರಷ್ಟಿದೆ.

ದೇಶದ ಪ್ರಮುಖ ಶಿಕ್ಷಣ ತಜ್ಞರು ಮೋದಿ
ನೂತನ ಶಿಕ್ಷಣ ನೀತಿಯನ್ನು ಟೀಕಿಸಿದ್ದಾರೆ. ಶಿಕ್ಷಣ
ಸುಧಾರಣೆ ಕುರಿತು ನೀತಿನಿಯಮಗಳನ್ನು ನಿರು
ಸಂದರ್ಭದಲ್ಲಿ ಮಕ್ಕಳ ಸಮಾಜೋಆರ್ಥಿಕ ಹಿನ್ನೆ
ಅವರ ಅಗತ್ಯಗಳನ್ನು ಪರಿಗಣಿಸುವುದು ಅತ್ಯಗತ್ಯ
ಮಾಡದೆ ಎಲ್ಲರಿಗೂ ಅನ್ವಯಿಸುವಂತಹ ಏಕರೂ
ಅಸಮಾನತೆಯನ್ನು ಇನ್ನಷ್ಟು ಹೆಚ್ಚಿಸಲಿದೆ. ಬಡ ವಿದ
ಕಷ್ಟಕಾರ್ಪಣ್ಯಗಳು ಅಧಿಕಗೊಳ್ಳಲಿವೆ. ಮೋದಿ
ಅವಧಿಯಲ್ಲಿ ಕೇಂದ್ರೀಯ ನವೋದಯ ಮತ್ತು
ಗಾಂಧಿ ಬಾಲಿಕಾ ವಿದ್ಯಾಲಯಗಳ ಸಂ
ಹೆಚ್ಚಳವಾಗಿರುವುದು, ಬಿಸಿಯೂಟ ಕಾಯ
ಪ್ರೋತ್ಸಾಹ ನೀಡಲಾಗುತ್ತಿರುವುದು, ಶಿಕ್ಷಣ
ಸಂಬಂಧಿಸಿದ ಕಾನೂನಿಗೆ ತಿದ್ದುಪಡಿ ತರ
ಮುಂತಾದುವೆಲ್ಲ ಹಿಂದಿನ ಯುಪಿಎ ಸರ್ಕಾರದ
ಮುಂದುವರಿಕೆಯ ಹೊರತು ಬೇರೇನೂ ಅಲ್ಲ
ಸಂಸ್ಥೆಗಳ ಗುಣಮಟ್ಟವನ್ನು ಸುಧಾರಿಸಲೆನ್ನಲಾದ
ಮದನ್ ಮೋಹನ್ ಮಾಳವೀಯ ರಾಷ್ಟ್ರೀಯ
ಮತ್ತು ಶಿಕ್ಷಣ ಯೋಜನೆ ಮುಂತಾದ ಕಾರ್ಯಕ್ರ
ಬಜೆಟ್ಟಿನಲ್ಲಿ ಕೋಟಿಗಟ್ಟಲೆ ಅನುದಾನ ಘೋಷಿ
ಯಾದರೂ ಅಭಿವೃದ್ಧಿ ಮಾತ್ರ ಶೂನ್ಯ. ಪಠ್ಯ
ವಿವಾದಾತ್ಮಕ ವಿಚಾರಗಳ ತುರುಕುವಿಕೆ,
ತಿರುಚುವಿಕೆ ಮುಂತಾದವುಗಳ ಬಗ್ಗೆ ಏನೂ ಮಾ
ಮೂರು ವರ್ಷಗಳಲ್ಲಿ ಮಾನವ ಸಂಪನ್ಮೂಲ
ಮಾಡಿರುವ ಕೆಲಸವೆಂದರೆ ಶಿಕ್ಷಣ ವ್ಯವಸ್ಥೆಯನ್ನು
ಸ್ವಚ್ಛ ಭಾರತ ಮತ್ತು ಡಿಜಿಟಲ್ ಪಾವತಿ ಯೋ
ಪ್ರಚಾರಕ್ಕಾಗಿ ಬಳಸಿರುವುದು.

ಆರೋಗ್ಯ ಕ್ಷೇತ್ರದಲ್ಲೂ ಖಾಸಗಿಯವರ ಹಾ
ತಡೆಗಟ್ಟಲು ಯಾವುದೇ ಪ್ರಯತ್ನ ಮಾಡಲಾಗಿಲ್ಲ
ವಾಗಿ ಬಡವರು, ಮಧ್ಯಮವರ್ಗಗಳು
ಕಷ್ಟಕ್ಕೀಡಾಗಿದ್ದಾರೆ.

ನಿರುದ್ಯೋಗ ನಿವಾರಣೆ

ಮೋದಿ ಸರ್ಕಾರ ಅಂತಾರಾಷ್ಟ್ರೀಯ ಹೂಡಿಕೆ
ಕರೆಯಿಸಿ ದೊಡ್ಡ ದೊಡ್ಡ ಕಾರ್ಯಕ್ರಮಗಳನ್ನು ನ
ಮೋದಿ ವಿದೇಶಗಳಿಗೆ ಭೇಟಿ ನೀಡಿದ್ದೇನು, ಮೇ
ಇಂಡಿಯ, ಸ್ಕಿಲಿಂಗ್ ಇಂಡಿಯ, ಸ್ಟಾಂಡ್ ಅಪ್
ಎಂಬ ನಾನಾ ಬಣ್ಣಬಣ್ಣದ ಘೋಷಣೆಗಳೇನು
ಇವೆಲ್ಲದರ ಹೊರತಾಗಿಯೂ ಕಳೆದ ಮೂರು ವ
ನಿರುದ್ಯೋಗ ಕಡಿಮೆಯಾಗುವ ಬದಲು ವಿಪರೀತ
ಎಂದರೆ ಅದರ ಅರ್ಥ ಒಂದೇ. ಸಾಕಷ್ಟು ಪ್ರ
ಹೂಡಿಕೆ ಆಗಿಲ್ಲ!

ಉದ್ಯೋಗಗಳನ್ನು ಸೃಷ್ಟಿಸುವುದಕ್ಕಾಗಿ ಎನ್ನಲಾ
ಇನ್ ಇಂಡಿಯ, ಸ್ಕಿಲಿಂಗ್ ಇಂಡಿಯ, ಸ್ಟಾಂ
ಇಂಡಿಯ ಯೋಜನೆಗಳಿಂದ ವಿಶೇಷ ಬದಲಾ

ಉತ್ತರ ಪ್ರದೇಶದಲ್ಲಿ ಸ್ವಾಭಿಮಾನೀ ದಲಿತರು ಹಾಕಿರುವ ಮತ್ತೊಂದು ಸವಾಲು

ಆದಿತ್ಯನಾಥರ ಮುಸ್ಲಿಮ್ ವಿರೋಧಿ ಹಿನ್ನೆಲೆ ಬಲ್ಲವರಿಗೆ ಉತ್ತರ ಪ್ರದೇಶದಲ್ಲಿ ಬಿಜೆಪಿಯು ಗೆದ್ದ ನಂತರ ಕೋಮು ಉದ್ವಿಗ್ನ ಪರಿಸ್ಥಿತಿಯು ನಿರ್ಮಾಣಗೊಳ್ಳುವುದರ ಬಗ್ಗೆ ಸಂಶಯವೇನೂ ಇರಲಿಲ್ಲ. ಆದರೆ ಅವರ ಅಧಿಕಾರಾವಧಿಯ ಪ್ರಾರಂಭದ ದಿಸೆಯಲ್ಲೇ ಜಾತಿ ಧ್ರುವೀಕರಣಗಳು ಇಷ್ಟು ಬೇಗ ಸಂಭವಿಸುತ್ತಿರುವುದು ಉತ್ತರ ಪ್ರದೇಶದ ಜನರಿಗೆ ಮಾತ್ರವಲ್ಲದೆ ಬಿಜೆಪಿಗೂ ಸಹ ತಲೆ ಬಿಸಿ ಮಾಡುವ ಅಪಾಯದ ಗಂಟೆಯಾಗಿದೆ.

EPW ಸಂಪಾದಕೀಯ


ಕೃಪೆ: *Economic and Political Weekly*
May 20, 2017. Vol 52. No. 20

■ ಅನು: ಶಿವಸುಂದರ್

ಸಹರಾನ್‌ಪುರದಲ್ಲಿ ಉದಯಿಸಿರುವ ಭೀಮ್ ಆರ್ಮಿ(ಭೀಮ ಸೇನೆ)ಯು ಉತ್ತರ ಪ್ರದೇಶದ ದಲಿತರಲ್ಲಿ ಹರಳುಗಟ್ಟುತ್ತಿರುವ ಆಕ್ರಮಣಶೀಲತೆಯನ್ನು ಸೂಚಿಸುತ್ತದೆ

ಇತ್ತೀಚೆಗೆ ಉತ್ತರ ಪ್ರದೇಶದ ಸಹರಾನ್‌ಪುರದಲ್ಲಿ ...ೂರರು ಮತ್ತು ದಲಿತರ ಮಧ್ಯೆ ನಡೆದಿರುವ ...ಣೆಗಳು, ಅಧಿಕಾರದಲ್ಲಿ ಬದಲಾವಣೆಯಾಗುತ್ತಿದ್ದಂತೆ ... ವಿಷಮಗೊಳ್ಳುತ್ತಿರುವ ಸಾಮಾಜಿಕ ಸಂಬಂಧಗಳನ್ನೂ ...ತ್ತು ಸಾಂಸ್ಕೃತಿಕ ಹಕ್ಕುದಾರಿಕೆಗಳ (ಅಸರ್ಷನ್) ನಡುವಿನ ...ರ್ಷವನ್ನೂ ಸೂಚಿಸುತ್ತದೆ. ಕಳೆದ 15 ವರ್ಷಗಳಲ್ಲಿ ...ಯಾವತಿಯವರ ಬಹುಜನ್ ಸಮಾಜ ಪಕ್ಷ (ಬಿಎಸ್‌ಪಿ) ...ತ್ತು ಮುಲಾಯಂ ಸಿಂಗ್ ಯಾದವರ ಸಮಾಜವಾದಿ ...ಎಸ್‌ಪಿ)ಗಳು ದಲಿತರ ಮತ್ತು ಹಿಂದುಳಿದ ಜಾತಿಗಳ ...ಮಾಜಿಕ ಗೌರವ ಮತ್ತು ಘನತೆಗಳನ್ನು ಎತ್ತಿಹಿಡಿಯುತ್ತಾ ...ತ್ತರ ಪ್ರದೇಶದ ಸಾಮಾಜಿಕ ಮತ್ತು ರಾಜಕೀಯ ...ಯವನ್ನು ಒಂದಷ್ಟು ಪ್ರಜಾತಾಂತ್ರಿಕಗೊಳಿಸಿದ್ದವು. (ಅದೇ ...ಯದಲ್ಲಿ ಅವೆರಡರ ನಡುವೆ ಅಂತರ್ ವೈರುಧ್ಯಗಳಿ...ದ್ದೂ ವಾಸ್ತವವೇ.) ಇತ್ತೀಚೆಗೆ ಅಲ್ಲಿ ಭಾರತೀಯ ...ತಾ ಪಕ್ಷವು (ಬಿಜೆಪಿ) ಚುನಾವಣಾ ವಿಜಯವನ್ನು ...ಸಿ ಠಾಕೂರ್ ಜಾತಿಯ ಯೋಗಿ ಆದಿತ್ಯನಾಥರನ್ನು ...ಖ್ಯಮಂತ್ರಿಯಾಗಿ ನೇಮಕ ಮಾಡಿರುವುದರಿಂದ ಅಲ್ಲಿ ... ರಾಜಕೀಯ ಅಧಿಕಾರವು ಮೇಲ್ಜಾತಿಗಳ ಕೈಗೆ ...ಕಿದಂತಾಗಿದೆ. ಇದರಿಂದ ಉತ್ತೇಜಿತರಾಗಿರುವ ಠಾಕೂರ್ ...ೂ ಮತ್ತಿತರ ಮೇಲ್ಜಾತಿಗಳು ತಮ್ಮ ಮೇಲಾಳ್ತನವನ್ನು ...ರ್ ಸ್ಥಾಪಿಸಲು ಈ ರಾಜಕೀಯ ಸಂದರ್ಭವನ್ನು ...ಕೊಳ್ಳುತ್ತಿವೆ.

ಸಹರಾನ್‌ಪುರ್ ಜಿಲ್ಲೆಯ ಶಬ್ಬೀರ್‌ಪುರದ ...ವ-ದಲಿತರು 2017ರ ಏಪ್ರಿಲ್ 20 ರಂದು ...ಬೇಡ್ಕರ್ ಜಯಂತಿಯ ಸಂದರ್ಭದಲ್ಲಿ ಅಂಬೇಡ್ಕರ್ ...ಮೆಯೊಂದನ್ನು ಸ್ಥಾಪಿಸಲು ಮುಂದಾದಾಗ ಮೊಟ್ಟ...ದಲ ಘರ್ಷಣೆ ಸಂಭವಿಸಿತು. ಅಂಬೇಡ್ಕರ್ ಜಯಂತಿಗೆ ...ತ್ತು ಪ್ರತಿಮೆ ಸ್ಥಾಪನೆಗೆ ಬೇಕಾದ ಆಡಳಿತಾತ್ಮಕ ...ಮತಿಯನ್ನು ತೆಗೆದುಕೊಂಡಿಲ್ಲವೆಂಬುದು ಮಾತ್ರವಲ್ಲದೆ ...ಬೇಡ್ಕರ್ ಪ್ರತಿಮೆಯ ತೋರುಬೆರಳು ಮೇಲ್ಜಾತಿಗಳ ...ಗಳ ಕಡೆಗೆ ಬೊಟ್ಟುಮಾಡಿದ್ದೂ ಸಹ ಠಾಕೂರರ ...ರೋಧಕ್ಕೆ ಕಾರಣವಾಯಿತು. ಎರಡನೆ ಘರ್ಷಣೆಯು ...ಜ್ಜಾತಿ ಠಾಕೂರರು ಮಧ್ಯಯುಗೀನ ದೊರೆ ಮಹಾರಾಣಾ ...ಪನ ನೆನಪಿನಲ್ಲಿ 2017ರ ಮೇ 5 ರಂದು ಮೆರವಣಿಗೆ ಹೊರಟಾಗ ಸಂಭವಿಸಿತು. ಆ ಮೆರವಣಿಗೆಯು ದಲಿತರ ಕಾಲೋನಿಯನ್ನು ಪ್ರವೇಶಿಸಿದಾಗ ದಲಿತರೂ ಸಹ ಈ ಮೆರವಣಿಗೆಗೆ ಆಡಳಿತಾತ್ಮಕ ಅನುಮತಿ ತೆಗೆದುಕೊಂಡಿಲ್ಲವೆಂಬ ಕಾರಣವನ್ನು ಮುಂದೊಡ್ಡಿ ಮೆರವಣಿಗೆಯನ್ನು ತಡೆದರು. ಈ ಬಾರಿ ನಡೆದ ಘರ್ಷಣೆಯಲ್ಲಿ ಎರಡೂ ಕಡೆಯವರು ಕಲ್ಲು ತೂರಾಟ ನಡೆಸಿದರು. ಆದರೆ ಠಾಕೂರರು ಪುಂಡಾಟವನ್ನು ಮುಂದುವರೆಸಿ ಹಲವಾರು ದಲಿತರ ಮನೆಗಳಿಗೆ ಮತ್ತು ಅಂಗಡಿಗಳಿಗೆ ಬೆಂಕಿ ಹಚ್ಚಿದ್ದು ಮಾತ್ರವಲ್ಲದೆ ಹಲವಾರು



ದಲಿತ ನಾಯಕರ ಪ್ರತಿಮೆಗಳನ್ನು, ಪೂಜಾಸ್ಥಳಗಳನ್ನು ವಿರೂಪಗೊಳಿಸಿದರು. ಈ ಹಿಂಸಾಚಾರದಲ್ಲಿ ಒಬ್ಬ ಠಾಕೂರ್ ಯುವಕ ಮೃತನಾದದ್ದಲ್ಲದೆ, ಎರಡೂ ಸಮುದಾಯಗಳಿಗೆ ಸೇರಿದ ಹಲವಾರು ಯುವಕರು ಗಂಭೀರವಾಗಿ ಗಾಯಗೊಂಡರು ಮತ್ತು ಹಿಂಸಾಚಾರಗಳು ಮತ್ತಷ್ಟು ಹೆಚ್ಚುವ ಭಯದಲ್ಲಿ ದಲಿತರು ಸಾಮೂಹಿಕವಾಗಿ ಹಳ್ಳಿಯನ್ನು ತೊರೆದು ಓಡಿಹೋದರು.

ಸಹರಾನ್‌ಪುರ್ ಜಿಲ್ಲೆಯು ಸಾಮಾಜಿಕವಾಗಿ ಉದ್ರಿಕ್ತ ಸ್ಥಿತಿಯಲ್ಲಿರುವ ಜಿಲ್ಲೆಯೆಂದೇ ಪರಿಗಣಿಸಲ್ಪಟ್ಟಿದ್ದು ಠಾಕೂರ್ ಮತ್ತು ದಲಿತರ ನಡುವೆ ಮಾತ್ರವಲ್ಲದೆ ಹಿಂದೂ ಮತ್ತು ಮುಸ್ಲಿಮರ ನಡುವೆಯೂ ಘರ್ಷಣೆಗಳು ಸಂಭವಿಸುತ್ತಿರುತ್ತವೆ. ಈ ಉದ್ವಿಗ್ನ ಪರಿಸ್ಥಿತಿಯು ರಾಜಕೀಯ ರಂಗದಲ್ಲೂ ಪ್ರತಿಫಲಿತಗೊಂಡಿದ್ದು, ಆ ಕ್ಷೇತ್ರದ ಸಂಸತ್ ಕ್ಷೇತ್ರವನ್ನು ಬಿಜೆಪಿ ಗೆದ್ದುಕೊಂಡಿದ್ದರೆ, ಶಾಸನಸಭಾ ಸ್ಥಾನವನ್ನು ಕಾಂಗ್ರೆಸ್-ಎಸ್‌ಪಿ ಮೈತ್ರಿಕೂಟ ಗೆದ್ದುಕೊಂಡಿದೆ. ಮುನಿಸಿಪಲ್ ಚುನಾವಣೆ ಮುಂದಿನ ತಿಂಗಳು ನಡೆಯಲಿದೆ. ಸಹರಾನ್‌ಪುರ್‌ನ ಜನಸಂಖ್ಯೆಯಲ್ಲಿ ಕೆಳಜಾತಿಗಳೇ ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ದಲಿತರು ಶೇ.26ರಷ್ಟಿದ್ದರೆ ಠಾಕೂರರು ಶೇ.10ರಷ್ಟು ಮಾತ್ರವಿದ್ದಾರೆ. ಆದರೆ ಶಬ್ಬೀರ್‌ಪುರ್ ಗ್ರಾಮದಲ್ಲಿ ಶೇ.60ರಷ್ಟು ಠಾಕೂರರಿದ್ದರೆ ಶೇ.15ರಷ್ಟು ಮಾತ್ರ ದಲಿತರಿದ್ದಾರೆ. ಬಿಎಸ್‌ಪಿ ಮತ್ತು ಎಸ್‌ಪಿ ಪಕ್ಷಗಳ ಬೆಳವಣಿಗೆಯು ದಮನಿತ ಜಾತಿಗಳ ಮತಗಳ ತಳಹದಿಯನ್ನು ಗಟ್ಟಿಗೊಳಿಸಿದ್ದು ಮಾತ್ರವಲ್ಲದೆ ಸಾಮಾಜಿಕ ಮೇಲ್ಚಲನೆಯ ಸಾಧ್ಯತೆಗಳನ್ನೂ ವಿಸ್ತರಿಸಿತ್ತು. ಆದರೆ ಕ್ರಮೇಣ ಈ ಪಕ್ಷಗಳ ಭವಿಷ್ಯಕ್ಕೆ ಮಂಕು ಕವಿಯುತ್ತಿದೆ. ಆದರೂ ಈ ಪಕ್ಷಗಳು ಮಾಡಿದ ನಿರಂತರ ರಾಜಕೀಯ ಒಟ್ಟೋಣವು ದಮನಿತ ಸಮುದಾಯಗಳಲ್ಲಿ ಒಂದು ಸ್ವತಂತ್ರವಾದ ಮತ್ತು ಸಿದ್ಧಾಂತಗಳಿಂದ ಪ್ರೇರಿತವಾದ ಸ್ವಪ್ರತಿಪಾದನೆಯನ್ನು ಹುಟ್ಟುಹಾಕಿದಂತೆ ಕಾಣುತ್ತದೆ. ಜಾತವರು ಸಾಂಪ್ರದಾಯಿಕವಾಗಿ ದಲಿತ ಭಕ್ತಿ ಪಂಥೀಯ ಸಂತನಾದ ಸಂತ ರವಿದಾಸರ ಅನುಯಾಯಿಗಳಾಗಿದ್ದು ಬಲವಾದ ಅಂಬೇಡ್ಕರ್‌ವಾದಿಗಳಾಗಿ ಬದಲಾಗಿದ್ದಾರೆ. ಸಾಲುಸಾಲು ಅಂಬೇಡ್ಕರ್ ಜಯಂತಿಗಳು, ಅಂಬೇಡ್ಕರ್ ಪ್ರತಿಮೆ ಮತ್ತು ಪೋಸ್ಟರ್‌ಗಳು ಎಲ್ಲೆಡೆ ಹರಡುತ್ತಿರುವುದರಲ್ಲಿ ಮತ್ತು ಹಿಂದೂಧರ್ಮದಿಂದ ಮತಾಂತರಗೊಳ್ಳುತ್ತಿರುವುದರಲ್ಲಿ ಇದು ಸ್ಪಷ್ಟವಾಗಿ ಎದ್ದುಕಾಣುತ್ತದೆ.

ಇವುಗಳಲ್ಲಿ ಎಲ್ಲಕ್ಕಿಂತ ಎದ್ದುಕಾಣುವುದು ಭೀಮ್ ಆರ್ಮಿ(ಭೀಮ ಸೇನೆ)ಯ ಉದಯ. ಈ ಸಂಘಟನೆಯು ಜಾತಿ ಆಧಾರಿತ ಹಿಂಸಾಚಾರಗಳ ವಿರುದ್ಧ ಅದರಲ್ಲೂ ಶಬ್ಬೀರ್‌ಪುರ ಘರ್ಷಣೆಯ ವಿರುದ್ಧ ದಲಿತರ ಪ್ರತಿರೋಧಕ್ಕೆ ನಾಯಕತ್ವ ನೀಡುತ್ತಿರುವುದಲ್ಲದೆ ಪ್ರಭುತ್ವದ ನಿಷ್ಕ್ರಿಯತೆ ಮತ್ತು ಮಾಧ್ಯಮಗಳ ಸಂವೇದನಾಶೂನ್ಯತೆಯ ವಿರುದ್ಧವೂ ಹೋರಾಡುತ್ತಿದೆ. ಇದನ್ನು ಸಹರಾನ್‌ಪುರದ ಚಂದ್ರಶೇಖರ್ ಆಜಾದ್ "ರಾವಣ್" ಎಂಬ ಯುವ ವಕೀಲ ಸ್ಥಾಪಿಸಿದ್ದು, ಆ ವಲಯದಲ್ಲಿ ದಲಿತರ ಮೇಲೆ ಎಲ್ಲೇ ಹಿಂಸಾಚಾರಗಳು ನಡೆದರೂ ಕೂಡಲೇ ಮಧ್ಯಪ್ರವೇಶಿಸುವ ಮೂಲಕ ಮತ್ತು ಹಿಂಸಾಚಾರಕ್ಕೆ ಕಾರಣರಾದ ಶಕ್ತಿಗಳ ಮತ್ತು ಪೊಲೀಸರ ವಿರುದ್ಧ ವೀರೋಚಿತವಾಗಿ ಸಂಘರ್ಷ ಮಾಡುವ ಮೂಲಕ ಈ ಭೀಮ್ ಆರ್ಮಿ ದಲಿತ ಯುವಕರಲ್ಲಿ ಅತ್ಯಂತ ಜನಪ್ರಿಯವಾಗುತ್ತಿದೆ. ರಾಜಕೀಯವಾಗಿ ಚುರುಕಾಗಿರುವ, ಸಂವಹನದಲ್ಲಿ ಚತುರರಾಗಿರುವ, ಮಾಧ್ಯಮ ನಿರ್ವಹಣೆಯಲ್ಲಿ ಜಾಣರಾಗಿರುವ ಮತ್ತು ಜಾತಿ ತಾರತಮ್ಯಗಳನ್ನು ಕಿಂಚಿತ್ತೂ ಸಹಿಸದ ಈ ಭೀಮ್ ಆರ್ಮಿ 1970ರ ದಶಕದಲ್ಲಿ ಮಹಾರಾಷ್ಟ್ರದಲ್ಲಿ ಹುಟ್ಟುಕೊಂಡಿದ್ದ ದಲಿತ್ ಪ್ಯಾಂಥರ್ಸ್ ಅನ್ನು ನೆನಪಿಗೆ ತರುತ್ತದೆ. ಬಿಎಸ್‌ಪಿ ಪಕ್ಷದ ಪರಂಪರೆಯನ್ನು ಒಪ್ಪಿಕೊಳ್ಳುವ ಮತ್ತು ಅದರ ಶಕ್ತಿ ಮತ್ತು ಮಿತಿಗಳೆರಡನ್ನೂ ಅರಿತುಕೊಂಡಿರುವ ಭೀಮ್ ಆರ್ಮಿ ಆ ಪಕ್ಷವನ್ನು ಹೊರದೂಡುವುದರ ಬದಲಿಗೆ ಅದರ ಜೊತೆಜೊತೆಗೇ ತನ್ನ ಅಸ್ತಿತ್ವವನ್ನು ಕಾಣಬಯಸುತ್ತದೆ. ಉತ್ತರ ಪ್ರದೇಶದ ಪೊಲೀಸರು ಭೀಮ್ ಆರ್ಮಿಯನ್ನು ಸಮಾಜ ವಿರೋಧಿ ಮಾತ್ರವಲ್ಲ ಪ್ರಭುತ್ವ ವಿರೋಧಿ ಸಂಘಟನೆಯೆಂದು ಪಟ್ಟಿ ಕಟ್ಟಲು ಪ್ರಯತ್ನಿಸುತ್ತಿದೆ. ಆದರೆ ಭೀಮ್ ಆರ್ಮಿಯ ಹುಟ್ಟನ್ನು ಉತ್ತರ ಪ್ರದೇಶದ ಎರಡು ಸಾಮಾಜಿಕ ವಾಸ್ತವಗಳ ಹಿನ್ನೆಲೆಯಲ್ಲೇ ಅರ್ಥಮಾಡಿಕೊಳ್ಳಬೇಕಿದೆ. ಅದು ಉತ್ತರ ಪ್ರದೇಶದ ದಲಿತರು ದಿನನಿತ್ಯ ಎದುರಿಸುವ ಹಿಂಸಾಚಾರ ಮತ್ತು ಬಹಿಷ್ಕಾರಗಳು ಹಾಗೂ ಆ ರಾಜ್ಯದ ಸಾರ್ವಜನಿಕ ವಲಯದಲ್ಲಿ ಹೆಚ್ಚುತ್ತಿರುವ ಅಪರಾಧೀಕರಣ. ಇವೆರಡು ಸಾಧ್ಯವಾಗುತ್ತಿರುವುದು ಆ ಪ್ರದೇಶದಲ್ಲಿ ಜಾತಿ-ವರ್ಗ-ಪ್ರಭುತ್ವಗಳ ಮೈತ್ರಿಕೂಟಗಳ ಕೃಪಾಶೀರ್ವಾದದಿಂದ.

ಮೇಲ್ಜಾತಿಗಳಿಗಂತೂ ಅವರು ನಿರೀಕ್ಷಿಸುತ್ತಿದ್ದ ಆ ರಾಜಕೀಯ ಸುಸಂದರ್ಭ ಒದಗಿಬಂದಿದೆ.

ಒಬ್ಬ ದುಸ್ಸಾಹಸಿ ದುರಭಿಮಾನಿಯೊಬ್ಬನ ಕೈಯಲ್ಲಿ ಅಧಿಕಾರದ ಚುಕ್ಕಾಣಿಯಿರುವುದರಿಂದ ಠಾಕೂರರಂಥ ಮೇಲ್ಜಾತಿಗಳು ಅಂತಿಮವಾಗಿ ತಮ್ಮ ಕಳೆದುಹೋದ ತಮ್ಮ ಧಾರ್ಮಿಕ ಮತ್ತು ಭೌತಿಕ ಮೇಲಧಿಕಾರವನ್ನು ಪುನರ್‌ಸ್ಥಾಪಿಸಿಕೊಳ್ಳಲು ಬೇಕಾದ ರಾಜಕೀಯ ಬೆಂಬಲವನ್ನು ಕಂಡುಕೊಂಡಿದ್ದಾರೆ. ಠಾಕೂರ್ ಸಮುದಾಯವನ್ನು ತಮ್ಮೆಡೆಗೆ ಸೆಳೆದುಕೊಳ್ಳುವ ತಂತ್ರದ ಭಾಗವಾಗಿಯೇ ಬಿಜೆಪಿಯು ಮಹಾರಾಣಾ ಪ್ರತಾಪನನ್ನು ಒಬ್ಬ ಸ್ಥಳೀಯ ಮತ್ತು ಸಾಂಸ್ಕೃತಿಕ ನಾಯಕನನ್ನಾಗಿ ಸಂಭ್ರಮಾಚರಣೆಗಳನ್ನು ಮಾಡುವುದನ್ನು ಪ್ರೋತ್ಸಾಹಿಸುತ್ತಾ ಬಂದಿದೆ. ಇದು ಹೆಚ್ಚುತ್ತಿರುವ ಕೃಷಿ ಬಿಕ್ಕಟ್ಟಿನಿಂದ ಮತ್ತು ಕೆಳಜಾತಿಗಳ ಮುನ್ನಡೆಯಿಂದ ಅಸಮಾಧಾನಗೊಂಡಿರುವ ಮೇಲ್ಜಾತಿಗಳನ್ನು ತನ್ನ ತೆಕ್ಕೆಗೆ ತೆಗೆದುಕೊಳ್ಳಲು ಬಿಜೆಪಿ ದೇಶಾದ್ಯಂತ ಅನುಸರಿಸುತ್ತಿರುವ ಕಾರ್ಯತಂತ್ರದ ಭಾಗವೇ ಆಗಿದೆ. ಶಬ್ಬೀರ್‌ಪುರದ ಘಟನೆಗಳು ಇದಕ್ಕೆ ಪುರಾವೆಯನ್ನೊದಗಿಸುತ್ತವೆ. ಅಲ್ಲಿ ಠಾಕೂರರು ದಾಳಿ ಮಾಡಿದ್ದು ಜಾತವ ದಲಿತರ ಅನನ್ಯತೆ ಮತ್ತು ಮೇಲ್ಚಲನೆಯ ಪ್ರತೀಕಗಳಾಗಿದ್ದ ಭೌತಿಕ ಆಸ್ತಿಪಾಸ್ತಿ ಮತ್ತು ಸಾಂಸ್ಕೃತಿಕ ಪ್ರತಿಮೆಗಳ ಮೇಲೆ. ಇದು ದಲಿತರನ್ನು ಎಲ್ಲಿಡಬೇಕೋ ಅಲ್ಲಿಡಬೇಕು ಅನ್ನುವ ಉದ್ದೇಶದಿಂದ ದಲಿತರ ಮೇಲೆ ಸಾಮಾನ್ಯವಾಗಿ ನಡೆಸುವ ಮತ್ತೊಂದು ಹಿಂಸಾಚಾರದಂತೆ ಆಗದಿರಲು ಪ್ರಧಾನ ಕಾರಣ ಭೀಮ್ ಆರ್ಮಿಯ ಮಧ್ಯ ಪ್ರವೇಶ ಮತ್ತು ನ್ಯಾಯ ಸಿಗುವತನಕ ಹಳ್ಳಿಗೆ ಹಿಂತಿರುಗುವುದಿಲ್ಲವೆಂದು ಹಠ ತೊಟ್ಟಿರುವ ಶಬ್ಬೀರ್‌ಪುರ ದಲಿತರ ನಿರ್ಧಾರ.

ಆದಿತ್ಯನಾಥರ ಮುಸ್ಲಿಮ್ ವಿರೋಧಿ ಹಿನ್ನೆಲೆ ಬಲ್ಲವರಿಗೆ ಉತ್ತರ ಪ್ರದೇಶದಲ್ಲಿ ಬಿಜೆಪಿಯು ಗೆದ್ದ ನಂತರ ಕೋಮು ಉದ್ವಿಗ್ನ ಪರಿಸ್ಥಿತಿಯು ನಿರ್ಮಾಣಗೊಳ್ಳುವುದರ ಬಗ್ಗೆ ಸಂಶಯವೇನೂ ಇರಲಿಲ್ಲ, ಆದರೆ ಅವರ ಅಧಿಕಾರಾವಧಿಯ ಪ್ರಾರಂಭದ ದಿಸೆಯಲ್ಲೇ ಜಾತಿ ಧ್ರುವೀಕರಣಗಳು ಇಷ್ಟು ಬೇಗ ಸಂಭವಿಸುತ್ತಿರುವುದು ಉತ್ತರ ಪ್ರದೇಶದ ಜನರಿಗೆ ಮಾತ್ರವಲ್ಲದೆ ಬಿಜೆಪಿಗೂ ಸಹ ತಲೆ ಬಿಸಿ ಮಾಡುವ ಅಪಾಯದ ಗಂಟೆಯಾಗಿದೆ. ಈ ಬೆಳವಣಿಗೆಗಳ ದೀರ್ಘ ಕಾಲೀನ ರಾಜಕೀಯ ಪರಿಣಾಮಗಳ ಬಗ್ಗೆ ಈಗಲೇ ಸ್ಪಷ್ಟ ಚಿತ್ರಣವು ಸಿಗುತ್ತಿಲ್ಲ, ಆದರೆ "ಚುನಾವಣೆ ಸಮಯದಲ್ಲಿ ನಾವು ಹಿಂದೂಗಳು; ಆ ನಂತರ ನಾವು ದಲಿತರು" ಎಂಬ ಚಂದ್ರಶೇಖರ್ ಅವರ ಹೇಳಿಕೆಯಲ್ಲಿ ವ್ಯಕ್ತವಾಗಿರುವ ದಲಿತ ಅಸಮಾಧಾನದ ಆಕ್ರಮಶೀಲ ಪ್ರತಿಕ್ರಿಯೆಗಳು ಬಿಜೆಪಿಯ ವಿರುದ್ಧ ಒಂದು ಪ್ರತಿರೋಧದ ಅಲೆಯನ್ನು ಹುಟ್ಟಿಸಬಲ್ಲ ಸಾಧ್ಯತೆಯ ಸೂಚನೆಯನ್ನಂತೂ ನೀಡುತ್ತಿದೆ. ■

!⏮


...ಸ್ಕಿಲಿಂಗ್ ಇಂಡಿಯ ಯೋಜನೆಯಡಿ 2015-16 ...ಆಗಿರುವ ಗುರಿಸಾಧನೆ ಕೇವಲ ಶೇಕಡಾ 58. ಕೌಶಲ್ಯ ...ಪಡೆದವರ ಪೈಕಿ ಉದ್ಯೋಗ ದೊರೆತಿರುವವರ ಸಂಖ್ಯೆ ...ಡಾ 12ಕ್ಕಿಂತಲೂ ಕಡಿಮೆ ಇದೆ. ಆರ್ಥಿಕ ಸಹಕಾರ ...ಮತ್ತು ಅಭಿವೃದ್ಧಿ ಸಂಸ್ಥೆ (Organisation of Economic Cooperation and Development, OECD) ಪ್ರಕಾರ ಭಾರತದಲ್ಲಿ ... 15ರಿಂದ 29ರ ಹರೆಯದ ಶೇಕಡಾ 30ಕ್ಕೂ ... ಯುವಜನತೆ ಉದ್ಯೋಗ, ಶಿಕ್ಷಣ ಅಥವಾ ತರಬೇತಿ ...ಗಳಲ್ಲಿ ಇಲ್ಲ (ಚೀನಾದಲ್ಲಿ ಕೇವಲ 11.2%).

...ಂದು ಉತ್ಪಾದನೆ, ನಿರ್ಮಾಣ, ವಾಣಿಜ್ಯ, ಸಾರಿಗೆ, ...ಟೆಲ್, ಐಟಿ/ಬಿಪಿಒ, ಶಿಕ್ಷಣ ಮತ್ತು ಆರೋಗ್ಯ ...ಗಳಲ್ಲಿ ಒಟ್ಟು ಸುಮಾರು 2 ಕೋಟಿ ಮಂದಿ ...ಮಾಡುತ್ತಿದ್ದಾರೆ. ಇಲ್ಲಿ 2011-12 ಮತ್ತು 2012-13ರ ಸಾಲಿನಲ್ಲಿ 7,40,000 ಉದ್ಯೋಗಗಳು ಸೃಷ್ಟಿಯಾಗಿದ್ದರೆ 2014-15 ಮತ್ತು 2015-16ರಲ್ಲಿ ಕೇವಲ 2,70,000 ಉದ್ಯೋಗಗಳು ಸೃಷ್ಟಿಯಾಗಿವೆ (ಶೇಕಡಾ 64ರಷ್ಟು ಇಳಿಕೆ). 2016-17ರಲ್ಲಿ 2.3 ಲಕ್ಷ ಹೊಸ ಉದ್ಯೋಗಗಳು ಸೃಷ್ಟಿಯಾಗಿವೆ ಎನ್ನಲಾಗಿದೆ. ಆದರೆ ಇದರ ಹಿಂದೆ ಏನೊ ಒಂದು ಆಟ ನಡೆದಿರುವಂತಿದೆ. 2015ರಲ್ಲಿ ಉತ್ಪಾದನಾ ಕ್ಷೇತ್ರದಲ್ಲಿ ಬರೀ ಶೇಕಡಾ 1.5 ಪ್ರಗತಿಯಾಗಿ ಕೇವಲ 1.5 ಲಕ್ಷ ಉದ್ಯೋಗಗಳಷ್ಟೆ ಸೃಷ್ಟಿಯಾದಾಗ ಮೋದಿ ಸರ್ಕಾರ ಒಂದು ಉಪಾಯ ಮಾಡಿತು. ಶಿಕ್ಷಣ, ಆರೋಗ್ಯ ಮತ್ತು ಹೋಟೆಲ್‌ಗಳಂತಹ ಪ್ರಮುಖ ಸೇವಾಕ್ಷೇತ್ರಗಳನ್ನು ಸೇರಿಸುವ ಮೂಲಕ ಸಂಘಟಿತ ಉದ್ದಿಮೆಯ ವ್ಯಾಪ್ತಿಯನ್ನು ವಿಸ್ತರಿಸಿತು. ಈ ರೀತಿಯಾಗಿ ಸೇವಾಕ್ಷೇತ್ರದಲ್ಲಿ ಆದ ಬೆಳವಣಿಗೆಯನ್ನು ತನಗನುಕೂಲವಾಗುವಂತೆ ಬಳಸಿಕೊಂಡಿತು. 2016ರಲ್ಲಿ ಹೊಸ ಉದ್ಯೋಗಗಳ ಸಂಖ್ಯೆ 2.3 ಲಕ್ಷಕ್ಕೆ ಏರಿರುವುದರ ಹಿಂದಿನ ಗುಟ್ಟು ಇದೇ ಆಗಿದೆ! ಏಕೆಂದರೆ ಈ ಹೊಸ ಉದ್ಯೋಗಗಳಲ್ಲಿ ಹೆಚ್ಚು ಕಡಿಮೆ ಅರ್ಧದಷ್ಟು ಶಿಕ್ಷಣ ಮತ್ತು ಆರೋಗ್ಯ ಕ್ಷೇತ್ರಗಳಲ್ಲಿವೆ! ಸುಮಾರು ಒಂದು ಕೋಟಿ ಉದ್ಯೋಗಿಗಳಿರುವ ಉತ್ಪಾದನಾ ಕ್ಷೇತ್ರದಲ್ಲಿಯೂ ಗಣನೀಯ ಪ್ರಮಾಣದಲ್ಲಿ ಹೊಸ ಉದ್ಯೋಗಗಳು ಸೃಷ್ಟಿಯಾಗಿವೆ ಎನ್ನಲಾಯಿತು. ಆದರೆ ಈ ಹೆಚ್ಚಳ ಆಗಿರುವುದು ಕೊನೆಯ ಮೂರು ತಿಂಗಳುಗಳಲ್ಲಿ ನೋಟು ರದ್ದತಿಯ ಕಾಲದಲ್ಲಿ ಎಂಬುದನ್ನು ಗಮನಿಸಬೇಕು. ಲಕ್ಷಾಂತರ ಮಂದಿ ಉದ್ಯೋಗ ಕಳೆದುಕೊಂಡಿದ್ದ ಆ ಕಾಲದಲ್ಲಿ ಹೆಚ್ಚಳ ಆಗಿದೆ ಎನ್ನುವುದು ಭಾರಿ ಅನುಮಾನಾಸ್ಪದವಾಗಿದೆ.


ಔದ್ಯಮಿಕ ಉತ್ಪಾದನೆಯ ಸೂಚ್ಯಂಕ (Index of Industrial Production, IIP) ಅಂಕಿಅಂಶಗಳು ಹೇಳುವಂತೆ ಜನವರಿ 2015ರಿಂದ ಜನವರಿ 2017ರ ತನಕ ಉತ್ಪಾದನೆಯಲ್ಲಿ ಆಗಿರುವ ಹೆಚ್ಚಳ ಬರೀ 1%. ಇನ್ನು ಭಾರತೀಯ ರಿಸರ್ವ್ ಬ್ಯಾಂಕು ಪ್ರಕಾರ ಬ್ಯಾಂಕುಗಳು ಉದ್ದಿಮೆಗಳಿಗೆ ನೀಡುವ ಸಾಲಗಳಲ್ಲಿ ಕೇವಲ 0.3 ಪ್ರತಿಶತ ಹೆಚ್ಚಳ ಆಗಿದೆ. 2015-16ರಲ್ಲಿ ಒಟ್ಟು ಮೌಲ್ಯವರ್ಧನೆ (gross value added, GVA) ಶೇಕಡಾ 7.8ರಷ್ಟಿದ್ದರೆ 2016-17ರಲ್ಲಿ ಅದು 6.7ಕ್ಕೆ ಇಳಿದಿದೆ. ಇದರರ್ಥ ಏನೆಂದರೆ ಕಾರ್ಪೊರೇಟುಗಳು ಹೊಸಹೊಸ ಉತ್ಪಾದನಾ ವ್ಯವಸ್ಥೆಗಳಲ್ಲಿ ಹೂಡಿಕೆ ಮಾಡುತ್ತಿಲ್ಲ. ವಾಸ್ತವ ಹೀಗಿರುವಾಗ ಉದ್ಯೋಗಗಳಲ್ಲಿ ಹೆಚ್ಚಳ ಆಗುವುದಾದರೂ ಹೇಗೆ? ಎಲ್ಲಿಂದ? ಅಸಲಿಗೆ ಇಂದು ಐಟಿ, ಟೆಲಿಕಾಂ, ಬ್ಯಾಂಕಿಂಗ್ ಹಾಗೂ ಆರ್ಥಿಕ ಸೇವಾ ವಲಯಗಳಲ್ಲಿ ನೌಕರಿ ಕಡಿತ ಪ್ರಾರಂಭವಾಗಿದ್ದು ಮುಂದಿನ 12-18 ತಿಂಗಳುಗಳಲ್ಲಿ ಸುಮಾರು 10 ಲಕ್ಷ ಮಂದಿ ಕೆಲಸ ಕಳೆದುಕೊಳ್ಳಲಿದ್ದಾರೆ ಎಂದು ವಿಶ್ಲೇಷಕರು ಅಂದಾಜಿಸಿದ್ದಾರೆ.

ಕೊನೆಯದಾಗಿ ಕಳೆದ ಮೂರು ವರ್ಷಗಳಲ್ಲಿ ಮೋದಿ ಸರ್ಕಾರದ ಸಾಧನೆಯನ್ನು ಸಂಕ್ಷಿಪ್ತವಾಗಿ ಒಂದೇ ಶಬ್ದದಲ್ಲಿ ಹೇಳಬಹುದು: ದುರಾಡಳಿತ. ■

ವರ್ಮಾ ಮತ್ತು ನಕಲಿ ಕನ್ನಡ ಅಭಿಮಾನಿಗಳ



ಚಲಚಿತ್ರ ನಿರ್ಮಾಪಕ ರಾಮ್ ಗೋಪಾಲ್ ವರ್ಮಾ "ಕನ್ನಡಿಗರೆಲ್ಲಾ ಅಭಿಮಾನ ಶೂನ್ಯರು. ಹಾಗಾಗಿ ಬಾಹುಬಲಿ-2 ತೆಲುಗು ಭಾಷೆಯಲ್ಲಿಯೇ ಕರ್ನಾಟಕದಲ್ಲಿ ಭರ್ಜರಿ ಯಶ ಗಳಿಸಲು ಸಾಧ್ಯವಾಗಿದ್ದು" ಎಂದು ಹೇಳಿದ್ದು ಅಷ್ಟುಟ ಸತ್ಯವಾಗಿದ್ದರೂ ಅದು ಕೆಲವರ ಕಣ್ಣು ಕೆಂಪಾಗಿಸಿ ದೆಯಂತೆ. ಕಾರಣ ಬಿಜೆಪಿಯಲ್ಲಿ ನಕಲಿ ದೇಶಭಕ್ತರಿರುವಂತೆ ಕರ್ನಾಟಕದಲ್ಲಿ ಅನೇಕ ನಕಲಿ ಕನ್ನಡ ಅಭಿಮಾನಿಗಳಿದ್ದಾರೆ.



ಬೆಂಗಳೂರಿನ ಕನ್ನಡ ಸಂಘಟನೆಗಳ ನಕಲಿ ಕನ್ನಡ ಅಭಿಮಾನ ಮೂರು ದಶಕಗಳಿಂದ ನಾನು ನೋಡಿದ್ದೇನೆ. ಹಣ ಹಾಗೂ ಪ್ರಚಾರ ಸಿಗುವ ಛಾನ್ಸ್ ಇದ್ದಾಗ ಮಾತ್ರ ಅವರ ಕನ್ನಡ ಅಭಿಮಾನ ಜಾಗೃತವಾಗುವುದು. ನಾನು ಗಡಿನಾಡು ಬೆಳಗಾವಿ ಜಿಲ್ಲೆಯಲ್ಲಿ ಹುಟ್ಟಿ ಬೆಳೆದಿದ್ದರಿಂದ ಅಲ್ಲಿ ಮರಾಠಿಗರ ಸಂಕುಚಿತ ಬುದ್ಧಿ ನೋಡಿ ನೋಡಿ ನನ್ನ ಕನ್ನಡ ಅಭಿಮಾನ 'ದುರಭಿಮಾನ' ಎನ್ನುವಷ್ಟು ಪ್ರಖರವಾಗಿ ಬೆಳೆದಿತ್ತು. ಮುಂಬೈಯಲ್ಲಿ ಉದ್ಯೋಗದಲ್ಲಿ ಇದ್ದಾಗಲೂ ನಮ್ಮ ಬ್ಯಾಂಕಿನ ನೌಕರರಲ್ಲಿಯ ಶಿವಸೇನೆ ವಿಭಾಗದವರ ವಿರೋಧವನ್ನೂ ಲೆಕ್ಕಿಸದೇ ನಾನು ಎಲ್ಲಾ ಬ್ಯಾಂಕುಗಳ ಕನ್ನಡ ಸಂಘಗಳೊಂದಿಗೆ ಉತ್ಸಾಹದಿಂದ ಕೆಲಸ ಮಾಡಿದ್ದೆ. ಆದರೆ ಕರ್ನಾಟಕದ ಅಭಿಮಾನದಿಂದ ನಾನು ಬೆಂಗಳೂರಿಗೆ ವರ್ಗ ಮಾಡಿಸಿಕೊಂಡು ಬಂದ ಮೇಲೆ ಅರಿವಾಯಿತು- ಇಲ್ಲಿಯ ಕನ್ನಡಿಗರಿಗಿಂತ ಮುಂಬಯಿಯ ಪರಭಾಷಿಗರೇ ಹೆಚ್ಚು ವಾಸಿ ಎಂದು.

ಬೆಂಗಳೂರಿಗೆ ಬಂದ ಮೇಲೆ ನಾನು ಕೆಲಸದಲ್ಲಿದ್ದ 'ಮುಂಬೈ ಮೂಲದ ಬ್ಯಾಂಕಿನಲ್ಲಿ' ನಾನು ಕನ್ನಡ ಅಭಿಮಾನ ತೋರಿಸಲು ಹೋಗಿ ಬೆಂಗಳೂರು ಕನ್ನಡಿಗರಿಂದಲೇ ವಿರೋಧ ಎದುರಿಸಬೇಕಾಯಿತು.

ಮೂಲತಃ ತೆಲುಗು ಚಲನಚಿತ್ರಗಳಿಗೆ ಕರ್ನಾಟಕ ಎರಡನೇ ಅತೀ ದೊಡ್ಡ ಮಾರುಕಟ್ಟೆ. ಅವಿಭಜಿತ ಆಂಧ್ರದ ನಂತರ ಕರ್ನಾಟಕವು ತೆಲುಗು ಚಿತ್ರಗಳಿಗೆ ಅತಿಹೆಚ್ಚು ಲಾಭ ತಂದು ಕೊಡುವ ರಾಜ್ಯ. ಆದಕ್ಕಾಗಿ ತೆಲುಗು ಚಿತ್ರಗಳ ಪ್ರಚಾರ ಕನ್ನಡ ಟಿವಿ ವಾಹಿನಿಗಳಲ್ಲಿ ಅತ್ಯಂತ ಹೆಚ್ಚು, ಕನ್ನಡ ಟಿವಿ ವಾಹಿನಿಗಳು ಕನ್ನಡ ಚಿತ್ರಗಳಿಗಿಂತ ತೆಲುಗು ಚಿತ್ರಗಳಿಗೆ ಹೆಚ್ಚು ಪ್ರಾಮುಖ್ಯತೆ ಕೊಡಲು ಕಾರಣ ಹಣದ ಆಸೆ. ತೆಲುಗು ನಿರ್ಮಾಪಕರು ಕನ್ನಡ ಟಿವಿ ವಾಹಿನಿಗಳಿಗೆ ತೆಲುಗು ಚಿತ್ರದ ಪ್ರಚಾರಕ್ಕೆ ಅತಿದೊಡ್ಡ ಮೊತ್ತ ಕೊಡುತ್ತಾರೆ. ಹಾಗಾಗಿ ಕನ್ನಡ ವಾಹಿನಿಗಳ ಕನ್ನಡ ಅಭಿಮಾನ ತೆಲುಗಿಗೆ ಒತ್ತೆಯಾಗಿ ಬಿಟ್ಟಿದೆ.

2008 ರಿಂದ 2011 ರ ನಡುವೆ ನಾನು ಕಾರ್ಯ ನಿಮಿತ್ತ ಹಲವಾರು ಬಾರಿ ಬೆಂಗಳೂರಿನಲ್ಲಿ ವಿಧಾನಸೌಧಕ್ಕೆ ಹೋಗಬೇಕಾಗಿ ಬಂದಿತ್ತು, ಕನ್ನಡಿಗರ ಅಧಿಕಾರ ಕೇಂದ್ರವಾದ ವಿಧಾನಸೌಧದಲ್ಲಿ ಆಗ ಹೆಚ್ಚಾಗಿ ತೆಲುಗು ಭಾಷೆಯೇ ನನಗೆ ಕೇಳಿಬರುತ್ತಿತ್ತು, ಅದರಲ್ಲೂ ಗಣಿಗಳ್ಳ ರೆಡ್ಡಿಗಳು ಮತ್ತು ಶ್ರೀರಾಮುಲು ವಿಧಾನಸೌಧಕ್ಕೆ ಬಂದರೆ ಮುಗಿಯಿತು, ಆಗ ವಿಧಾನಸೌಧದ ಮೂಲೆಮೂಲೆ ಯಲ್ಲೂ ಕೇವಲ ತೆಲುಗು ಮಾತ್ರ ಕೇಳಿಬರುತ್ತಿತ್ತು, ಅಧಿಕಾರಿಗಳು- ಗುಮಾಸ್ತರು-ಪೊಲೀಸರು ಎಲ್ಲರೂ ಆಗ ಕೇವಲ ತೆಲುಗು ಭಾಷೆಯಲ್ಲಿಯೇ ತಮ್ಮ ತಮ್ಮಲ್ಲೂ ಮಾತ ನಾಡಿ ಬಳ್ಳಾರಿ ಗಣಿಗಳ್ಳರನ್ನು ಮೆಚ್ಚಿಸಲು ಪ್ರಯತ್ನಿಸುತ್ತಿದ್ದರು! ಆಗೆಲ್ಲಾ ನಾನು ನಿಂತಿರುವುದು ಕರ್ನಾಟಕದ ವಿಧಾನ ಸೌಧದಲ್ಲೋ ಅಥವಾ ಆಂಧ್ರದ ವಿಧಾನಸೌಧ ದಲ್ಲೋ ಎಂಬ ಸಂಶಯ ನನಗೆ ಮೂಡುತ್ತಿತ್ತು.


ರಾಮಗೋಪಾಲ ವರ್ಮಾನ ಈಗಿನ ಚಾಟಿ ಏಟು ಕನ್ನಡಿಗರ ಸ್ವಾಭಿಮಾನ ಬಡಿದೆಬ್ಬಿಸುತ್ತದೆ ಎಂದು ಭಾವಿಸುವುದು ಸತ್ತ ಕುದುರೆ ಚಾಟಿ ಏಟಿಗೆ ಎದ್ದು ನಿಲ್ಲುತ್ತದೆ ಎಂದು ಭಾವಿಸಿದಷ್ಟೇ ಮೂರ್ಖತನದ್ದು. ಮೇಲಾಗಿ ಈಗ ಹಿಂದೂತ್ವವಾದಿಗಳ ಪ್ರಭಾವ ಕರ್ನಾಟಕದಲ್ಲಿ ಎಲ್ಲೆಡೆ ಹರಡುತ್ತಿದ್ದು, ಹಿಂದೂತ್ವವಾದಿಗಳಿಗೆ ಹಾಗೂ ಮೋದಿ ಭಕ್ತರಿಗೆ ತಮ್ಮ ಮಾತೃಭಾಷೆ ಕನ್ನಡಕ್ಕಿಂತ ಈಗ ಹಿಂದಿಯೇ ಹೆಚ್ಚು ಪ್ರಿಯವಾಗಿದೆ. ಹಾಗಾಗಿ ಮುಂದಿನ ವರ್ಷ ಬಿಜೆಪಿ ಅಧಿಕಾರಕ್ಕೆ ಬಂದರೆ ಕನ್ನಡದ ಅವನತಿ ನಿಶ್ಚಿತ.

-ರಾಮಕೃಷ್ಣ ಕುಲಾಲ್, ಬೆಂಗಳೂರು

ಪೇಜಾವರರೇ, ರಾಮಪ್ಪ ಶಂಭೂಕನನ್ನು ಕೊಂದಿದ್ದು ಯಾಕೆ?

ಕಟ್ಟಪ್ಪ ಬಾಹುಬಲಿಯನ್ನು ಯಾಕೆ ಕೊಂದಿದ್ದು ಎಂದು ಇತ್ತೀಚೆಗೆ ಗೊತ್ತಾಯಿತು. ಅಭಿಮಾನ ಶೂನ್ಯ ಕನ್ನಡಿಗರು ತೆಲುಗು ಚಿತ್ರವನ್ನು ಗೆಲ್ಲಿಸುವ ಸಲುವಾಗಿ ಕನ್ನಡ ಚಿತ್ರಗಳನ್ನು ಯಾಕೆ ಕೊಂದಿದ್ದು ಎಂಬುದು ಸಹ ಗೊತ್ತಾಯಿತು. ಆದರೆ ರಾಮ ಶಂಭೂಕನನ್ನು ಯಾಕೆ ಕೊಂದಿದ್ದು ಎಂದು ಮೂರು ಸಾವಿರ ವರ್ಷಗಳಿಂದ ಒಗಟಾಗಿಯೇ ಉಳಿದಿದೆಯಲ್ಲಾ ಪೇಜಾವರಶ್ರೀಗಳೇ.

ಮೊನ್ನೆ ಪೇಜಾವರ ಶ್ರೀಗಳು ತಮ್ಮ ಮಠದಲ್ಲಿಯೇ ವೀರಪ್ಪ ಮೊಯ್ಲಿಯವರ ಸಮ್ಮುಖದಲ್ಲಿ ಒಂದು ಧಾರ್ಮಿಕ ಸಭೆಯಲ್ಲಿ "ರಾಮ ಶಂಭೂಕನನ್ನು ಕೊಂದಿದ್ದು ಅವನು ತಪಸ್ಸು ಮಾಡಿದ್ದಕ್ಕಾಗಿ ಅಲ್ಲ, ಬೇರೆ ಕಾರಣಕ್ಕಾಗಿ ಕೊಂದಿದ್ದು ಎಂದು ಮಧ್ವಾಚಾರ್ಯರೇ ತಮ್ಮ ಗ್ರಂಥಗಳಲ್ಲಿ ಬಿಡಿಸಿ ಬಿಡಿಸಿ ಹೇಳಿದ್ದಾರೆ. ಮೇಲಾಗಿ ನಾನೇ ನೂರಾರು ಬಾರಿ ಈ ವಿಷಯದಲ್ಲಿ ಸ್ಪಷ್ಟೀಕರಣ ಕೊಟ್ಟಿದ್ದೇನೆ. ಆದರೂ ಬುದ್ಧಿಜೀವಿಗಳ ತಲೆಯಿಂದ ಅದು ಹೋಗುತ್ತಲೇ ಇಲ್ಲವಲ್ಲ" ಎಂದು ಅಲವತ್ತುಕೊಂಡರು ಪಾಪ.




ಆದ್ದರಿಂದ ಶೂದ್ರ ಶಂಭೂಕನ ವಿಷಯದಲ್ಲಿ ಇನ್ನು ಮೇಲೆ ಪೇಜಾವರಶ್ರೀಗಳಿಗೆ ಬುದ್ಧಿಜೀವಿಗಳಿಂದ ಯಾವುದೇ ಮಾನಸಿಕ ಕಿರುಕುಳ ಆಗಬಾರದು ಎಂಬ ಘನ ಉದ್ದೇಶಕ್ಕಾಗಿ ಕೊನೆಯ ಬಾರಿಗೆ ನಾವು ಕೇಳುತ್ತಿರುವುದು: "ಪೇಜಾವರ ಶ್ರೀಗಳೇ ಕೇವಲ ಇನ್ನು ಒಂದೇ ಒಂದು ಸಾರಿ ರಾಮ ಶಂಭೂಕನನ್ನು ಯಾವ ಕಾರಣಕ್ಕಾಗಿ ಕೊಂದಿದ್ದು ಎಂದು ಬಿಡಿಸಿ ಹೇಳಿ. ನಮ್ಮಂತಹ ದಡ್ಡ ಶೂದ್ರರ ತಲೆಯಲ್ಲಿರುವ ಸಸ್ಪೆನ್ಸ್ ಒಮ್ಮೆ ಶಾಶ್ವತವಾಗಿ ಪರಿಹರಿಸಿ ನಮ್ಮನ್ನು ಉದ್ಧರಿಸಿ ಬಿಡಿ ಸಾಕು. ನಿಮ್ಮ ಈ 'ಕೊನೆ ಹೇಳಿಕೆಯನ್ನು' ನಾವು ರಿಕಾರ್ಡ್ ಮಾಡಿಕೊಂಡು ಫೇಸ್‌ಬುಕ್‌ನಲ್ಲಿ ಹಾಕಿಬಿಡುತ್ತೇವೆ. ಅಲ್ಲಿ ಅದು ವೈರಲ್ ಆಗಿ ನಿಮಗೆ ಪ್ರಗತಿಪರರಿಂದ ಆಗುತ್ತಿರುವ ಮಾನಸಿಕ ಹಿಂಸೆ ಶಾಶ್ವತವಾಗಿ ಮುಕ್ತಾಯ ವಾಗುತ್ತದೆ. ಆದಕ್ಕಾಗಿ ಇನ್ನೊಂದು ಸಲ ಪ್ಲೀಸ್ ಹೇಳಿಬಿಡಿ- 'ಕಟ್ಟಪ್ಪ ಕ್ಷಮಿಸಿ, ರಾಮಪ್ಪ ಶಂಭೂಕನನ್ನು ಕೊಂದಿದ್ದು ಯಾಕೆ?'"

-ಹರೀಶ್ ಎಂ ರೈ, ಉಡುಪಿ

ದಲಿತರ ಮನೆಯಲ್ಲಿ ಉಂಡ ಮಾತ್ರಕ್ಕೆ ಕ್ರಾಂತಿ ಆದೀತೆ?

ಬಿಜೆಪಿ ನಾಯಕ ಬಿ.ಎಸ್.ಯಡಿಯೂರಪ್ಪ ದಲಿತರ ಮನೆಗೆ ಹೋಗಿ ಊಟ ಮಾಡಿದ ವಿಷಯ ಈಗ ಹೆಚ್ಚು ಸದ್ದು ಮಾಡುತ್ತಿದೆ. ಇದನ್ನೆ ಮಹಾನ್ ಕ್ರಾಂತಿಯೆಂಬಂತೆ ಅವರ ಬೆಂಬಲಿಗರು ಕುಣಿಯುತ್ತಿದ್ದಾರೆ. ಯಡಿಯೂರಪ್ಪ ದಲಿತರ ಮನೆಯಲ್ಲಿ ಊಟ-ತಿಂಡಿ ಮಾಡುವ ಘೋಷಣೆ





ಯೊಂದಿಗೆ ಹೊರಟಿದ್ದು, ಇದರ ಬೆನ್ನಲ್ಲಿ ಹಲವು ಪ್ರಶ್ನೆಗಳು ಈಗ ತಲೆ ಎತ್ತಿವೆ. ದಲಿತರನ್ನು ಸಾಮಾಜಿಕ, ಅಧಿಕಾರ ರಾಜಕಾರಣ ಮತ್ತು ಸಾಂಸ್ಕೃತಿಕ ರಾಜಕಾರಣದ ಕಚ್ಚಾ ಸರಕಿನಂತೆ ಇಂದಿಗೂ ಪರಿಭಾವಿಸಿಕೊಂಡು ಬರಲಾಗುತ್ತಿದೆ. ಇತಿಹಾಸವನ್ನು ಗಮನಿಸುತ್ತಾ ಹೋದರೆ ಸಂವಿಧಾನದ ಕಾರಣ ದಲಿತರಿಗೆ ರಾಜಕೀಯ ಕ್ಷೇತ್ರದಲ್ಲಿ ಪ್ರಾತಿನಿಧ್ಯ ದಕ್ಕುತ್ತಿದೆಯೇ ವಿನಃ, ಸಾಂಸ್ಕೃತಿಕ ಮತ್ತು ಸಾಮಾಜಿಕ ಕ್ಷೇತ್ರಗಳಲ್ಲಿ ಅವರಿನ್ನೂ 'ಹೊರಗುಳಿದವರೇ' ಆಗಿದ್ದಾರೆ.

ಯಡಿಯೂರಪ್ಪ ಈಗ ದಲಿತರ ಮನೆಯಲ್ಲಿ ಊಟ ಮಾಡುವುದನ್ನೇ ಒಂದು ಅಜೆಂಡಾವಾಗಿ, ಕಾರ್ಯಕ್ರಮವಾಗಿ ರೂಪಿಸಿಕೊಂಡು ಹೊರಟಿರುವುದನ್ನು ಗಮನಿಸಿದಾಗ ಕೆಲವು ಸಂಗತಿಗಳು ಬಯಲಾಗುತ್ತವೆ.

* 12ನೇ ಶತಮಾನದ ಬಸವಣ್ಣನವರ ಸಾಮಾಜಿಕ ಸುಧಾರಣೆ ಮತ್ತು ಸಾಂಸ್ಕೃತಿಕ ಚಳವಳಿಯ ಮಾತಿರಲಿ, ಸ್ವಾತಂತ್ರ್ಯ ಬಂದು ಮುಕ್ಕಾಲು ಶತಮಾನ ಕಳೆಯುತ್ತಿದ್ದರೂ ಇಂದಿಗೂ ದಲಿತರ ಮನೆಗಳಿಗೆ ಹೋಗುವುದನ್ನು, ಅಲ್ಲಿ ಉಣ್ಣುವುದನ್ನು 'ಒಳಗೊಳ್ಳುವ' (?) ಉದಾತ್ತ ನಡೆ ಎಂದು ಭಾವಿಸುವುದಾದರೆ ಇಂದಿಗೂ ದಲಿತರನ್ನು ಹೊರಗಿಟ್ಟ ಮನೋಧರ್ಮ ಜೀವಂತವಾಗಿದೆ ಎಂದರ್ಥ ಅಲ್ಲವೆ?
* ಯಡಿಯೂರಪ್ಪನವರಷ್ಟೇ ಅಲ್ಲ ಬೇರ್‍ಯಾವ ಮೇಲ್ವರ್ಗದ ಪಂಕ್ತಿಯಲ್ಲಿರುವ ನಾಯಕನೂ ಜಾತಿಯ ನೆಲೆಯಲ್ಲಿ ತಾನು ದಲಿತರ ಮನೆಯಲ್ಲಿ ಉಂಡು ಬರುತ್ತೇನೆ, ದಲಿತರ ಕೇರಿಗಳಿಗೆ ಹೋಗಿಬರುತ್ತೇನೆ ಎಂದು ಹೇಳಿಕೊಳ್ಳು ವುದರಲ್ಲೇ ಆತನಿಗಿರಬಹುದಾದ ಸ್ವಜಾತಿಯ ಅಹಂನ್ನು ತೋರಿಸುತ್ತದೆ. ನಾನು ಶ್ರೇಷ್ಠ ಹೋಗುವ ಮನೆ ಕನಿಷ್ಠ ಎಂಬುದು ದಾರಿ ಸೂಚಕ ಕೈಮರದಂತೆ ಕಾಣುತ್ತಿದೆ. ಜೊತೆಗೆ, ಉತ್ತಮ ಜಾತಿಯವರೊಬ್ಬರು ತಮ್ಮ ಮನೆಗೆ ಬಂದು ತಮ್ಮನ್ನು ಕೃತಾರ್ಥರನ್ನಾಗಿಸಿಬಿಟ್ಟರು ಎಂಬ ಮುಗ್ಧ ಮನೋಭಾವದ ದಲಿತರು ಎಂದಿನಂತೆ ಜಾತಿಯ ಗುಲಾಮಿ ನಿಷ್ಠೆಯ ಆವರಣದಲ್ಲಿ ಉಳಿದುಬಿಡುವ ಅಪಾಯವಿದೆ.
* ಯಡಿಯೂರಪ್ಪ ಇಷ್ಟು ದಿನ ದಲಿತರ ಮನೆಗೆ ಹೋಗಿಲ್ಲವೇ? ಅವರ ಮನೆಯಲ್ಲಿ ನೀರು ಕುಡಿದಿಲ್ಲವೇ? ಅವರ ಪ್ರತಿನಿಧಿಸುವ ಬಿಜೆಪಿಯಲ್ಲಿ ಕೆ.ಬಿ.ಶಾಣಪ್ಪ, ರಮೇಶ್ ಜಿಗಜಿಣಗಿ, ಅರವಿಂದ ಲಿಂಬಾವಳಿ, ಆನೇಕಲ್ ನಾರಾಯಣ ಸ್ವಾಮಿಯಂತಹ ಪ್ರಮುಖ ದಲಿತ ನಾಯಕರುಗಳಿದ್ದಾಗ್ಯೂ ಅವರ ಮನೆಗಳಲ್ಲಿ ಊಟ ಮಾಡಿಲ್ಲವೇ? ಕನಿಷ್ಠ ಕಾಫಿಯನ್ನಾದರೂ ಕುಡಿದಿಲ್ಲವೆ? ಹಾಗೊಮ್ಮೆ ಮಾಡಿದ್ದರೂ ಈಗ ದಲಿತರ ಮನೆಗೆ ಹೋಗಿ ಊಟ ಮಾಡುವುದೇ ಒಂದು ಅಜೆಂಡಾ ಏಕೆ?

ದಲಿತರ ಮನೆ ಮಕ್ಕಳ ಮದುವೆ ನಡೆದರೆ ಇಡೀ ಹಳ್ಳಿಯ ಅಂಗಡಿ ಮುಂಗಟ್ಟುಗಳು, ದೇವಸ್ಥಾನಗಳು ಬಾಗಿಲುಮುಚ್ಚಿಕೊಳ್ಳುವ, ಇಂದಿಗೂ ಬೋರ್ ವೆಲ್‌ಗಳಲ್ಲಿ ಮೇಲ್ಜಾತಿಯ ಮಂದಿಯೆಲ್ಲಾ ನೀರು ಹಿಡಿದ ಮೇಲೆ ದಲಿತರು ನೀರು ಹಿಡಿಯಬೇಕಾದ, ದೇವಸ್ಥಾನದ ಹೊರ ನಿಂತೇ ಹೋಗಬೇಕಾದ, ಕ್ಷೌರಿಕನೂ ಮುಟ್ಟಲಾರದ ಘಟನೆ ಗಳು ಜೀವಂತವಾಗಿರುವಾಗ ಯಡಿಯೂರಪ್ಪ ಒಬ್ಬ ದಲಿತನ ಮನೆಯಲ್ಲಿ ಉಂಡ ಮಾತ್ರಕ್ಕೆ ಇವ್ಯಾವು ನಿಂತು ಹೋಗು ವವೇ? ನಿಜ, ನಿಮ್ಮ ಪಾಲಿಗೆ ದಲಿತರ ಮನೆಯಲ್ಲಿ ಉಣ್ಣುವುದು ಸಾಮಾಜಿಕ ಸುಧಾರಣೆಯ ಪ್ರಯತ್ನ ಭಾವಿಸೋಣ, ಆದರೆ ಇನ್ನೆಷ್ಟು ಕಾಲ ನೀವು ... ಮನೆಗಳೆಂದೇ ಗುರುತಿಸಿ ಉಣ್ಣಲು ಬರುತ್ತಲೇ ಇರು... ಯಾಕೆ ನಾನೊಬ್ಬ 'ಮನುಷ್ಯನ' ಮನೆಗೆ ಹೋ... ಮನುಷ್ಯನಾಗಿ, ಪ್ರಚಾರವಿಲ್ಲದೆ, ಅಜೆಂಡಾಗಳಿಲ್ಲದ... ಸಂಚುಗಳಿಲ್ಲದೆ ಎಂಬುದನ್ನು ದಯಮಾಡಿ ಹೇಳಬಾ... ನಡೆದುಕೊಳ್ಳಬಾರದೇಕೆ?

ದಲಿತರು ಎಂದಿಗೂ ರಾಜಕೀಯ ದಾಳಗಳ... ಬಳಸಲ್ಪಡುತ್ತಾರೆ. ಈಗ ನಡೆಯುತ್ತಿರುವುದು ಅದೇ... ಮತ್ತೆ ಅವರನ್ನು ಅವಮಾನಿಸಲಾಗುತ್ತಿದೆ. ಅವರನ್ನು ... ಹಿಡಿದು ಮೀನು ಹಿಡಿಯುವ ಕೆಲಸ ಯಡಿಯ... ಅವರಿಂದಷ್ಟೇ ಅಲ್ಲ ಎಲ್ಲಾ ರಾಜಕೀಯ ಪಕ್ಷಗಳ ... ಸ್ವರೂಪವೇ ಆಗಿರುತ್ತದೆ. ಯಡಿಯೂರಪ್ಪ... ದಲಿತನೊಬ್ಬನ ಮನೆಗೆ ಬಂದು ಊಟ -ತಿಂಡಿ... ಮಾತ್ರಕ್ಕೆ "ಎನ್ನ ಕಷ್ಟಕುಲದಲ್ಲಿ ಹುಟ್ಟಿದೆನೆಂಬ ... ಕಳೆದು ಮುಟ್ಟಿ ಪಾವನವ ಮಾಡಿ ಕೊಟ್ಟನಯ್ಯ... ಕರಸ್ಥಲಕ್ಕೆ ಲಿಂಗವ!" ಎಂದು ಹಾಡಿ ಹೊಗಳಲು, ಶ... ತಲೆಬಗ್ಗಿಸಲು ಯಡಿಯೂರಪ್ಪ ಬಸವಣ್ಣನಲ್ಲ!!

ಇತ್ತ ದಲಿತರ ಮನೆಯಲ್ಲಿ ಉಂಡು ಮಾಧ್ಯ... ಪೋಸು ಕೊಡುತ್ತಲೆ ಅತ್ತ ಹಿಂದುಳಿದ ವ... ಆಯೋಗದ ಜಾತಿ ಸಮೀಕ್ಷೆಯನ್ನು ವಿರೋಧಿಸಿ... ಹೋರಾಟ ಮಾಡುತ್ತೇನೆ ಎನ್ನುವ ಯಡಿಯೂರಪ್ಪ ತ... ಪರಂಪರಾಗತ ಸಾಮಾಜಿಕ ನ್ಯಾಯದ ವಿರೋಧಿ ಹಗೆ... ಕಾರಿಕೊಂಡಿದ್ದಾರೆ. ಇದು ಅವರ ಅಸಲಿತನ. ... ಮನೆಯಲ್ಲಿ ಊಟ-ತಿಂಡಿ ಮಾಡುವ ರಾಜ... ಗಿಮಿಕ್‌ಗಳು ತಾತ್ಕಾಲಿಕವಾಗಿ ಪ್ರಚಾರ ಪಡೆದುಕೊ... ಅಷ್ಟೇ; ದಲಿತರ ಸಾಮಾಜಿಕ, ಸಾಂಸ್ಕೃತಿಕ ಬ... ಯಾವ ಬದಲಾವಣೆಯನ್ನೂ ತರದು. ದಲಿತರ ... ಹೋಗುವುದಕ್ಕಿಂತ ದಲಿತರನ್ನು ಮನೆಯೊಳಗೆ, ಮನ... ಕರೆದುಕೊಳ್ಳಬೇಕಿದೆ. ಊರೊಳಗೆ ಹಾದಿ ಮಾ... ಬೇಕಿದೆ. (" **The political revolu... always been preceded by socia... religious revolutions"- Dr.... Ambedker)** ಸಾಮಾಜಿಕ ಮತ್ತು ಧಾ... ಕ್ರಾಂತಿಯನ್ನೆ ಹಿಂಬಾಲಿಸುವ ರಾಜಕೀಯ ಕ್ರಾ... ಅರ್ಥಪೂರ್ಣವಾಗಬೇಕಾದರೆ ಇಂದಿಗೂ ವಿಷ... ವೈದಿಕ ಸಿದ್ಧಾಂತವನ್ನೆ ಪ್ರತಿಪಾದಿಸುತ್ತಾ ಬಂದಿರುವ... ಸಾಮಾಜಿಕ ಮತ್ತು ಧಾರ್ಮಿಕ ವ್ಯವಸ್ಥೆಯನ್ನು ... ನಿಲ್ಲಬೇಕು. ಅದರ ಹೊರತಾಗಿ ಯಾರು ಎಲ್ಲಿ ಉ... ಎಲ್ಲಿ ಮಲಗಿದರೂ ಅದು ನಿರರ್ಥಕ ಮತ್ತು ... ಆತ್ಮವಂಚನೆಯ ರಾಜಕೀಯ ದೇಶಾವರಿತನವಾ...


ರಾಜಕೀಯದ ಮೆರವಣಿಗೆಯಲ್ಲಿ ದಲಿತರನ್ನು ಅ... ಮಾಡುವ ಇಂತಹ ಕೃತ್ರಿಮತೆಗಳು ಇನ್ನಾದರೂ ...

-ಎನ್.ರವಿಕುಮಾರ್, ಶಿ...

ಯೋಗಿ ಆದಿತ್ಯನ ಭಟ್ಟಂಗಿ ಮಾಧ್ಯ...

ಉತ್ತರ ಪ್ರದೇಶದಲ್ಲಿ ಯೋಗಿ ಆದಿತ್ಯನಾಥನ... ಏನೇ ನಿರ್ಧಾರ ಕೈಗೊಂಡರೂ ಅದನ್ನು ಮಾಧ್ಯ... ಕುರುಡಾಗಿ ಹೊಗಳುತ್ತಿವೆ. ಅವನ ಜನಪ್ರಿ... ಕರ್ನಾಟಕದಲ್ಲಿಯೂ ಹರಡಿದೆ ಎಂಬ ಭ್ರಾಂತಿ ಕರ್ನಾ... ಬಿಜೆಪಿಯವರಲ್ಲಿ ಈಗ ಹುಟ್ಟಿರುವುದರಿಂದ ಮ... ವಿಧಾನಸಭಾ ಚುನಾವಣೆಯ ವೇಳೆ ಯೋಗಿ... ಕರ್ನಾಟಕದಲ್ಲಿ ತಮ್ಮ ಪ್ರಚಾರಕ್ಕೆ ಕರೆಸುತ್ತಾರಂತೆ...






ಬೆಂಗಳೂರು ಅಂತರ ರಾಷ್ಟ್ರೀಯ ಸಿನಿಮೋತ್ಸವ
Bengaluru

■ ಕಿಷಣ್‌ರಾಜ್ 13

ಸಂಬಂಧಗಳ ಇಕ್ಕಟ್ಟು



ಸಂತೋಷ್ ಹಾಗು ಸತೀಶ್ ಸಹೋದರರು 1999ರಲ್ಲಿ ಒಂದು ಕಿರು ಚಿತ್ರ ಮಾಡಿದ ನಂತರ, ಮುಂಬೈನಲ್ಲಿ ವ್ಯಾಪಾರಿ ಟಿ.ವಿ. ಕಾರ್ಯಕ್ರಮಗಳಿಗೆ ಕ್ಯಾಮರಾ ಮನ್‌ಗಳಾಗಿ ದುಡಿಯತೊಡಗಿದರು. 2015ರಲ್ಲಿ ತಮ್ಮ ಮೊದಲ ಕಥಾಚಿತ್ರ ಬರೆದು ಹೊಸಿನ ವಿಚಾರವನ್ನು ನಿರ್ಮಿಸಿ-ನಿರ್ದೇಶಿಸಿದರು. ಅದರಲ್ಲಿ ನಾಯಕಿಯನ್ನು ನಗ್ನವಾಗಿ ಚಿತ್ರಿಸಿರುವ ದೃಶ್ಯಗಳನ್ನು ಕತ್ತರಿಸಿದರೆ ಮಾತ್ರವೇ ಪ್ರದರ್ಶನಕ್ಕೆ ಅನುಮತಿ ನೀಡುವುದಾಗಿ ಸೆನ್ಸಾರ್ ಮಂಡಳಿ ತಾಕೀತು ಮಾಡಿತು. ಆ ದೃಶ್ಯಗಳು ಸಿನಿಮಾದ ಕಥಾವಸ್ತುವಿಗೆ ಮುಖ್ಯವಾಗಿದೊಂದಿರುವುದರಿಂದ, ಕತ್ತರಿಸ ಲಾಗದು ಎಂದು ನಿರ್ದೇಶಕರು ವಾದಿಸಿದರೂ, ಸೆನ್ಸಾರ್ ಮಂಡಳಿ ಒಪ್ಪಲಿಲ್ಲ. ನೀಡಲಿಲ್ಲ, ಕೊನೆಗೆ ಸಹೋದರರು ಕೋರ್ಟು ಮೆಟ್ಟಿಲು ಹತ್ತಿ ಪ್ರದರ್ಶನದ ಹಕ್ಕು ಪಡೆಯಬೇಕಾಯಿತು. ಮನುಷ್ಯ ಸಂಬಂಧಗಳಲ್ಲಿರುವ ಬಿಕ್ಕಟ್ಟುಗಳು, ಸಂಬಂಧಗಳ ಸಹಜ ಸ್ಥಿತಿಯಾಗಿರುವ ಸೂಕ್ಷ್ಮವನ್ನು ತಮ್ಮ ಸಿನಿಮಾಗಳ ಮೂಲಕ ಶೋಧಿಸುವ ಉದ್ದೇಶ ಇಟ್ಟುಕೊಂಡಿರುವ ನಿರ್ದೇಶಕ ಜೋಡಿಯ ಎರಡನೇ ಚಿತ್ರವಿದು.


ಸಿನಿಮಾದ ಕಥಾಸಾರಾಂಶ

ಕೇರಳದ ಒಂದು ನಗರದ ದಲಿತ ಕಾಲೋನಿಯ ಎರಡು ಕೋಣೆ ಮನೆಯಲ್ಲಿ, ವಿಧುರನಾದ ವಿಕ್ರಮನ್ ಮತ್ತು ಅವನ ಮಗ ನಿಖಿಲ್ ವಾಸಿಸುತ್ತಿದ್ದಾರೆ. ವಿಕ್ರಮನ್ ನಾಲ್ಕನೇ ದರ್ಜೆಯ ಪೌರಕಾರ್ಮಿಕನಾಗಿ ದುಡಿದು ನಿವೃತ್ತನಾಗಿರುವವನು; ಲಕ್ವ ಹೊಡೆದಕಾರಣ, ಕೈಕಾಲು ಚಲನೆ ಕಳೆದುಕೊಂಡು ಹಾಸಿಗೆ ಹಿಡಿದಿದ್ದಾನೆ. ಸಕ್ಕರೆ ಕಾಯಿಲೆ ಕೂಡ ಅವನ ಆರೋಗ್ಯವನ್ನು ಬಾಧಿಸುತ್ತಿದೆ. ಮಗನ ಆಸರೆ ಇಲ್ಲದೆ ಅವನ ನಿತ್ಯದ ಬದುಕು ಸಾಗದು.

ನಿಖಿಲ್ ಕಂಪ್ಯೂಟರ್ ಇಂಜಿನಿಯರಿಂಗ್ ಪದವಿ ಪಡೆದು, ಕೆಲಸಕ್ಕಾಗಿ ಹುಡುಕುತ್ತಿದ್ದಾನೆ. ತಾಯಿ ತೀರಿದಾಗಿನಿಂದ ತಂದೆಯ ಶುಶ್ರೂಷೆಯ ಜವಾಬ್ದಾರಿ ಹೊತ್ತುಕೊಂಡಿರುವ ನಿಖಿಲ್, ಅದೇ ನಗರದ ಟೆಕ್‌ಪಾರ್ಕಿನಲ್ಲಿ ತನ್ನ ಪದವಿಗೆ ತಕ್ಕ ಕೆಲಸಕ್ಕಾಗಿ ಒದ್ದಾಡುತ್ತಿದ್ದಾನೆ. ನಿಖಿಲನ ಸಹಪಾಠಿ ಹಾಗು ಪ್ರೇಯಸಿ ರೀನಾ, ಮೇಲ್ವರ್ಗದ ಕ್ರಿಶ್ಚಿಯನ್ ಕುಟುಂಬದವಳು; ಅವಳ ತಂದೆತಾಯಿ ವಿದೇಶಗಳಲ್ಲಿ ವಾಸವಾಗಿದ್ದು, ನಿಖಿಲ್ ತನ್ನ ಜೊತೆಗೆ ಬಂದು, ಅಲ್ಲೇ ಕೆಲಸ ಹಿಡಿದು ನೆಲೆಸುವುದು ಅವಳ ಬದುಕಿಗೆ ಉತ್ತಮ ಆಯ್ಕೆ ಎಂದು ನಿಖಿಲ್‌ಗೆ ಮನಸ್ಸಾಲಿಯಾಗಿದೆ. ನಿಖಿಲ್, ತಂದೆಯ ಆರೈಕೆಗೆ ತನ್ನ ಕಾಲೋನಿಯಲ್ಲಿರುವ ಪರಿಚಯಸ್ಥರೊಬ್ಬನನ್ನು ಸಂಬಳಕ್ಕೆ ನೇಮಿಸಿ, ಬೆಂಗಳೂರಿಗೆ ಹೊರಡುವ ತಯಾರಿಯಲ್ಲಿದ್ದಾನೆ; ಆದರೆ, ಅವನು ಇನ್ನೂ ತಂದೆಗೆ ತಿಳಿಸಿಲ್ಲ; ಅವನಿಗೆ ಹಾಸಿಗೆ ಹಿಡಿದ ತಂದೆಯನ್ನು ತನ್ನ ಬದುಕಿನ ಸುಖಕ್ಕೋಸ್ಕರ ಬಿಟ್ಟು ಹೋಗಲೂ ಇಷ್ಟವಿಲ್ಲ; ಅಂತೆಯೇ, ದಲಿತ ಕಾಲೋನಿಯಲ್ಲೇ ತನ್ನ ಬದುಕಿನ ಸಾಧ್ಯತೆಗಳನ್ನು ಬಲಿ ಹಾಕಿಕೊಂಡಿರಲೂ ಇಷ್ಟವಿಲ್ಲ.

ವಿಕ್ರಮನ್‌ಗೆ ಇಳಿವಯಸ್ಸಿನ, ಸೋತ ಆರೋಗ್ಯದ ಕಾರಣದ ಅವಲಂಬಿ ಬದುಕು, ತೀರಾ ಅಭದ್ರತೆಯನ್ನು ಉಂಟುಮಾಡಿದೆ; ಒಳ್ಳೆಯ ವಿದ್ಯಾಭ್ಯಾಸ ಪಡೆದಿರುವ ಮಗ, ಕೆಲಸ ಹುಡುಕಿಕೊಂಡು, ತನ್ನನ್ನು ಅನಾಥಸ್ಥಿತಿಯಲ್ಲಿ ಹಾರುವ ಹಕ್ಕಿ ಎಂಬ ಅನುಮಾನದಲ್ಲಿ ಮಗನನ್ನು ಮೂದಲಿಸಿ ಕಿರಿಕಿರಿ ಮಾಡುವನು; ಹಾಗಂತ ತನ್ನಂತೆ ಮಗ ಈ ದರಿದ್ರ ಕಾಲೋನಿಯಲ್ಲೇ ಬದುಕು ಕಳೆಯುವುದು ಬೇಡ ಎನ್ನುವ ವಾತ್ಸಲ್ಯವೂ ಇದೆ. ನಿಖಿಲ್ ಮಗನ ಸಹಜ ಉತ್ತರದಾಯಿತ್ವದಲ್ಲೇ ತಂದೆಯನ್ನು ನೋಡಿಕೊಳ್ಳುತ್ತಿದ್ದಾನೆ; ತಂದೆ ಎಂದೂ ಹೊರೆ ಎಂದು ಅವನಿಗೆ ಅನಿಸಿಲ್ಲ. ಆದರೆ, ತನ್ನ ತಾಯಿ ಕಾಮಾಲೆಯಿಂದ ಬಳಲುವಾಗ, ಆಸ್ಪತ್ರೆಗೆ ಸೇರಿಸದೇ, ನಾಟಿ ವೈದ್ಯ ಮಾಡಿಸುವ ಬೇಜವಾಬ್ದಾರಿ ತೋರಿ, ತಾಯಿಯನ್ನು ಕೊಂದವನು ಎಂಬ ಸುಪ್ತವಾದ ಸಿಟ್ಟಿದೆ; ತನ್ನನ್ನು ಸದಾ ಮೂದಲಿಸುವ ತಂದೆಗೆ ತನ್ನ ತಾಯಿ ಹಾಗು ತನ್ನ ಬದುಕಿಗಿಂತ ಈ ಮನುಷ್ಯನಿಗೆ ತನ್ನ ಮೂಗಿನ ನೇರದ ಬದುಕೇ ಹೆಚ್ಚು ಎಂಬ ಆಕ್ರೋಶವೂ ನಿಖಿಲ್‌ನಲ್ಲಿ ಎದ್ದೇಳುತ್ತದೆ.

ಒಂದು ಹೊತ್ತು ತಮಾಷೆ ಮಾಡಿಕೊಂಡು, ಲೋಕಾಭಿರಾಮದಲ್ಲಿ ಇರುವಾಗಲೇ, ಇಬ್ಬರ ನಡುವೆ ಅಸಮಾಧಾನದ ಹೊಗೆ ಎದ್ದು, ವ್ಯಂಗ್ಯ, ಮೂದಲಿಕೆಗಳ ಜಗಳ ಶುರುವಾಗುತ್ತದೆ. ಈ ಬಗೆಯ ಬಿಕ್ಕಟ್ಟಿನಲ್ಲೇ ತಂದೆ-ಮಗನ ನಡುವಿನ ಪ್ರೀತಿಗಟ್ಟಿಯಾಗುವುದು. ಈ ಹುಡುಗ ಬಿಡುಗಡೆಗಾಗಿ ತನ್ನ ಸಾವನ್ನು ಬಯಸುತ್ತಿದ್ದಾನೆ ಎಂದು ಪ್ರಾಮಾಣಿಕವಾಗಿಯೇ ನಂಬಿ, ನಿಷ್ಠೂರವಾಗಿ ಮಗನನ್ನು ನಿಂದಿಸುವುದು ವಿಕ್ರಮನ್‌ನ ಬಾಂಧವ್ಯದ ಒಂದು ಮುಖ; ತಂದೆಗೆ ತಕ್ಕ ಶುಶ್ರೂಷಾ ವ್ಯವಸ್ಥೆ ಕಲ್ಪಿಸಿ ತಾನು ಸ್ವತಂತ್ರ ಬದುಕಿಗೆ ಹೋಗುವುದರಲ್ಲಿ ತಪ್ಪೇನಿದೆ ಎನ್ನುವುದು ನಿಖಿಲನ ಸಂಬಂಧಗಳ ಕುರಿತ ಒಂದು ದೃಷ್ಟಿ -



ಒತ್ತಯಾಲ್ ಪಥ (ಇಕ್ಕಟ್ಟಿನ ಹಾದಿ), (ಮಲಯಾಳಂ, 2016)
ಚಿತ್ರಕಥೆ-ನಿರ್ದೇಶನ: ಸಂತೋಷ್ ಬಾಬುಸೇನನ್, ಸತೀಶ್ ಬಾಬುಸೇನನ್
ದೇಶ: ಭಾರತ

ಇದು ಇಬ್ಬರನ್ನೂ ಉಸಿರುಗಟ್ಟಿಸುವಂತೆ ಬಂಧಿಸಿಟ್ಟ ಗಡಸು ಎಂದು ಕಾಣುವ ಸಂವೇದನೆಗಳ ಚೆಸ್ಸಿಲ್ಲೇ ಅದಕ್ಕೆ ವಿರುದ್ಧವಾದ ಸಂವೇದನೆಗಳೂ ಇವೆ: ತಾನು ಜೀವಂತವಿದ್ದಷ್ಟು ಕಾಲ ಈ ಹುಡುಗ ಬದಲಾದರೆ ಇಲ್ಲದ ಸ್ಥಿತಿಗೆ ಬಂಧಿ ಎಂಬ ವೇದನೆ ವಿಕ್ರಮನ್‌ನದ್ದೂ; ಸಂಬಳಕ್ಕಾಗಿ ಶುಶ್ರೂಷೆ ಮಾಡುವವರಿಗೆ, ವಿಕ್ರಮನ್‌ನ ದೇಹ ಬರೀ ವಸ್ತು ಮಾತ್ರ, ತನ್ನ ಹಾಗೆ ವಾತ್ಸಲ್ಯ-ಜಗಳಗಳು ಹೆಣೆದ ಜೀವಂತ ವ್ಯಕ್ತಿಯಲ್ಲ; ತಂದೆಯ ಶುಶ್ರೂಷೆಯೂ ಬದುಕಿನ ಒಂದು ಆಯ್ಕೆ ಎನ್ನುವ ತದ್ವಿರುದ್ಧ ಸಂವೇದನೆ ನಿಖಿಲ್‌ನದ್ದು-ಕಬೀರ ಹೇಳಿದಂತೆ 'ಪ್ರೀತಿಯ ದಾರಿ ಇಕ್ಕಟ್ಟಿನದ್ದು'.

ಈ ಸಿನಿಮಾ ಯಾಕೆ ಮುಖ್ಯ

ಅರ್ಥಹೀನವಾದ, ವ್ಯಾಪಾರಿ ಸಿನಿಮಾಗಳು ಉತ್ಪಾದಿತವಾಗುತ್ತಿರುವ ಚಿತ್ರವಲಯದಲ್ಲಿ, ಭಿನ್ನವಾದ ಸೂಕ್ಷ್ಮ ಸಿನಿಮಾ ಹೇಗೆ ಮುಖ್ಯವೋ ಹಾಗೇ, ಭಿನ್ನತೆ-ಸೃಜನಶೀಲತೆಗಳ ವೈವಿಧ್ಯದಲ್ಲಿ ಜೀವಂತಿಕೆಯ ಕಾರಂಜಿ ಚಿಮ್ಮಿಸುವ ಚಿತ್ರವಲಯದಲ್ಲಿ ಸೂಕ್ಷ್ಮತೆಯ ಮತ್ತೊಂದು ಪದರವನ್ನು ತೆರೆದು ತೋರುವ ಸಿನಿಮಾ ಅಷ್ಟೇ ಮುಖ್ಯವಾಗುತ್ತದೆ! ಮಲಯಾಳಂ ಸಿನಿಮಾರಂಗವಂತೂ ಈಗ ಸೃಜಶೀಲತೆಯ ಸಮೃದ್ಧ ವೈವಿಧ್ಯದಲ್ಲಿ ನಳನಳಿಸುತ್ತಿದೆ. ವಿಧು ವಿನ್ಸೆಂಟ್ ದಲಿತ ಪೌರಕಾರ್ಮಿಕರ ಬದುಕನ್ನು ನಿರೂಪಿಸುವ 'ಮ್ಯಾನ್‌ಹೋಲ್'ನಂಥ ಸಿನಿಮಾ ಮಾಡುತ್ತಿದ್ದರೆ, ರಾಜೀವ್ ರವಿ ಹಾಲಿವುಡ್ಡಿನ ಟೊರೆಂಟಿನೋನ ಭಿನ್ನ ಸಿನಿಮಾವನ್ನು ನಿವ್ವಾಳಿಸುವಂಥಾ 'ಕಾಮಟಿಪಾದಂ' ಎಂಬ ಸಿನಿಮಾ ಮಾಡುತ್ತಿದ್ದಾನೆ. 'ನಾನ್ ಲಿಝಿ' ಎಂಬ ಸಿನಿಮಾ ಮಾಡಿ ಬೆರಗು ಮೂಡಿಸಿದ ಲಿಝೊತಲ್ಲಿಸೇರಿ 'ಡಬ್ಬಲ್ ಬ್ಯಾರಲ್' ಎಂಬ ಪಕ್ಕಾ ವ್ಯಾಪಾರಿ ಸಿನಿಮಾ ಮಾಡಿ ಮಣ್ಣುಮುಕ್ಕಿ, ಮೇಲೆದ್ದು 'ಅಂಗಮಾಲೈ ಡೈರೀಸ್' ಎಂಬ ಪೂರ ಭಿನ್ನರೀತಿಯ ಸಿನಿಮಾ ಮಾಡಿ ಬೆರಗುಗೊಳಿಸುತ್ತಾನೆ. ಖಲೀದ್ ರೆಹ್ಮಾನ್ 'ಅನುರಾಗಕರಿಕ್ಕಿನ ವೇಳ್' ಎಂಬ ವಿಲಕ್ಷಣ ಪ್ರೀತಿಯ ಸಿನಿಮಾ ಮಾಡಿ, ರೊಮ್ಯಾಂಟಿಕ್ ಸಿನಿಮಾಕ್ಕೆ ನಿತ್ಯ ವಾಸ್ತವಗಳ ಖದರನ್ನು ಹೇಗೆ ತಂದುಕೊಡಬಹುದು ಎಂದು ತೋರಿಸಿಕೊಡುತ್ತಾನೆ. ಇಷ್ಟು ಸೃಜನಶೀಲತೆ ಇಡುಕ್ಕಿರಿದಿರುವ ಲೋಕದಲ್ಲಿ, ಸತೀಶ್-ಸಂತೋಷ್, ಬಲು ಸೂಕ್ಷ್ಮವಾದ ಸಂಬಂಧಗಳ ಆಳವನ್ನು ಅನ್ವೇಷಿಸುವ ತಣ್ಣಗಿನ ಸಿನಿಮಾ ಮಾಡಿದ್ದಾರೆ. ಸಿನಿಮಾದ ದೃಶ್ಯಕಲೆಯ ಸಾಧ್ಯತೆಯ ಮತ್ತೊಂದು ಪದರವನ್ನು ಪ್ರೇಕ್ಷಕರಿಗೆ ಕಲ್ಪಿಸಿಕೊಟ್ಟಿದ್ದಾರೆ.

ಎಲ್ಲೂ ಅತಿ ಭಾವುಕವಾಗದ ಹಾಗೆ, ಎಲ್ಲೂ ಸಾಂಸಾರಿಕ ಸಂಬಂಧಗಳಲ್ಲಿನ ಒಳ್ಳೆತನ-ಕೆಟ್ಟತನಗಳನ್ನು (ಟಿವಿ ಸೀರಿಯಲ್‌ಗಳು ವಾಕರಿಗೆ ಬರುವಂತೆ ನಿರೂಪಿಸುತ್ತಿರುವ ಅತಿಯ ಇನಿತೂ ಪ್ರಭಾವಕ್ಕೆ ಬಗ್ಗದೆ) ಒಡೆದುಕಾಣುವ ಭಾವಗಳು ಎಂಬ ಸಂವೇದನೆ ಮೂಡದ ಹಾಗೆ, ದಲಿತ ಕುಟುಂಬವೊಂದರಲ್ಲಿನ ತಂದೆ-ಮಗನ ನಡುವಿನ ಅಸ್ತಿತ್ವದ ಬಿಕ್ಕಟ್ಟುಗಳ ಕಥನವಾಗಿಸುವುದು ಸವಾಲಿನ ಸಂಗತಿ. ಚಿತ್ರಕತೆಯ ಬಗೆಗಿನ ಬದ್ಧತೆ ಹಾಗು ಕ್ಯಾಮೆರಾದ ಬಳಕೆಯ ಸೂಕ್ಷ್ಮತೆಗಳ ಮೂಲಕ ಈ ಸಿನಿಮಾ, ನಮಗೆ ತಂದೆ-ಮಗನ ಸಂಬಂಧದ ಬಿಕ್ಕಟ್ಟನ್ನು, ಈ ಬಿಕ್ಕಟ್ಟೆ ಅವರ ನಡುವಿನ ಪ್ರೀತಿಗೆ ಪೋಷಕವಾಗಿರುವುದನ್ನೂ, ಸುಲಲಿತವಾಗಿ ಪ್ರೇಕ್ಷಕರ ಎದೆಗೆ ದಾಟಿಸುವ ಪ್ರಯತ್ನ ಮಾಡುತ್ತದೆ. ಬಹು ಕುಶಲ ಕ್ಯಾಮೆರಾ ತಂತ್ರಜ್ಞರಾದ ಸಂತೋಷ್-ಸತೀಶ್ ಜೋಡಿ, ನಾಲ್ಕೇ ಜಾಗಗಳ-ದಲಿತ ಕಾಲೋನಿ, ಅದರಲ್ಲಿ ವಿಕ್ರಮನ್ ಮನೆ, ಉನ್ನತ ವರ್ಗದ ಮನೆಯ ಬೀದಿ ಮತ್ತು ಆ ಮನೆಯ ಒಂದು ಕೋಣೆಯ ಒಳ ಆವರಣ- ಚಿತ್ರೀಕರಣದ ಮೂಲಕ ಈ ಬಹು ತೀಕ್ಷ್ಣವಾದ ವ್ಯಕ್ತಿ ಸಂಬಂಧಗಳನ್ನು, ಸಾಮಾಜಿಕ ವಾಸ್ತವತೆಯ ಕಥನವಾಗಿಯೂ ನಿರೂಪಿಸಿಬಿಡುವಷ್ಟು ದೃಶ್ಯ ಪ್ರತಿಮೆ ಕಟ್ಟಿದ್ದಾರೆ.

ಎಷ್ಟೇ ಬಣ್ಣಿಸಿದರೂ, ಉತ್ತಮ ಸಿನಿಮಾಗಳನ್ನು ನೋಡಿಯೇ ಅನುಭವಿಸಬೇಕು! ಇದೂ ಅಂಥಾ ಒಂದು ಸಿನಿಮಾ. ■

ಮತ್ತು ಅಮಿತ್ ಷಾ ಮೇಲೆ ಕರ್ನಾಟಕದ ಕೇಸರಿ ಪಾಳಯಕ್ಕೆ ಈಗ ನಂಬುಗೆ ಕಡಿಮೆಯಾಗಿರುವಂತಿದೆ. ಯಡ್ಡಿಯ ಮೇಲಂತೂ ಈಗ ಲಿಂಗಾಯತರೇ ನಂಬಿಕೆ ಕಳೆದುಕೊಂಡಿದ್ದಾರಂತೆ. ಆದರೆ ವಾಸ್ತವವಾಗಿ, ಇತ್ತೀಚೆಗೆ ಉತ್ತರ ಪ್ರದೇಶದಲ್ಲಿ ದಲಿತರ ಮತ್ತು ಅಲ್ಪಸಂಖ್ಯಾತರ ಮೇಲೆ ವಿಪರೀತವಾಗಿ ಹೆಚ್ಚಿರುವ ಅತ್ಯಾಚಾರದ ಫಲವಾಗಿ ಯೋಗಿಯ ಜನಪ್ರಿಯತೆ ತೀವ್ರ ಕುಸಿದಿದೆ. ಒಂದು ವೇಳೆ ಈಗ ಯುಪಿಯಲ್ಲಿ ಮತ್ತೆ ವಿಧಾನಸಭಾ ಚುನಾವಣೆ ನಡೆದರೆ ಬಿಜೆಪಿ ನೂರು ಸೀಟು ಸಹ ಗೆಲ್ಲಲಿಕ್ಕಿಲ್ಲ ಎಂದು ರಾಜಕೀಯ ವಿಶ್ಲೇಷಕರು ಹೇಳುತ್ತಿದ್ದಾರೆ. ಒಟ್ಟಾರೆ ಬಿಜೆಪಿಯವರದ್ದು ಈಗ ತುಂಬಾ ನಾಜೂಕು ಸ್ಥಿತಿ.

ಕಳೆದ ತಿಂಗಳು ಯೋಗಿ ಸರಕಾರ ಯುಪಿಯಲ್ಲಿ ಸರಕಾರಿ ಹಾಗೂ ಶಾಲೆಗಳ 15 ದಿನ ರಜೆ ಕಡಿತಗೊಳಿಸಿದ್ದಕ್ಕಾಗಿ ಹೊಗಳಿಕೆಯ ಸುರಿಮಳೆಯಾಯಿತು ಹಾಗೂ ಇತರ ರಾಜ್ಯಗಳೂ ಅದನ್ನು ಅನುಸರಿಸಬೇಕು ಎಂದು ಜನರ ಬೇಡಿಕೆ ಬಂತು. ಆದರೆ ಜನರು ಇಲ್ಲಿ ಮೂಲ ವಿಷಯವನ್ನೇ ಗಮನಿಸಿಲ್ಲ.

ಉತ್ತರ ಪ್ರದೇಶದಲ್ಲಿ ಅಖಿಲೇಶ್ ಸರ್ಕಾರ ಇದ್ದಾಗ ಶಾಲೆಗಳಿಗೆ ಹಾಗೂ ಸರಕಾರಿ ಕಚೇರಿಗಳಿಗೆ ಒಟ್ಟು 46 ದಿನ ರಜೆಗಳಿದ್ದವು. ಅವುಗಳಲ್ಲಿ ಯೋಗಿ ಕೇವಲ 15 ದಿನ ಕಡಿತಗೊಳಿಸಿದ್ದು, ಅಂದರೆ ಇನ್ನೂ ಮೂವತ್ತೊಂದು ದಿನ ರಜೆ ಉಳಿದುಕೊಂಡಿವೆ. ಇದಕ್ಕೆ ಹೋಲಿಸಿದರೆ ಕರ್ನಾಟಕದಲ್ಲಿ ಶಾಲೆಗಳಿಗೆ ಹಾಗೂ ಸರಕಾರಿ ಕಚೇರಿಗಳಿಗೆ ಒಟ್ಟು ರಜೆ ಇರುವುದು ಕೇವಲ 21 ದಿನ ಮಾತ್ರ. ಇದರಲ್ಲಿ ಆದಿತ್ಯವಾರ ಬರುವ ಹಬ್ಬ ಹಾಗೂ ಬ್ಯಾಂಕುಗಳಿಗೆ ಮಾತ್ರ ಇರುವ ವಾರ್ಷಿಕ ಲೆಕ್ಕಾಚಾರ ರಜೆ ಸೇರಿಲ್ಲ. ಇದಕ್ಕೆ ಹೋಲಿಸಿದರೆ ಉತ್ತರ ಪ್ರದೇಶದಲ್ಲಿ ಇನ್ನೂ ಹತ್ತು ದಿನ ರಜೆ ಹೆಚ್ಚು ಇದೆ. ಈ ಹೆಚ್ಚಿನ ಹತ್ತು ದಿನ ರಜೆಗಳನ್ನೂ ಯೋಗಿ ಕಡಿಮೆ ಮಾಡಿದರೆ ಆಗ ಅವನನ್ನು ಸಮರ್ಥ ಆಳಿತಗಾರ ಎಂದು ಒಪ್ಪಬಹುದು.

ಒಂದು ವೇಳೆ ಉತ್ತರ ಪ್ರದೇಶದಲ್ಲಿ ಮೊದಲು ಬಿಜೆಪಿ ಆಳಿತವಿದ್ದು ಅವರು 46 ದಿನ ರಜೆ ಕೊಟ್ಟಿದ್ದರೆ ಹಾಗೂ ಇದನ್ನೇ ಕಾಂಗ್ರೆಸ್- ಅಖಿಲೇಶ್-ಮಾಯಾವತಿ ಸರಕಾರ ಕಡಿತಗೊಳಿಸಿದ್ದರೆ ಸಂಘ ಪರಿವಾರದ ಪ್ರತಿಕ್ರಿಯೆ ಹೇಗಿರುತ್ತಿತ್ತು ಗೊತ್ತೇ? ಹಿಂದೂ ಸಂತರ ಹಾಗೂ ಗಣ್ಯರ ಜಯಂತಿಯ ರಜೆ ಕಡಿತಗೊಳಿಸಿ ರಾಜ್ಯ ಸರಕಾರ ಅಲ್ಪಸಂಖ್ಯಾತರ ತುಷ್ಟೀಕರಣಕ್ಕೆ ತೊಡಗಿದೆ ಹಾಗೂ ಹಿಂದೂ ಗಣ್ಯರ ರಜೆ ಕಡಿತದಿಂದ ಹಿಂದೂಗಳ ಧಾರ್ಮಿಕ ಭಾವನೆಗಳಿಗೆ ಭಯಂಕರ ಧಕ್ಕೆಯಾಗಿದೆ ಎಂದು ಬೊಬ್ಬಿರಿಯುತ್ತಾ ಬೀದಿಗಿಳಿದು ಸರಕಾರಿ ಆಸ್ತಿಪಾಸ್ತಿ ನಾಶ ಮಾಡಿ ತಮ್ಮ ರೋಷ ತೋರಿಸದೇ ಬಿಡುತ್ತಿರಲಿಲ್ಲ.

ಕೇರಳದಲ್ಲಿ ಓಣಂ ಹಬ್ಬವನ್ನು ಎಲ್ಲಾ ಮಲೆಯಾಳಿಗಳು ಬಲೀಂದ್ರನ ಮರಳುವಿಕೆಯ ದಿನವಾಗಿ ಆಚರಿಸಿದರೆ ಬಿಜೆಪಿ ಮತ್ತು ಆರೆಸ್ಸೆಸ್‌ನವರು ಓಣಂ ಹಬ್ಬವನ್ನು ವಾಮನ ಜನ್ಮ ದಿನವಾಗಿ ಆಚರಿಸಬೇಕು ಎಂದು ಕಿರುಚಾಡಿದ್ದು ಜನರಿಗೆ ನೆನಪಿದೆ. ಉತ್ತರ ಭಾರತದ ಬಿಜೆಪಿ ಆಡಳಿತದ ಕೆಲವು ರಾಜ್ಯಗಳಲ್ಲಿ ನರಹಂತಕ ಪರಶುರಾಮನ ಜಯಂತಿಯನ್ನೂ ಆಚರಿಸಲಾಗುತ್ತದೆ. ಮುಂದೊಮ್ಮೆ ಆ ರಾಜ್ಯಗಳಲ್ಲಿ ಮತ್ಸ್ಯ, ಕೂರ್ಮ, ವರಾಹ, ನರಸಿಂಹ, ಕಲ್ಕಿ ಜಯಂತಿಗಳನ್ನೂ ಆಚರಿಸಬಹುದು. ಜತೆಗೆ ದ್ರಾವಿಡರ ನಾಗಪಂಚಮಿಗೆ ಎದುರಾಗಿ ವೈಷ್ಣವರ ಗರುಡ ಪಂಚಮಿಯನ್ನೂ ಆಚರಿಸಬಹುದು. ಗೋವನ್ನು ರಾಜಕೀಯ ಲಾಭಕ್ಕೆ ಬಳಸಿರುವ ಬಿಜೆಪಿ ಸದ್ಯದಲ್ಲಿಯೇ "ಕಾಮಧೇನು ಜನ್ಮದಿನ" ಎಂದು ಒಂದು ಹೊಸ ರಜೆ ಘೋಷಿಸಿದರೂ ಆಶ್ಚರ್ಯವಿಲ್ಲ.

-ಕೇಶವರಾಮ ಅಡಪ, ಕಿನ್ನಿಗೋಳಿ

ಯಡ್ಡಿ ಮತ್ತು ಸೋಬ ಎಂಬ ಸೋಗಲಾಡಿಗಳು

ಕರ್-ನಾಟಕ ಬಿಜೆಪಿ ಪಕ್ಷದ ಅತ್ಯಂತ ಸೂಕ್ಷ್ಮ ಮನಸ್ಸಿನ, ಹೆಣ್ಣು ಹೃದಯದ, ಎಲ್ಲದಕ್ಕೂ ಕರಗುವ ವ್ಯಕ್ತಿಯೆಂದರೆ ಅದು ಸೋಬಾ ಕರಂದ್ಲಾಜೆ. ಹೆಣ್ಣಿನ ಮೇಲೆ ದೌರ್ಜನ್ಯವಾಗಿರಲಿ, ಅತ್ಯಾಚಾರವಾಗಿರಲಿ (ಆದರೆ ಸಾಬರು ಇದನ್ನು ಮಾಡಿದ್ದಾರೆಂಬ ಗುಲ್ಲು ಹಬ್ಬಿರುವುದು ಇಲ್ಲಿ ಮುಖ್ಯ, ಹಿಂದೂಗಳೇ ಇಲ್ಲಾ ತನ್ನ ಪಕ್ಷೀಯರೇ ಮಾಡಿದ್ದರೆ ಇಲ್ಲಿ ಮಾಫಿ ಉಂಟು) ತಕ್ಷಣಕ್ಕೆ ಬೀದಿಗಿಳಿಯುವ ಹೆಣ್ಣೆಂದರೆ ಅದೇ ಸೋಬಾ ಕರಂದ್ಲಾಜೆ. ಇಂತಹ ಮೃದುವಾದ ಹೃದಯದ ಹೆಣ್ಣಿಗೆ ಶೋಷಿತ ದಲಿತರೆಂದರೂ ಭಾರೀ ಅಕ್ಕರೆ. ಇದೇ ಕಾರಣಕ್ಕೆ ಮೊನ್ನಿನ ಗುಂಡ್ಲುಪೇಟೆ- ನಂಜನಗೂಡು ಉಪಚುನಾವಣೆ ಸಮಯದಲ್ಲಿ ಮಾತನಾಡುತ್ತಾ "ಇವೆರಡೂ ಚುನಾವಣೆಗಳನ್ನು ನಾವೇ ಗೆದ್ದು ಬರುವುದು ನಿಶ್ಚಿತ. ಈ ಗೆಲುವನ್ನು ನಾವು ಭೀಮರಾವ್ ಅಂಬೇಡ್ಕರರಿಗೆ ಅರ್ಪಿಸುತ್ತೇವೆ" ಎಂದು ಮುಂಗಡವಾಗಿ ಹೇಳಿಕೊಂಡಿತ್ತು. ಆದರೆ ಅಂಬೇಡ್ಕರರ ವಿಚಾರ ಹಾಗಿರಲಿ ನಂತರದ ಚುನಾವಣಾ ಫಲಿತಾಂಶ ಬಿಜೆಪಿಯೊಳಗೆ ಸೋತ ಯಡ್ಡಿಯನ್ನು ಬಗ್ಗುಬಡಿಯಲು ಹೊಸ ಕಚ್ಚಾಟಕ್ಕೇ ನಾಂದಿ ಹಾಡಿತು. ಇಂತಹ ಕರಗೋ ಕರ್ಪೂರವತಿ ಸೋಬಾ ಮೊನ್ನಿನ ಬಿಜೆಪಿ ಕಾರ್ಯಕಾರಿಣಿ ಸಭೆಯಲ್ಲಿ ಪಕ್ಷದ ಹಿರಿಯ ರಾಜಕಾರಣಿ ಶ್ರೀನಿವಾಸಪ್ರಸಾದರನ್ನು ದಲಿತ ನಾಯಕನೆಂದು ಕರೆದು ಬಹಿರಂಗವಾಗಿಯೇ ಉಗಿಸಿಕೊಂಡಿದ್ದಳು: ಒಂದೆಡೆ ದಲಿತ ಪ್ರೇಮದ ನಾಟಕಗಳು ಇನ್ನೊಂದೆಡೆ ಬಿಟ್ಟುಬಿಡಲಾಗದ ಕೀಳು ಮನಸ್ಥಿತಿಯ ಪ್ರದರ್ಶನ ಥೂ ಇವುಗಳ ನಾಟಕಕ್ಕಿಷ್ಟು?

ಇನ್ನು ಯಡ್ಡಿಯಂತೂ ರಾಜ್ಯದ ಮುಖ್ಯಮಂತ್ರಿಯಾಗಿ ಅಧಿಕಾರಕ್ಕೇರಿದಾಕ್ಷಣ ಕೊಠಡಿಯಲ್ಲಿದ್ದ ಅಂಬೇಡ್ಕರ್ ಭಾವಚಿತ್ರವನ್ನೇ ಕಿತ್ತು ಹೊರಗೆಸೆದಂತಹ ನೀಚ. ಇದೀಗ ಜಾತಿವಾರು ಜನಗಣತಿಯಲ್ಲಿ ದಲಿತರ ಓಟು ಕಡೆಗಣಿಸಲಾಗದಂತಹ ಮಹತ್ವವನ್ನು ಪಡೆದಿರುವ ಸುಳಿವು ಸಿಕ್ಕ ಚೆಡ್ಡಿಗಳು ದಲಿತರ ಓಲೈಕೆಯ ನಾಟಕಕ್ಕಿಳಿದಿವೆ. (ಸೂಲಿಬೆಲೆಯಂತವುಗಳು ರಾಮಾನುಜಾಚಾರ್ಯರ ಜೊತೆಗೆ ಸಂಬಂಧವೇ ಇರದ ಅಂಬೇಡ್ಕರರ ಚಿತ್ರವನ್ನು ಛಾಪಿಸಿ



ಅಲ್ಲಲ್ಲಿ ಸಭೆಗಳನ್ನು ನಡೆಸುತ್ತಿವೆ.) ರಾಜ್ಯದ ಅಲ್ಲಲ್ಲಿ ಮಳೆರಾಯ ತನ್ನ ಕೆಲಸವನ್ನು ಸುರುವಿಟ್ಟುಕೊಂಡು 'ಜನಗಳೇ ರೆಡಿಯಾಗಿ ನಾನು ಬರುತ್ತಿದ್ದೇನೆ' ಎಂಬ ಸುಳಿವನ್ನು ಕೊಡುತ್ತಿರುವ ಸಮಯದಲ್ಲಿ ಸೀಮೆಗಿಲ್ಲದ ಬರ ಅಧ್ಯಯನ ಪ್ರವಾಸಕ್ಕೆ ತೊಡಗಿಕೊಂಡ ಯಡ್ಡಿ ಪಡೆ ಈ ಸಮಯದಲ್ಲಿ ತನ್ನದೇ ಪಕ್ಷೀಯನಾದ ದಲಿತನೊಬ್ಬನ ಮನೆಯಲ್ಲಿ ಊಟದ ಕಾರ್ಯಕ್ರಮವನ್ನು ದೊಡ್ಡ ಮಹತ್ಸಾಧನೆಯೆಂಬ ಪ್ರಚಾರಕೊಟ್ಟುಕೊಂಡು ಆಯೋಜಿಸಿತ್ತು, ನಾವು ದಲಿತರನ್ನು ನಮ್ಮ ಅಣ್ಣತಮ್ಮಂದಿರಂತೆ ನೋಡುತ್ತೇವೆ ಎಂದು ಎಲ್ಲರೆದುರು ತೋರ್ಪಡಿಸಿಕೊಳ್ಳಲು ಹೆಣೆಯಲಾದ ಈ ನಾಟಕವೇನೋ ನಡೆಯಿತಾದರೂ ಇದು ನಿರೀಕ್ಷೆಗಿಂತ ದೊಡ್ಡ ಮಟ್ಟದಲ್ಲೇ ಜನರ ಮನಸ್ಸಿಗೆ ನಾಟುವಂತಾದವು ಅಂದರೆ ವಾಸ್ತವ ಚಿತ್ರಣವನ್ನು ನೂರಕ್ಕೆ ನೂರರಷ್ಟು ಪರಿಪೂರ್ಣ ರೀತಿಯಲ್ಲಿ ಈ ಪ್ರಹಸನ ಜನರಿಗೆ ನೀಡಿತೇ ಹೊರತು ಬ್ರಾಹ್ಮಣ್ಯವನ್ನೇ ಉಂಡು ಉಡುವ ಚೆಡ್ಡಿಗಳ ಪ್ಲಾನ್ ಅವರಿಗೇ ತಿರುಗುಬಾಣವಾಯಿತು.

ಈ ದರಿದ್ರ ಚೆಡ್ಡಿಗಳು ದಲಿತರ ಮನೆಯಲ್ಲಿ ಅವರೇ ಕೈಯ್ಯಾರೆ ಮಾಡಿದಂತಹ ಊಟವನ್ನು ಉಣ್ಣದೇ ಯಾವುದೋ ಹೋಟೆಲಿನಿಂದ ತಂದಂತಹ ಅದೇ ಹೋಟೆಲಿನವರ ಪಾತ್ರೆ ಚಮಚಗಳನ್ನು ಬಳಸಿಕೊಂಡು ದಲಿತರ ಮನೆಯಲ್ಲಿ ಕೂತು ಉಂಡರೆಷ್ಟು ಬಿಟ್ಟರೆಷ್ಟು? ಅಸಲಿ ಸಂಗತಿಯೆಂದರೆ ಅವರು ಈ 'ಬಿಲ್ಡಪ್' ಕಾರ್ಯಕ್ರಮವನ್ನು ಆಯೋಜಿಸದೇ ಹೊರಗಡೆ ಹೋಟೆಲಿನಲ್ಲೋ ಇಲ್ಲಾ ಬ್ರಾಹ್ಮಣನೊಬ್ಬನ ಮನೆಯಲ್ಲೋ ಉಂಡಿದ್ದರೆ ಯಾರಿಗೂ ಸಮಸ್ಯೆಯೇ ಇರುತ್ತಿರಲಿಲ್ಲ. ಆದರೆ ಕುಮಾರಸ್ವಾಮಿಯ ಗ್ರಾಮ ವಾಸ್ತವ್ಯ ಹಾಗು ದಲಿತರ ಮನೆ ವಾಸ್ತವ್ಯದ ಕಲ್ಪನೆಯನ್ನೇ ಮರುಸೃಷ್ಟಿಸಿಕೊಂಡು ದಲಿತರ ಮನೆಗೆ ಬಂದೂ ಕೂಡ ಮಡಿ ಮೈಲಿಗೆ ಹಾಗು ಸಂವಿಧಾನ ವಿರೋಧಿ ಅಸ್ಪೃಶ್ಯತೆಯನ್ನು ಹೊರಗಿನ ಊಟವನ್ನು ಉಣ್ಣುವುದರ ಮೂಲಕ ಆಚರಿಸಿ ತಮ್ಮದು ಎಂಥಾ ಬದಲಾಗದ ನೀಚ ಮನಸ್ಥಿತಿ ಎಂಬುವುದನ್ನು ಜಗತ್ತಿಗೇ ಮತ್ತೊಮ್ಮೆ ತೋರಿಸಿಕೊಟ್ಟರು.

ದಲಿತರ ಮನೆಯ ನೀರು ಅಥವ ಅನ್ನ ನಿಮಗೆ ಇಷ್ಟವಿಲ್ಲದಿದ್ದರೆ ದಯವಿಟ್ಟು ಬರಬೇಡಿ. ನಿಮ್ಮ ಮೈಲಿಗೆ ಮಡಿ ನಿಮಗೇ ಇರಲಿ. ಆದರೆ, ಬರುವ ನಾಟಕವಾಡಿ ಆ ಮೂಲಕ ಇಡೀ ದಲಿತ ಸಮುದಾಯಕ್ಕೆ ಅವಮಾನ ಮಾಡಬೇಡಿ. ನಿಮ್ಮ ಕೊಳಕು ಮನಸ್ಥಿತಿಗೆ ನಮ್ಮೆಲ್ಲರ ಧಿಕ್ಕಾರ!

-ಶಂಕರ್, ಬ್ರಹ್ಮಾವರ

ನಿಮ್ಮ ಅನಿಸಿಕೆಗಳನ್ನು lankesh70@rediffmail.com ಗೆ ಮಿಂಚಂಚೆ ಅಥವಾ ಬರಹ ತಂತ್ರಾಂಶದಲ್ಲಿ ಕಳುಹಿಸಬಹುದು. ನಿಮ್ಮ ಪ್ರತಿಕ್ರಿಯೆಗಳನ್ನು 9980331427 ನಂಬರಿಗೂ ಚಿಕ್ಕದಾಗಿ ಮತ್ತು ಚೊಕ್ಕವಾಗಿ SMS ಕಳುಹಿಸಬಹುದು.

Registered No.RNP/KA/BGS/2036/2017-19 Posted at :BGPSO, Mysore Road, Bangalore-26 Thursday R B P LANKESH, Kannada Weekly Price Rs. 15/- 07-06-2017 RNI No. KARKAN20

ಲಂಕೇಶ್ ಮೊಮ್ಮಕ್ಕಳು ಸಿನಿಮಾರಂಗಕ್ಕೆ

ಪಿ.ಲಂಕೇಶರ ಇಬ್ಬರು ಮೊಮ್ಮಕ್ಕಳು ಸಿನಿಮಾರಂಗಕ್ಕೆ ಪಾದಾರ್ಪಣೆ ಮಾಡುತ್ತಿದ್ದಾರೆ. ಕವಿತಾ ಲಂಕೇಶ್ ಅವರ 12 ವರ್ಷ ವಯಸ್ಸಿನ ಪುತ್ರಿ ಇಶಾ ಮತ್ತು ಇಂದ್ರಜಿತ್ ಲಂಕೇಶರ 16 ವರ್ಷ ವಯಸ್ಸಿನ ಪುತ್ರ ಸಮರ್ಜಿತ್ 'ಸಮರ್ ಹಾಲಿಡೇಸ್' ಎಂಬ ಸಿನಿಮಾದಲ್ಲಿ ಪ್ರಮುಖ ಪಾತ್ರವಹಿಸಿದ್ದಾರೆ. ಈ ಸಿನಿಮಾದ ಕತೆಯನ್ನು ಬರೆದಿರುವ ಕವಿತಾ ಅವರೇ ಅದನ್ನು ನಿರ್ದೇಶಿಸುತ್ತಿದ್ದಾರೆ. ಸುಮನ್ ನಗರ್‌ಕರ್ ಮತ್ತು ನಂದಕುಮಾರ್ ಕೂಡ ಈ ಸಿನಿಮಾದಲ್ಲಿ ನಟಿಸುತ್ತಿದ್ದಾರೆ. ಈಗಾಗಲೇ ಬೆಂಗಳೂರಿನಲ್ಲಿ ಕೆಲವು ದಿನಗಳ ಶೂಟಿಂಗ್ ಮುಗಿದಿದ್ದು ಸದ್ಯ ಚಿಕ್ಕಮಗಳೂರಿನ ಕೊಪ್ಪ ಸುತ್ತಮುತ್ತ ಚಿತ್ರೀಕರಣ ಮುಂದುವರೆದಿದೆ.



ಈ ಸಿನಿಮಾ ಏಕಕಾಲಕ್ಕೆ ಕನ್ನಡ ಮತ್ತು ಇಂಗ್ಲಿಷ್‌ನಲ್ಲಿ ಮೂಡಿಬರುತ್ತಿದೆ. ಬೇಸಿಗೆ ರಜೆಯ ದಿನಗಳಲ್ಲಿ ಮಕ್ಕಳು ಆಡುವ ಆಟಗಳು ಮತ್ತು ಮಾಡುವ ಸಾಹಸದ ಸುತ್ತ ಕತೆಯನ್ನು ಹೆಣೆಯಲಾಗಿದೆ. ಮಕ್ಕಳೇ ಮುಖ್ಯ ಪಾತ್ರ ವಹಿಸಿದ್ದ 'ದೇವೀರಿ', 'ಬಂಬ' ಮತ್ತು 'ಕರಿಯ ಕಣ್ಬಿಟ್ಟ' ಎಂಬ ಮೂರು ಸಿನಿಮಾಗಳನ್ನು ಈ ಹಿಂದೆ ಕವಿತಾ ನಿರ್ದೇಶಿಸಿದ್ದರು. "ಆ ಮೂರು ಸಿನಿಮಾಗಳಲ್ಲಿ ಮಕ್ಕಳು ಪ್ರಮುಖ ನಟರಾಗಿದ್ದರೂ ಅವು 'ಮಕ್ಕಳ ಸಿನಿಮಾ' ಆಗಿರಲಿಲ್ಲ. ಆದರೆ 'ಸಮರ್ ಹಾಲಿಡೇಸ್' ಅಪ್ಪಟ ಮಕ್ಕಳ ಸಿನಿಮಾ" ಎನ್ನುತ್ತಾರೆ ಕವಿತಾ. 'ಕರಿಯ ಕಣ್ಬಿಟ್ಟ' ಸಿನಿಮಾದ ಮೂಲಕ ಚಿತ್ರರಂಗಕ್ಕೆ ಎಂಟ್ರಿ ಕೊಟ್ಟಿದ್ದ ಬಾಲ ನಟ ಪ್ರದ್ಯುಮ್ನ ಅದಕ್ಕಾಗಿ 2013ರಲ್ಲಿ ರಾಜ್ಯ ಸರ್ಕಾರದಿಂದ ಅತ್ಯುತ್ತಮ ಬಾಲ ನಟ ಪ್ರಶಸ್ತಿ ಪಡೆದಿದ್ದ ಆತನೂ ಈ ಚಿತ್ರದಲ್ಲಿ ಒಂದು ಪಾತ್ರ ನಿರ್ವಹಿಸುತ್ತಿದ್ದಾನೆ.

ಸುಳ್ಳೇ ಸುಳ್ಳು ಕುರುಕ್ಷೇತ್ರ

ದರ್ಶನ್ ನಟನೆಯ 50ನೇ ಸಿನಿಮಾದ ಬಗೆಗಿನ ಸುಳ್ಳು ಸುದ್ದಿಗೆ ನಿರ್ದೇಶಕರು ಬೇಸತ್ತು ಹೋಗಿದ್ದಾರೆ. ಸಿನಿಮಾ ತಂಡದಿಂದ ಯಾವುದೇ ಅಧಿಕೃತ ಮಾಹಿತಿ ಸಿಗದೇ ಪ್ರಚಾರ ಮಾಡುತ್ತಿರುವುದಕ್ಕೆ ನಿರ್ಮಾಪಕ ಮುನಿರತ್ನ ಕೂಡ ಗರಂ ಆಗಿದ್ದಾರೆ. ಸಿನಿಮಾ ತಂಡವು ಹೇಳುವ ಹೊರತಾಗಿ, ಯಾವ ಸುದ್ದಿಯನ್ನೂ ನಂಬದಂತೆ ಅವರು ವಿನಂತಿಸಿದ್ದಾರೆ. ಅದಕ್ಕೆ ಕಾರಣ ಸಿನಿಮಾ ತಂಡದ ಮೇಲೆ ದರ್ಶನ್ ಮುನಿಸಿಕೊಂಡಿರುವುದು.

'ಕುರುಕ್ಷೇತ್ರ' ಸಿನಿಮಾದಲ್ಲಿ ಸುದೀಪ್, ಯಶ್ ಸೇರಿದಂತೆ ಹಲವು ನಟರು ಇರಲಿದ್ದಾರೆಂಬ ಸುದ್ದಿ ಹಬ್ಬಿತ್ತು, ಆನಂತರ ಅವರಿಲ್ಲ ಅಂತಾಯ್ತು, ಈಗ ರಾಣಾ ದಗ್ಗುಬಾಟಿ, ಅರ್ಜುನ್ ಸರ್ಜಾ, ರವಿಚಂದ್ರನ್ ನಟಿಸಲಿದ್ದಾರೆಂಬ ಗಾಸಿಪ್ ಹರಡಿದೆ. ಇದನ್ನು ಕೇಳಿದ ದರ್ಶನ್, ಯಾಕೆ ಜನರಿಗೆ ಸುಳ್ಳು ಸುದ್ದಿಯನ್ನು ನೀಡುತ್ತಿದ್ದೀರೆಂದು ಸಹಜವಾಗಿಯೇ ನಿರ್ದೇಶಕರನ್ನು ಕೇಳಿದ್ದಾರೆ. ಹಾಗಾಗಿ ಸ್ವತಃ ಮುನಿರತ್ನ ಅವರೇ ಈ ಎಲ್ಲ ಗಾಸಿಪ್‌ಗಳಿಗೆ ತಮ್ಮ ಮಾತಿನ ಮೂಲಕ ತೆರೆ ಎಳೆದಿದ್ದಾರೆ. 'ಕುರುಕ್ಷೇತ್ರ' ಸಿನಿಮಾದಲ್ಲಿ ದರ್ಶನ್ ಪ್ರಮುಖ ಪಾತ್ರದಲ್ಲಿ ನಟಿಸುತ್ತಿದ್ದಾರೆ. ನಾಗಣ್ಣ ನಿರ್ದೇಶಕ. ಮುನಿರತ್ನ ನಿರ್ಮಾಪಕ. ಇದರ ಹೊರತಾಗಿ ಬೇರೆ ಯಾರೂ ಆಯ್ಕೆಯಾಗಿಲ್ಲ, ಸದ್ಯಕ್ಕಿರುವುದು ಇದೇ ಸುದ್ದಿ ಎಂದಿದ್ದಾರೆ.

ನೋ ಎಂದ ರಮ್ಯಾ

ದುನಿಯಾ ವಿಜಯ್ ಮತ್ತು ರಮ್ಯಾ ನಟನೆಯ 'ಜಾನಿ ಮೇರಾ ನಾಮ್' ಚಿತ್ರದ ಸಿಕ್ವೇಲ್ ಮಾಡಲಾಗುತ್ತಿದೆ. 'ಜಾನಿ ಜಾನಿ ಯಸ್ ಪಾಪ' ಹೆಸರಿನಲ್ಲಿ ನಿರ್ಮಾಣವಾಗಲಿರುವ ಸಿನಿಮಾದಲ್ಲಿ ರಮ್ಯಾರನ್ನು ನಟಿಸುವಂತೆ ಕೇಳಿದ್ದಾರೆ ನಿರ್ದೇಶಕ ಪ್ರೀತಂ ಗುಬ್ಬಿ. ಮೊದಲ ಭಾಗದಲ್ಲಿ ರಮ್ಯಾ ಪಾತ್ರವೇ ಪ್ರಮುಖವಾಗಿದ್ದರಿಂದ, ಈ ಸಿನಿಮಾದಲ್ಲೂ ತಾವು ಇರಬೇಕೆಂದು ವಿನಂತಿ ಮಾಡಿಕೊಂಡರಂತೆ. ಆದರೆ, ರಮ್ಯಾ ಇದಕ್ಕೆ ಒಪ್ಪಿಲ್ಲ, ರಾಜಕೀಯ ರಂಗದಲ್ಲಿ ಬಿಜಿ ಆಗಿರುವುದರಿಂದ ಸಿನಿಮಾ ರಂಗದ ಸಹವಾಸವೇ ಬೇಡ ಎಂದಿದ್ದಾರಂತೆ. ಹಾಗಾಗಿ ರಮ್ಯಾ ಜಾಗಕ್ಕೆ ರಚಿತಾ ರಾಮ್ ಬಂದಾಗಿದೆ. ಎರಡ್ಮೂರು ವರ್ಷಗಳ ಹಿಂದೆಯೇ ರಮ್ಯಾ ಸಿನಿಮಾ ರಂಗಕ್ಕೆ ಗುಡ್‌ಬೈ ಹೇಳಿದ್ದರು. ಆನಂತರ ಅವರನ್ನು ಸಿನಿಮಾ ರಂಗಕ್ಕೆ ಕರೆತರುವ ಪ್ರಯತ್ನ ನಡೆಯಿತಾದರೂ ಅದು ಸಾಧ್ಯವಾಗಿರಲಿಲ್ಲ. ವಿಜಯ್ ಮತ್ತು ರಮ್ಯಾ ಆತ್ಮೀಯ ಸ್ನೇಹಿತರು ಆಗಿರುವುದರಿಂದ 'ಜಾನಿ ಜಾನಿ ಯಸ್ ಪಾಪ' ಸಿನಿಮಾದಲ್ಲಿ ನಟಿಸುತ್ತಾರೆಂಬ ಖಾತ್ರಿ ಇತ್ತು ಅದು ಈಗ ಸುಳ್ಳಾಗಿದೆ. ಮತ್ತೆ ಸಿನಿಮಾ ರಂಗಕ್ಕೆ ಬರಲಾರೆ ಎಂದು ರಮ್ಯಾ ಕಡ್ಡಿ ತುಂಡಾದಂತೆ ಹೇಳಿದ್ದಾರೆ.



ಈ ಸಿನಿಮಾವನ್ನು ಸ್ವತಃ ವಿಜಯ್ ಅವರೇ ನಿರ್ಮಾಣ ಮಾಡಲಿದ್ದಾರೆ. ಚಿತ್ರಕ್ಕಾಗಿ ವಿಶೇಷ ಸೆಟ್ ಕೂಡ ಹಾಕಲಾಗುತ್ತಿದೆ. ಎಲ್ಲವೂ ಅಂದುಕೊಂಡಂತೆ ಆದರೆ, ಜುಲೈನಿಂದ ಚಿತ್ರೀಕರಣ ಪ್ರಾರಂಭವಾಗಲಿದೆ.

ಯೋಗೀಶ್ ಮದುವೆ

ಈಗಷ್ಟೇ ನಟ ಅಮೂಲ್ಯ ಮದುವೆ ಮುಗಿದಿದೆ. ಅದೇ ಮದುವೆ ಮಂಟಪದಲ್ಲಿಯೇ ಮತ್ತೊಂದು ತಾರಾ ಜೋಡಿಯು ಸಪ್ತಪದಿ ತುಳಿಯಲು ಸಜ್ಜಾಗಿದೆ. 'ದುನಿಯಾ' ಸಿನಿಮಾದ ಮೂಲಕ ಸ್ಯಾಂಡಲ್‌ವುಡ್ ಪ್ರವೇಶಿಸಿದ ಲೂಸ್‌ಮಾದ ಯೋಗಿ, ತನ್ನ ಬಾಲ್ಯದ ಗೆಳತಿ ಸಾಹಿತ್ಯ ಜತೆ ಮದುವೆ ಆಗುತ್ತಿದ್ದು ನವೆಂಬರ್ 2ರಂದು ಈ ಜೋಡಿಯು ದಾಂಪತ್ಯ ಜೀವನಕ್ಕೆ ಕಾಲಿಡಲಿದೆ. ಸಾಹಿತ್ಯ ಖಾಸಗಿ ಕಂಪೆನಿಯೊಂದರ ಉದ್ಯೋಗಿ. ಯೋಗಿ ಜೊತೆ ಓದಿದಾಕೆ. ಆದರೆ, ಇವರ ಮಧ್ಯೆ ಪ್ರೀತಿ ಚಿಗುರಿದ್ದು ಮೂರ್‍ನಾಲ್ಕು ವರ್ಷಗಳ ಹಿಂದೆಯಂತೆ. ಹಾಗಾಗಿ ಇದು ಲವ್ ಕಮ್ ಅರೇಂಜ್ ಮ್ಯಾರೇಜ್ ಅಂತಿದ್ದಾರೆ ಯೋಗಿ. ಜೂ. 11ಕ್ಕೆ ನಿಶ್ಚಿತಾರ್ಥ ಮಾಡಿಕೊಳ್ಳಲಿರುವ ಯೋಗೇಶ್, ನವೆಂಬರ್‌ನಲ್ಲಿ ಸರಳವಾಗಿ ಮದುವೆ ಆಗಲಿದ್ದಾರೆ. "ನಾನು ತುಂಬಾ ಸಿಂಪಲ್ಲಾಗಿ ಇರೋಕೆ ಬಯಸುತ್ತೇನೆ. ಆಡಂಬರ ಅಂದರೆ ನನಗೆ ಆಗದು. ಹಾಗಾಗಿ ಮದುವೆ ಕೂಡ ಸರಳವಾಗಿಯೇ ಇರುತ್ತದೆ. ನಿಶ್ಚಿತಾರ್ಥಕ್ಕೆ ನನ್ನ ಆಪ್ತರಿಗಷ್ಟೇ ಆಹ್ವಾನ ನೀಡಿದ್ದೇನೆ. ಮದುವೆಗೆ ಎಲ್ಲರನ್ನೂ ಕರೆಯುತ್ತೇನೆ" ಅಂದಿದ್ದಾರೆ ಲೂಸ್‌ಮಾದ.

ಲೇಡಿಸ್ ಟೇಲರ್ ಆಗಲ್ವಂತೆ ಶರ್ಮಿ



'ನೀರ್‌ದೋಸೆ' ಸಿನಿಮಾದ ನಿರ್ದೇಶಕ ವಿಜಯ ಪ್ರಸಾದ್ ಈಗ '34-34- ಲೇಡಿಸ್ ಟೈಲರ್' ಎಂಬ ಹೆಸರಿನಲ್ಲಿ ಸಿನಿಮಾ ಮಾಡುತ್ತಿದ್ದಾರೆ. ಈ ಸಿನಿಮಾಗೆ ಶರ್ಮಿಳಾ ಮಾಂಡ್ರೆ ನಾಯಕಿ ಎಂದು ಹೇಳಲಾಗಿತ್ತು, ಈಗ ಶರ್ಮಿಳಾ ಆ ಸಿನಿಮಾದಿಂದ ಹೊರಬಂದಿದ್ದಾರೆಂಬ ಸುದ್ದಿ ಇದೆ. ಅದಕ್ಕೆ ಕಾರಣ, ಪಾತ್ರಕ್ಕಾಗಿ ಅವರು 120 ಕೆಜಿ ತೂಕ ಹೆಚ್ಚಿಸಿಕೊಳ್ಳಬೇಕಿತ್ತಂತೆ.

ಇದು ಮಹಿಳಾ ಪ್ರಧಾನ ಸಿನಿಮಾ. ನಾಯಕಿಯು ಬರೋಬ್ಬರಿ 120 ಕೆಜಿ ತೂಗಬೇಕಂತೆ. ಇದು ಶರ್ಮಿಳಾ ಅವರಿಂದ ಸಾಧ್ಯವಾಗದ ಕಾರಣ, ಸಿನಿಮಾವನ್ನೇ ಕೈಬಿಟ್ಟಿದ್ದಾರೆ. ಅದ್ಯಾಕೋ ಗೊತ್ತಿಲ್ಲ, ವಿಜಯ್ ಪ್ರಸಾದ್ ಸಿನಿಮಾಗಳು ಶುರುವಿನಲ್ಲಿ ಒಂದಿಲ್ಲೊಂದು ಕಾರಣಕ್ಕಾಗಿ ಸುದ್ದಿ ಆಗುತ್ತವೆ. 'ನೀರ್‌ದೋಸೆ' ಸಿನಿಮಾದಿಂದ ರಮ್ಯಾ ಅರ್ಧಕ್ಕೆ ಹೊರಬಂದಿದ್ದರು. ಹೊಸ ಸಿನಿಮಾಗೆ ಈ ಮೊದಲು ಬೇರೆ ನಾಯಕಿ ಆಯ್ಕೆಯಾಗಿದ್ದರು. ಅವರು ಕೂಡ ಹೊರಹೋಗಿದ್ದರು. ಈಗ ಶರ್ಮಿಳಾ ಕೂಡ ಕೈ ಕೊಟ್ಟಿದ್ದಾರೆ. ಪ[...] ನಾಯಕಿ ಯಾರು ಎಂಬ ಕುತೂಹಲ ಕೂಡ ಮೂಡಿದೆ.

ನಿಖಿಲ್ ಚಿತ್ರಕ್ಕೆ ದುಬಾರಿ ಕಾಸ್ಟ್ಯೂ[...]

ನಿಖಿಲ್ ಕುಮಾರ್ ನಟನೆಯ 'ಜಾಗ್ವಾರ್' ಸಿನಿಮಾಗೆ ಕೋಟಿ [...] ಹಣ ಸುರಿದರು ನಿರ್ಮಾಪಕ ಕುಮಾರಸ್ವಾಮಿ. ಆದರೆ, ಆ[...] ಹೇಳಿಕೊಳ್ಳುವಂತಹ ಯಶಸ್ಸು ಕಾಣಲಿಲ್ಲ, ಈಗ ಮಗನಿಗಾಗಿ ಮ[...] ಚಿತ್ರವನ್ನು ಕೈಗೆತ್ತಿಕೊಂಡಿದ್ದಾರೆ ನಿರ್ಮಾಪಕರು. ಈ ಸಿನಿಮಾ[...] ಅದ್ದೂರಿಯಾಗಿಯೇ ನಿರ್ಮಾಣ ಆಗಲಿದೆ ಅನ್ನುವುದಕ್ಕೆ ಸಾಕ್ಷಿಯಾಗಿ ಚಿತ್ರದ ಕಾಸ್ಟ್ಯೂಮ್. ನಾಯಕನ ಕಾಸ್ಟ್ಯೂಮ್‌ಗಾಗಿ ದುಬೈ, ಹಾ[...] ಮತ್ತು ಬ್ಯಾಂಕಾಕ್‌ಗೆ ಹಾರಿದ್ದಾರೆ ನಿರ್ದೇಶಕ ಚೇತನ್ ಕುಮಾರ್ ಮ[...] ನಿಖಿಲ್. ಅಲ್ಲದೇ ಈ ಸಿನಿಮಾವನ್ನು ವಿದೇಶಗಳ ಸುಂದರ [...] ಶೂಟ್ ಮಾಡುವ ಪ್ಲಾನ್ ಕೂಡ ನಿರ್ದೇಶಕರದ್ದು.

ಬೆಂಗಳೂರಿನಲ್ಲಿಯೇ ಜಗತ್ತಿನ ಎಲ್ಲಾ ಬ್ರ್ಯಾಂಡ್‌ಗಳು ಲಭ್ಯವಿದ್ದರೂ, [...] ಹಾರಿದ್ದಕ್ಕೆ ಕಾರಣವೂ ಇದೆಯಂತೆ. ಈ ಸಿನಿಮಾದಲ್ಲಿ ನಿಖಿಲ್ [...] ರೀತಿಯ ಪಾತ್ರ ಮಾಡಲಿದ್ದಾರಂತೆ. ಹಾಗಾಗಿ ಆ ಪಾತ್ರಕ್ಕೆ ವಿದೇಶಿ ಬ[...] ಬೇಕಿವೆಯಂತೆ. ಈ ಸಿನಿಮಾದಲ್ಲಿ ದೊಡ್ಡ ದೊಡ್ಡ ನಟರು ನಟಿಸಲಿ[...] ಈಗಾಗಲೇ, ಸಾಧುಕೋಕಿಲಾ, ಸುಧಾರಾಣಿ ಮತ್ತು ಸಾಯಿಕು[...] ಆಯ್ಕೆಯಾಗಿದ್ದು ಉಳಿದ ತಾರಾ ವಿವರವನ್ನು ಸದ್ಯದಲ್ಲಿಯೇ ಪ್ರಕಟಿಸಲಿ[...]

ಈ ಬಾರಿಯೂ ನಿಖಿಲ್ ಹೊಸ ನಾಯಕಿಯನ್ನೇ ತಮ್ಮ [...] ಆಯ್ಕೆ ಮಾಡಿಕೊಂಡಿದ್ದಾರೆ. ಬೆಳಗಾವಿ ಮೂಲದ ರಿಯಾ [...] ಇದೇ ಮೊದಲ ಬಾರಿಗೆ ನಾಯಕಿಯಾಗಿ ನಿಖಿಲ್ ಜತೆ[...] ಹೆಜ್ಜೆ ಹಾಕುತ್ತಿದ್ದಾರೆ.

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427
Fax : 26604536, E-mail :lankesh70@rediffmail.com